
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

22 ಮಾರ್ಚ್ 2017 ಪುಟ 20 ರೂ. 15/-






ದೋಸ್ತಿ ಖತಂ

ದುಶ್ಮನಿ ಶುರು



ಸುಮಧುರ... ಸುಹಾನಾ



ಬಳ್ಳಾರಿ: ರೆಡ್ಡಿ
ಕುಟುಂಬ ಕಲಹದಲ್ಲಿ
ಯಡ್ಡಿ ನೆರಳು?




ಹನೂರು:
ಸೋಮಣ್ಣ-ಪರಿಮಳ
ಅಡಕತ್ತರಿಯಲ್ಲಿ ಯಡ್ಡಿ ತಳಮಳ




ಮಂಡ್ಯ: ಗೂಂಡಾ
ಗಾಡ್‌ಫಾದರ್ ರಂಗಸ್ವಾಮಿ



ಕಾರವಾರ:
ಸೋಗಲಾಡಿ ಶಾಸಕ ಸೈಲ್ ಸರ್ಕಸ್ ಶುರು!!

ಸುಹಾನಾ ಹಾಡಿನ ಸಂದರ್ಭದಲ್ಲಿ ಕೆಲವು ಬೇರೆ ಸಂಗತಿಗಳ



ಸುಹಾನಾ ಮಳೆರಾಯನ ಕುರಿತ ಹಾಡೊಂದನ್ನು ಸೊಗಸಾಗಿ ಹಾಡಿದ್ದಾರೆ. ಈ ಹಾಡು ಅಥವಾ ಇಂ
ಹಾಡುಗಳನ್ನು, ಚಾನೆಲ್ ಮೊದಲು ಮುಂದಿಟ್ಟ ಪ್ರೋಮೋದಲ್ಲಿ ಏಕೆ ಹಾಕಿರಲಿಲ್ಲ? ಸುಹಾನಾ ಕಥೆ ಏನಾದ
ಆಗಲಿ, ದೇಶ ಬೇಕಾದರೆ ಎಕ್ಕುಟ್ಟಿ ಹೋಗಲಿ, ವಿವಾದವಾಗಿ ಟಿಆರ್‌ಪಿ ಹೆಚ್ಚಾದರೆ ಸಾಕು ಅಷ್ಟೇ. ನಿ
ಸದರಿ ಟಿವಿ ಚಾನೆಲ್‌ನ ಸದರಿ ಕಾರ್ಯಕ್ರಮ ನೋಡುವವರಾಗಿದ್ದರೆ ಮಾತ್ರ, ಆಕೆ ಹಾಡಿರುವ ಇ
ಹಾಡುಗಳು ಕಿವಿಗೆ ಬೀಳಬಹುದು. ಬಹುಶಃ ಅಂತಹ ಹಾಡುಗಳನ್ನೇ ಆಕೆ ಹೆಚ್ಚು ಚೆನ್ನಾಗಿ ಹಾಡಿರಲೂಬಹು
ಆದರೂ, ಅವುಗಳ ತುಣುಕನ್ನು ಹಾಕದೇ, ಸುಹಾನಾ ಎಂದರೆ ಒಬ್ಬ ಅತ್ಯುತ್ತಮ ಹಾಡುಗಾರ್ತಿ ಎ
ಬಿಂಬಕ್ಕಿಂತ, ಮುಸ್ಲಿಂ ಹೆಣ್ಣುಮಗಳಾಗಿಯೂ ಹಿಂದೂ ದೇವರನ್ನು ಸ್ತುತಿಸುವವಳು ಎಂಬ ಬಿಂಬ
ಪ್ರಧಾನವಾಗಿ ಏಕೆ ಮೂಡಿಬಂದಿತು?

ಸುಹಾನಾ 'ಎಂಬ ಸಾಗರದ ಹುಡುಗಿ ಟಿವಿಯೊಂದರ ರಿಯಾಲಿಟಿ ಷೋನಲ್ಲಿ ಹಾಡಿದ್ದಾರೆ. ಸೊಗಸಾಗಿ ಹಾಡಿದ್ದಾರೆ. ಅದೀಗ ಸುದ್ದಿ. ಚೆನ್ನಾಗಿ ಹಾಡಿದ್ದಾರೆ ಎಂಬ ಕಾರಣಕ್ಕಲ್ಲ, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವಿಡಿಯೋದಲ್ಲಿ ಆಕೆ ಬಣ್ಣದ ಸ್ಕಾರ್ಫ್ ತೊಟ್ಟು ಹಾಡುತ್ತಿದ್ದು ಮುಸ್ಲಿಂ ಹುಡುಗಿ ಎಂದು ಗೊತ್ತಾಗುತ್ತದೆ. ಅದರ ಜೊತೆಗೆ, ಅದೇ ವಿಡಿಯೋದಲ್ಲಿ ಸ್ಪರ್ಧೆಯ ತೀರ್ಪುಗಾರರು ಆಡುವ ಮಾತುಗಳಲ್ಲೂ ಆಕೆ 'ಅನ್ಯಧರ್ಮ'ದ ದೇವರನ್ನು ಸ್ತುತಿಸುವ ಹಾಡು ಹಾಡಿರುವುದು ಮತ್ತಷ್ಟು ನಿಚ್ಚಳವಾಗುತ್ತದೆ. ಸುದ್ದಿ, ಸದ್ದು, ಗದ್ದಲ ನಿರೀಕ್ಷೆಯಷ್ಟು ಆಗುತ್ತಿಲ್ಲವೆಂದು ಕೆಲವರಿಗೆ ಬೇಸರವಾದಂತಿದೆ. ಈ ಸಂದರ್ಭದಲ್ಲಿ ಕೆಲವು ಬೇರೆ ಸಂಗತಿಗಳು.

ಭೌತಿಕ, ಬೌದ್ಧಿಕ, ಆಧ್ಯಾತ್ಮಿಕ

'ತನಗೆ ಹಸಿವಾಗುತ್ತಿದೆ ಎಂಬ ಅರಿವು ಭೌತಿಕವಾದದ್ದು, ಇನ್ನೊಬ್ಬರಿಗೆ ಹಸಿವಾಗುತ್ತಿದೆ ಎಂಬ ಅರಿವು ಬೌದ್ಧಿಕ ವಾದದ್ದು, ಇನ್ನೊಬ್ಬರ ಹಸಿವನ್ನು ತನ್ನ ಹಸಿವೆಂದು ಕೊಳ್ಳುವುದು ಆಧ್ಯಾತ್ಮಿಕವಾದದ್ದು'. ಕರ್ನಾಟಕದಲ್ಲೂ ಅಸ್ತಿತ್ವದಲ್ಲಿರುವ ಮುಸ್ಲಿಂ ಸಂಘಟನೆಯೊಂದರ ಅಧ್ಯಕ್ಷರು ಹತ್ತು ವರ್ಷಗಳ ಹಿಂದೆ ಕಾರ್ಯಕ್ರಮವೊಂದರಲ್ಲಿ ಹೇಳಿದ ಮಾತಿದು. ಅದೇ ಸಭೆಯಲ್ಲಿದ್ದ ನಮ್ಮ ಗೆಳೆಯರೊಬ್ಬರು ಈ ಮಾತನ್ನು ಚರ್ಚಿಸಿದರು. 'ಸಮಾಜವಾದಕ್ಕೆ ಆಧ್ಯಾತ್ಮಿಕ ಆಯಾಮವೊಂದಿರುವುದಾದಲ್ಲಿ ಅದು ಇದೇ ಆಗಿರ ಬಹುದಲ್ಲವೇ? ಆಧ್ಯಾತ್ಮಿಕ ಆಯಾಮವಿರದ ಸಾಮಾಜಿಕ ರಾಜಕೀಯ ಬದಲಾವಣೆಯ ಸಿದ್ಧಾಂತವಿರುತ್ತದೆಯೇ?' ಮಾರ್ಕ್ಸ್‌ವಾದದ ಆಧ್ಯಾತ್ಮಿಕ ಆಯಾಮವೆಂದು ನಾವು ಗುರುತಿಸಬಹುದಾದ ಅಂಶಗಳಾವುವು? ರಷ್ಯನ್ ಕ್ರಾಂತಿ ಸಂದರ್ಭದಲ್ಲಿ ಬರೆಯಲಾದ ಜಗತ್ಪ್ರಸಿದ್ಧ ಕಾದಂಬರಿ 'ತಾಯಿ'ಯಲ್ಲಿ ನಾವು ಈ ಆಧ್ಯಾತ್ಮಕ ಅಂಶಗಳನ್ನು ಗುರುತಿಸಬಹುದಲ್ಲವೇ?

ಆಧ್ಯಾತ್ಮವೆನ್ನುವುದು ದೇವರಿಗೆ ಮತ್ತು ಧರ್ಮಕ್ಕೆ ಸಂಬಂಧಿಸಿದ ವಿಷಯ ಮಾತ್ರ ಅಲ್ಲ, ಸಮಾಜವಾದೀ ಹೋರಾಟಕ್ಕೂ ಇರುವ ಆಧ್ಯಾತ್ಮಕ ಆಯಾಮದ ಕುರಿತ ಚರ್ಚೆ ಇನ್ನೂ ಮುಂದುವರೆಯುವ ಅಗತ್ಯವಿದೆ.

ಇಸ್ಲಾಂನ ಪ್ರಚಾರ

ಕರ್ನಾಟಕದಲ್ಲೂ ಅಸ್ತಿತ್ವದಲ್ಲಿರುವ ಇನ್ನೊಂದು ಮುಸ್ಲಿಂ ಸಂಘಟನೆಯೊಂದರ ರಾಜ್ಯಾಧ್ಯಕ್ಷರೊಡನೆ 7-8 ವರ್ಷಗಳ ಕೆಳಗೆ ನಡೆದ ಇನ್ನೊಂದು ಚರ್ಚೆ. 'ಸರಿ, ನೀವು ದಮನಿತ ಸಮುದಾಯವಾದ ಮುಸ್ಲಿಮರನ್ನೇ ಪ್ರತ್ಯೇಕವಾಗಿ ಸಂಘಟಿಸುವುದಕ್ಕೆ ನಮಗೇನೂ ತಕರಾರಿಲ್ಲ, ಆದರೆ, ಮುಸ್ಲಿಂ ಧರ್ಮವೇ ಜಗತ್ತಿನೆಲ್ಲೆಡೆ ಪಸರಿಸಬೇಕು, ಎಲ್ಲರೂ ಅದನ್ನೇ ಅನುಸರಿಸಬೇಕು ಎಂದು ನೀವು ಬಯಸುತ್ತೀರಾ?'. 'ಹೌದು ಬಯಸುತ್ತೇವೆ'. 'ಇದು ಹೇಗೆ ಸರಿ? ಇದು ಮೂಲಭೂತವಾದವಲ್ಲವಾ?' 'ನೀವು ಸಮಾಜವಾದ ಇಡೀ ಜಗತ್ತಿನಲ್ಲಿ ಬರಬೇಕೆಂದು ಬಯಸುತ್ತೀರಲ್ಲವಾ?' 'ಹೌದು, ಬಯಸುತ್ತೇವೆ. ಆದರೆ..... ಅದು ಬೇರೆ'. 'ಅದು ಬೇರೆಯೇ ಇರಲಿ, ಆದರೆ ನೀವು ಇಡೀ ಜಗತ್ತು ಸಮಾಜವಾದಿ ಆಗಬೇಕೆಂದು ಬಯಸುತ್ತೀರಿ ಎನ್ನುವುದಂತೂ ನಿಜ. ಅದನ್ನು ಜಗತ್ತಿನಾದ್ಯಂತ ಪ್ರಚಾರ ಸಹ ಮಾಡುತ್ತೀರಿ. ನಮ್ಮ ಪ್ರಕಾರ ಇಸ್ಲಾಂ ಎನ್ನುವುದು, ಸಮಾಜವಾದ ಪ್ಲಸ್ ಆಧ್ಯಾತ್ಮ. ಇದು ಇನ್ನೊಂದು ಕೈ ಮೇಲೆ. ಹಾಗಾಗಿ ಅದು ಇಡೀ ಜಗತ್ತಿನಲ್ಲಿ ಪಸರಿಸಬೇಕು ಎಂದು ಬಯಸುತ್ತೇವೆ. ಇದು ಹೇಗೆ ತಪ್ಪು?'

'ಅದೇ ತಪ್ಪಲ್ಲ, ಆದರೆ, ಅದನ್ನು ಆ ಧರ್ಮದ ಅನುಯಾಯಿಗಳಾದ ತಂದೆ-ತಾಯಂದಿರಿಗೆ ಹುಟ್ಟಿದ ಕಾರಣಕ್ಕೆ ಅದನ್ನು ಯಾರೋ ಪುರೋಹಿತರು ಹೇಳುವ ರೀತಿಯಲ್ಲಿ ಆಚರಿಸಬೇಕು ಎಂಬುದು ತಪ್ಪು. ಒಂದು ವೇಳೆ ಆ ರೀತಿ ಅನುಸರಿಸದೇ ಇದ್ದಲ್ಲಿ, ಅವರ ಮೇಲೆ ಹಲ್ಲೆ ನಡೆಸುವುದು, ಒತ್ತಡ ಹಾಕುವುದು ತಪ್ಪು, ಹಾಗೆಯೇ ಇತರ ಧರ್ಮೀಯರು ಅಥವಾ ಯಾವುದೇ ಧರ್ಮಕ್ಕೆ ಸೇರಿರದವರು ನಿಮಗಿಂತ ಕೀಳೆಂದು ಭಾವಿಸುವುದು ತಪ್ಪು'. 'ಹೌದು, ನಮ್ಮೊಳಗೆ ಆ ರೀತಿಯ ಭಾವನೆ ಇದೆ. ಅದನ್ನು ಸರಿಮಾಡಿಕೊಳ್ಳಬೇಕು'. 'ಧರ್ಮದ ಕಾರಣದಿಂದ ಬೇರೆಯವರ ಮೇಲೆ ದಾಳಿ ನಡೆಸುವುದು, ಹಿಂಸೆ ನಡೆಸುವುದು ತಪ್ಪು'. 'ಹೌದು ತಪ್ಪು, ಆದರೆ, ಧರ್ಮದ ಕಾರಣದಿಂದಲೇ ನಮ್ಮ ಮೇಲೆ ದಾಳಿ ನಡೆಯುತ್ತಿದ್ದಾಗ, ನಾವು ಆತ್ಮರಕ್ಷಣೆ ಮಾಡಿಕೊಳ್ಳಲು ಪ್ರತಿದಾಳಿ ನಡೆಸಿದರೆ, ಅದನ್ನೂ ನೀವು ಧರ್ಮಕಾರಣ ಎಂದರೆ ಏನು ಮಾಡುವುದು?.'

ಚರ್ಚೆ ಮುಗಿಯಲಿಲ್ಲ, ಆದರೆ, ಚರ್ಚೆ ನಡೆಯುವುದು ಮುಖ್ಯ, ಅಲ್ಲಿಯವರೆಗೆ ಈ ನೆಲದ ಕಾನೂನು ಏನು ಹೇಳುತ್ತದೆಂಬುದನ್ನೂ ಒಮ್ಮೆ ನೋಡಬೇಕು.

ಧರ್ಮ ಪ್ರಸಾರದ ಕುರಿತು ಸಂವಿಧಾನ

ಭಾರತದ ಸಂವಿಧಾನದ 25ನೇ ಕಲಂ ಹೀಗೆ ಹೇಳುತ್ತದೆ. **Freedom of conscience and free profession, practice and propagation of religion.** ಅಂದರೆ, ಧರ್ಮದ ವಿಶ್ವಾಸಿಯಾಗುವುದು, ಆಚರಿಸುವುದು, ಅದರ ಪ್ರಸಾರ ಮಾಡುವ ಸ್ವಾತಂತ್ರ್ಯದ ಹಕ್ಕು, ಇದು ಮೂಲಭೂತ ಹಕ್ಕುಗಳ ಭಾಗ ಎಂಬುದನ್ನೂ ನಾವು ಗಮನದಲ್ಲಿಟ್ಟುಕೊಂಡರೆ, ಈ ಹಕ್ಕಿನ ವಿಶೇಷತೆ ಗೊತ್ತಾಗುತ್ತದೆ. ಆದರೂ, ಧರ್ಮ ಪ್ರಚಾರವನ್ನೇ ಅಪರಾಧ ಎಂದು ಬಿಂಬಿಸುವ ಕೆಲಸವನ್ನು ಹಿಂದೂತ್ವವಾದಿಗಳು ಮಾಡುತ್ತಿದ್ದಾರೆ. ಸಂವಿಧಾನವನ್ನು ಸದಾ ಎತ್ತಿ ಹಿಡಿದು ಮಾತನಾಡುವ ಪ್ರಗತಿಪರರೂ ಸಹ ಧರ್ಮ ಪ್ರಚಾರದ ಕುರಿತು ಕಸಿವಿಸಿ ಹೊಂದಿದ್ದಾರೆ. ಧರ್ಮ ಪ್ರಚಾರ ಅಥವಾ ತಮಗಿಷ್ಟ ಬಂದ ಧರ್ಮವನ್ನು, ಇಷ್ಟ ಬಂದ ರೀತಿಯಲ್ಲಿ (ಇನ್ನೊಬ್ಬರಿಗೆ ತೊಂದರೆಯಾಗದಂತೆ ಮತ್ತು 'ನಾಗರಿಕ' ಸಮಾಜಕ್ಕೆ ತಕ್ಕುದಾದ ರೀತಿಯಲ್ಲಿ) ಆಚರಿಸುವ ಹಕ್ಕನ್ನು ನಾವು ತಪ್ಪೆನ್ನಬಾರದು; ಬದಲಿಗೆ ಎತ್ತಿ ಹಿಡಿಯಬೇಕು.

ಇದೇ ಮಾತು, ಯಾವುದೇ ಧರ್ಮದ ಅನುಯಾಯಿ, ಆ ಧರ್ಮದ ಕೆಲವು ವ್ಯಕ್ತಿಗಳು ಹೇಳುವ ರೀತಿಗಿಂತ ಭಿನ್ನವಾದ ರೀತಿಯಲ್ಲಿ ಬದುಕಲಿಚ್ಛಿಸುವ ವ್ಯಕ್ತಿಗೂ ಅನ್ವಯಿಸುತ್ತದೆ ಅಲ್ಲವೇ? ತಾನು ಯಾವ ರೀತಿಯ ಉಡುಗೆ ಹಾಕುತ್ತೇನೆ, ಆಚರಣೆಗಳನ್ನು ಮಾಡುತ್ತೇನೆ, ಸಾಂಸ್ಕೃತಿಕ ಆಚರಣೆಗಳನ್ನು ಮಾಡುತ್ತೇನೆ, ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತೇನೆ, ಹಾಡುತ್ತೇನೆ, ಕುಣಿಯುತ್ತೇನೆ ಇತ್ಯಾದಿಗಳನ್ನು ಆಯಾ ವ್ಯಕ್ತಿ ತೀರ್ಮಾನಿಸಬೇಕೇ ಹೊರತು ಇನ್ನಾರೋ ಅಲ್ಲ, ತಾವು ಅನುಸರಿಸುತ್ತಿರುವ ಧರ್ಮದ ನಿರ್ದಿಷ್ಟ ವೆರೈಟಿ ಭಿನ್ನವಾದುದು ಎಂದು ಬೇಕಾದರೆ ಹೇಳಿಕೊಳ್ಳ ಬಹುದು. ಈ ಮಾತು ಸುಹಾನಾಗೂ ಅನ್ವಯಿಸುತ್ತದೆ. ಸುಹಾನಾ ಅನುಸರಿಸಬೇಕಾದ ಇಸ್ಲಾಂನ ರೀತಿನೀತಿ ಇಂತಹುದೇ ಆಗಿರಬೇಕು ಎಂದು ಯಾರೂ ಕಟ್ಟುಪಾಡು ಹೇರಲಾಗದು; ಹೇರಬಾರದು. ಒಂದೇ ಇಸ್ಲಾಂ ಎನ್ನುವುದು ಎಲ್ಲೂ ಇಲ್ಲ; ಜಗತ್ತಿನ ಒಂದು ದೇಶದಲ್ಲಿರುವ ರೀತಿಯ ಇಸ್ಲಾಂ ಇನ್ನೊಂದು ಕಡೆ ಇಲ್ಲ, ಅರಬ್ ದೇಶಗಳಲ್ಲೂ ಅದು ಭಿನ್ನ ಭಿನ್ನ ರೀತಿಯಲ್ಲಿ ಇದೆ. ಹೀಗಿರುವಾಗ ಸಂವಿಧಾನದಲ್ಲಿನ ಹಕ್ಕುಗಳನ್ನು ಕೆಲವರು ಕ್ಲೈಮು ಮಾಡುವುದಾದಲ್ಲಿ, ಭಿನ್ನ ರೀತಿಯಲ್ಲಿ ಇಸ್ಲಾಂಅನ್ನು ಅನುಸರಿಸುತ್ತಿರುವವರ ಮೇಲೆ ದಬ್ಬಾಳಿಕೆ ಮಾಡಬಾರದು. ಇಷ್ಟೇ ಹೇಳಿದರೂ ಸಾಕಾಗದು. ನಮಗೆ ನಮ್ಮ ಹಕ್ಕು ಖಾತರಿ ಆಗಬೇಕೆಂದರೆ, ಆ ಹಕ್ಕಿನ ಮಾನ್ಯತೆ ಹೆಚ್ಚಾಗಬೇಕು. ಆಗ ಇತರರಿಗೂ ಆ ಹಕ್ಕು ಸಿಗಬೇಕೆಂದು ನಾವು ಪ್ರತಿಪಾದಿಸಿ ಹೋರಾಡಬೇಕಾಗುತ್ತದೆ.

ಅದು ನಡೆಯುತ್ತಿದೆಯೇ?

ಭಾರತೀಯ ಸಂಗೀತ ಮತ್ತು ಧರ್ಮ

ಈ ದೇಶದಲ್ಲಿ ಹಿಂದೂ ಮತ್ತು ಮುಸ್ಲಿಂ ಧರ್ಮಗಳು ಬೆಸೆದುಕೊಂಡಿರುವ ರೀತಿಗೆ ಹಿಂದಿ ಚಿತ್ರರಂಗಕ್ಕಿಂತ ಅತ್ಯುತ್ತಮ ಉದಾಹರಣೆ ಬೇಕೇ? ಇದರ ವಿಚಾರ ಬಂದಾಗ ಕೇವಲ ನಾಯಕ ನಟರು ಅಥವಾ ಪುರುಷ ಹಾಡುಗಾರರು ಮಾತ್ರವಲ್ಲದೇ, ಪ್ರಖ್ಯಾತ ಗಾಯಕಿಯರೂ, ಕೋಟ್ಯಾಂತರ ಜನರ ಮನಹುಂಬಿದ್ದಾರೆ. ಈಗಾಗಲೇ ಸಾಮಾಜಿಕ ಜಾಲತಾಣ ಗಳಲ್ಲಿ ಅವರ ಕುರಿತು ಸಾಕಷ್ಟು ಪ್ರಸ್ತಾಪವಾಗಿರು ವುದರಿಂದ ಮತ್ತೆ ಅದನ್ನು ಹೇಳಲು ಹೋಗುವುದಿಲ್ಲ, ಹಿಂದೂಸ್ತಾನಿ ಸಂಗೀತ ಪರಂಪರೆಯನ್ನು ಮುಸ್ಲಿಂ ಹಿನ್ನೆಲೆಯ ಹಾಡುಗಾರರು ಹಾಗೂ ವಾದ್ಯಕಾರರಿಲ್ಲದೇ ಕಲ್ಪಿಸಿಕೊಳ್ಳುವುದು ಸಾಧ್ಯವೇ? ಹಿಂದಿ - ಉರ್ದು ಮುಸ್ಲಿಂ ಕವಿಗಳು ಯಾವ ಬಗೆಯಲ್ಲಿ ಈ ದೇಶದ ಜನಪರಂಪರೆಯ ಭಾಗವಾಗಿ ಹೋಗಿದ್ದಾರೆಂದರೆ, ಅವನ್ನು ಹಿಂದೂ - ಮುಸ್ಲಿಂ ಇತ್ಯಾದಿ ವಿಂಗಡಿಸುವುದೇ ಅಸಹಜವಾದದ್ದು. ದೇಶದ ದುಡಿವ ಜನರ ರಾಷ್ಟ್ರಗೀತೆಯಂತೆ ಇರುವ 'ನಾವು ಬೆವರು ಸುರಿಸಿ ದುಡಿಯುವ ಜನ' ಹಾಡನ್ನು ಬರೆದದ್ದು ಫೈಜ್ ಅಹಮದ್ ಫೈಜ್. ಈ ಎಲ್ಲರನ್ನೂ ಹೊರಗಿಡುವ ಧರ್ಮವೊಂದು ಧರ್ಮವಾಗಿರಲು ಸಾಧ್ಯವೇ?



ವಿಡಿಯೋ ಕಂಪೋಸ್ ಆಗಿರುವ ರ

ಸಂದರ್ಭವು ಸಂಕೀರ್ಣವಾಗಿದೆ. ಮೇಲಿನ ಎ ಮಾತುಗಳ ನಂತರವೂ, ಚರ್ಚೆಯಲ್ಲಿರುವ ವಿಡಿಯ ಸಂಕಲಿತವಾಗಿರುವ ರೀತಿಯಲ್ಲಿ ಸದುದ್ದೇಶವಷ್ಟೇ ಎನ್ನುವುದು ಕಷ್ಟ. ಹಿರಿಯ ಪತ್ರಕರ್ತರೂ, ಸಂಘಪರಿವಾರದ ಕೆಂಗಣ್ಣಿಗೆ ಗುರಿಯಾಗಿ ಸದ್ಯಕ್ಕೆ ಸುದ್ದಿಯಲ್ಲಿರುವ ಸಂವೇದನಾಶೀಲ ವ್ಯಕ್ತಿಯೊಬ್ಬರು ಸುಹಾನಾರ ಇನ್ನೊಂದು ವಿಡಿಯೋವನ್ನು ಹಲವು ಸ್ನೇಹಿತರಿಗೆ ಕಳಿಸಿದ್ದಾರೆ. ಆ ವಿಡಿಯೋದಲ್ಲಿ ಸುಹಾ ಮಳೆರಾಯನ ಕುರಿತ ಹಾಡೊಂದನ್ನು ಹಾಡಿದ್ದಾರೆ ಸೊಗಸಾಗಿ ಹಾಡಿದ್ದಾರೆ. ಈ ಹಾಡು ಅಥವಾ ಇ ಹಾಡುಗಳನ್ನು, ಚಾನೆಲ್ ಮೊದಲು ಮುಂದಿಟ್ಟ ಪ್ರೋಮೋದಲ್ಲಿ ಏಕೆ ಹಾಕಿರಲಿಲ್ಲ? ಸುಹಾನಾ ಕ ಏನಾದರೂ ಆಗಲಿ, ದೇಶ ಬೇಕಾದರೆ ಎಕ್ಕುಟ್ಟಿ ಹೋಗಲಿ, ವಿವಾದವಾಗಿ ಟಿಆರ್‌ಪಿ ಹೆಚ್ಚಾದರೆ ಸಾ ಅಷ್ಟೇ. ನೀವು ಸದರಿ ಟಿವಿ ಚಾನೆಲ್‌ನ ಸದರಿ ಕಾರ್ಯಕ್ರಮ ನೋಡುವವರಾಗಿದ್ದರೆ ಮಾತ್ರ, ಆಕೆ ಹಾಡಿರುವ ಇತರ ಹಾಡುಗಳು ಕಿವಿಗೆ ಬೀಳಬಹು ಬಹುಶಃ ಅಂತಹ ಹಾಡುಗಳನ್ನೇ ಆಕೆ ಹೆಚ್ಚು ಚೆ ಹಾಡಿರಲೂಬಹುದು. ಆದರೂ, ಅವುಗಳ ತುಣು ಹಾಕದೇ, ಸುಹಾನಾ ಎಂದರೆ ಒಬ್ಬ ಅತ್ಯುತ್ತಮ ಹಾಡುಗಾರ್ತಿ ಎಂಬ ಬಿಂಬಕ್ಕಿಂತ, ಮುಸ್ಲಿಂ ಹೆಣ್ಣುಮಗಳಾಗಿಯೂ ಹಿಂದೂ ದೇವರನ್ನು ಸ್ತುತಿಸುವವಳು ಎಂಬ ಬಿಂಬವೇ ಪ್ರಧಾನವಾಗಿ ಮೂಡಿಬಂದಿತು?

ಈ ವಿಡಿಯೋದ ಪರಿಣಾಮ ಏನಾಗಿದೆ ಎಂಬುದನ್ನು ನೋಡಿದರೆ, ಮಾಡಿದವರ ಉದ್ದೇಶ ಅರ್ಥವಾಗುತ್ತದೆ.

ಜಗಳಗಳು ಯಾರ ಮಧ್ಯೆ ನಡೆಯುತ್ತಿದೆ?

ಇದುವರೆಗೆ ಯಾವೊಂದು ಮುಸ್ಲಿಂ ಸಂಘಟನೆಯೂ ಸುಹಾನಾ ಹಾಡಿನ ವಿಚಾರಕ್ಕೆ ಪ್ರತಿಕ್ರಿಯಿಸಿದಂತೆ ಕಾಣುವುದಿಲ್ಲ, ಯಾರೇ ಮೌಲ್ವಿ ಫತ್ವಾ ಹೊರಡಿಸಿಲ್ಲ, ಮುಸ್ಲಿಂ ಧರ್ಮಗುರುಗಳೆಂದು ಪ್ರಸಿದ್ಧಿ ಪಡೆದವರು. ಈ ಕುರಿತು ಮಾತಾಡಿಲ್ಲ, ಬದಲಿಗೆ, ಇವತ್ತಿನ ಸೂಕ್ಷ್ಮ ಸಂದರ್ಭದಲ್ಲಿ ಯಾರು ತಮ್ಮ ಪ್ರಗತಿಪರತೆಯನ್ನು ಸಾಬೀತುಪಡಿಸಬೇಕೆಂದು ಒತ್ತಾಯ ಬರುವ ಸಾಧ್ಯತೆ ಹೆಚ್ಚಿದೆಯೋ, ಅಂಥವ ಮಾತಾಡುತ್ತಿದ್ದಾರೆ. ವಾಸ್ತವದಲ್ಲಿ ಈ ಲೇಖನದಲ್ಲಿ ಮೇಲೆ ಎತ್ತಲಾಗಿರುವ ಕೆಲವು ಪ್ರಶ್ನೆಗಳು ಮತ್ತು ಇನ್ನೂ ಎತ್ತಬೇಕಿರುವ ಹಲವಾರು ಸಂಗತಿಗಳ ಕು ಸಮಾಧಾನ ದಲ್ಲಿ, ಆರೋಗ್ಯಕರವಾದ ಚರ್ಚೆಗಳು ನಡೆಯಬೇಕಿತ್ತು, ಅಂತಹ ಚರ್ಚೆಯಲ್ಲಿ ಈ ದೇಶ ಸಹನೀಯವಾಗಿಸುವ ಹೊಸ ರೀತಿಯ ನಿಲುವು, ಧೋರಣೆಗಳು ಹೊರಹೊಮ್ಮುವ ಸಾಧ್ಯತೆಯಿತ್ತು. ಇನ್ನೂ ಒಂದಷ್ಟು ಕಾಲ ಅಂತಹದೊಂದು ಚರ್ಚೆ ಸಾಧ್ಯವಾಗದ ಸ್ಥಿತಿಗೆ ಈಚಿನ ದಿನಗಳ ಸಾಮಾಜಿಕ ಜಾಲತಾಣಗಳ ಕಾರಿಕೊಳ್ಳುವಿಕೆ ತಂದು ನಿಲ್ಲಿಸಿದೆ.

ಏನು ಮಾಡಬೇಕು?

ಅವರವರು ಯೋಚನೆ ಮಾಡಬೇಕು.

(ವಿ.ಸೂ.: ಹೆಸರುಗಳೇ ಸಮಸ್ಯೆಯಾಗಿಬಿಡಬಹುದಾ ಕಾಲದಲ್ಲಿ ನಾವಿರುವುದರಿಂದ, ಸುಹಾನಾ ಬಿಟ್ಟರೆ ಇನ್ನಾರ ಹೆಸರನ್ನೂ ಈ ಲೇಖನದಲ್ಲಿ ಉಲ್ಲೇಖಿಸಿಲ್ಲ


ಸುಮಧುರ ಸುಹಾನಾ...



• ಗೌರಿ ಲಂಕೇಶ್

editorlankesh@gmail.com

ಎಲ್ಲಾ ಮೂಲಭೂತವಾದಗಳು - ಆದು ಹಿಂದೂ ೂಲಭೂತವಾಗಿರಲಿ, ಇಸ್ಲಾಮ್ ಮೂಲಭೂತವಾಗಿರಲಿ, ಯನ್ ಮೂಲಭೂತವಾಗಿರಲಿ - ಖಂಡನಾರ್ಹ. ಎಲ್ಲ ರ್ಮಗಳು - ಅವು ಹುಟ್ಟಿದ ಕಾಲ ಮತ್ತು ಪ್ರದೇಶಗಳ ್ನೆಲೆಯಲ್ಲಿ ಹಲವು ನಿಯಮಗಳನ್ನು ವಿಧಿಸಿದ್ದರೂ - ಯದಲ್ಲಿ ಸಾರುವುದು ಮಾನವೀಯತೆಯನ್ನು. ನನ್ನ ರ ಎಲ್ಲರೂ ತಮ್ಮ ಧರ್ಮಗಳಲ್ಲಿ ಇರುವ ನಿಯಮಗಳ ಯಕ್ಕೆ ಸ್ಪಂದಿಸಬೇಕೇ ಹೊರತು ಆ ನಿಯಮಗಳನ್ನು ಪಾದಿಸಿರುವ ಪದಗಳನ್ನಲ್ಲ, ಯಾಕೆಂದರೆ ಎಲ್ಲ ಧರ್ಮಗಳ ಾದಿಗಳು ಬದುಕಿದ್ದು ಹೋದ ಹಲವಾರು ದಶಕಗಳ ತರ ಆಯಾ ಪ್ರವಾದಿಗಳು ಹೇಳಿದ್ದರು ಎಂಬ



ಷಯಗಳನ್ನು ಅವರವರ ಅನುಯಾಯಿಗಳು ಖಲಿಸಿದರೇ ಹೊರತು ಯಾವ ಪ್ರವಾದಿಯೂ ತಾನೇ ನ್ನೆಲ್ಲ ದಾಖಲಿಸಿದ್ದು ಕಡಿಮೆ. ಉದಾಹರಣೆಗೆ ಬುದ್ಧ ರಲೋಕ ತ್ಯಜಿಸಿದ 400 ವರ್ಷಗಳ ನಂತರವೇ ಆತನ ರುಕು, ಬೋಧನೆ ಮತ್ತು ಬಿಕ್ಕುಗಳಿಗೆ ನೀಡಿದ್ದ ರ್ಗದರ್ಶನಗಳು ಲಿಖಿತ ರೂಪದಲ್ಲಿ ಮೊದಲ ಬಾರಿಗೆ ಖಲಾದದ್ದು.

ಈಗ ಸುಹಾನಾ ಸೈಯ್ಯದ್ ಎಂಬ 22 ವರ್ಷದ ುವತಿಯ ವಿರುದ್ಧ ಕೆಲವು ಮೂಲಭೂತವಾದಿ ುಸಲ್ಮಾನರು ತಿರುಗಿ ಬಿದ್ದಿದ್ದಾರೆ. ಆಕೆ "ಅನ್ಯ ಪುರುಷರ ುಂದೆ ತನ್ನ ಸೌಂದರ್ಯವನ್ನು ಪ್ರದರ್ಶಿಸಿ ಸಿನಿಮಾ ಡುಗಳನ್ನು ಹಾಡಿದ್ದು" ಧರ್ಮವಿರೋಧಿ ಎಂದೂ, ಕಾರಣಕ್ಕೆ ಆಕೆಯ ಪೋಷಕರು ಸ್ವರ್ಗಕ್ಕೆ ೋಗುವುದಿಲ್ಲವೆಂದೂ, "ಸತ್ಯವಿಶ್ವಾಸಿನಿಯರ ್ಷಕವಚ"ವಾದ ಬುರ್ಖಾವನ್ನು ಕಳಚು ಎಂದೂ ಂಗಳೂರು ಮುಸಲ್ಮಾನರು' ಎಂಬ ಫೇಸ್‌ಬುಕ್ ಜ್‌ನಲ್ಲಿ ಯಾರೋ ಒಬ್ಬರು ಸುಹಾನಾಳಿಗೆ ಆಗ್ರಹಿಸಿದ್ದಾರೆ. ತಹ ಪ್ರತಿಕ್ರಿಯೆ ವ್ಯಕ್ತಪಡಿಸಿದ ಜನರು ತಾವೇ ಧರ್ಮದ ್ಕಾಳಿಗಳು ಎಂದೂ, ಸ್ವರ್ಗಕ್ಕೆ ಟಿಕೆಟ್ ಕೊಡಿಸುವ ಂಟರು ಎಂದೂ ಭಾವಿಸಿರುವಂತಿದೆ.

ರಿಯಾಲಿಟಿ ಶೋವೊಂದರಲ್ಲಿ ಭಾಗವಹಿಸುತ್ತಿರುವ ಹಾನಾಳಲ್ಲಿ ಪ್ರತಿಭೆ ಇದೆಯೋ ಇಲ್ಲವೋ ಎಂಬುದಷ್ಟೇ ಗೆ ಮುಖ್ಯವಾಗಬೇಕೆ ಹೊರತು ಆಕೆ ಯಾವ ಹಾಡು ಡಿದಳು, ಯಾವ ಬಟ್ಟೆ ಧರಿಸಿದ್ದಳು ಇತ್ಯಾದಿಗಳಲ್ಲ. ಹಾಡುವುದು ಇಸ್ಲಾಮ್ ಧರ್ಮದಲ್ಲಿರುವ ನಿಯಮಗಳ ವಿರುದ್ಧದ ಕ್ರಿಯೆಯಾದರೆ ಯಾಕೆ ಆ ಧರ್ಮದಿಂದಲೇ ಅಷ್ಟೊಂದು ಪ್ರಖ್ಯಾತ ಸಂಗೀತಗಾರರು, ಗೀತಕಾರರು, ಹಾಡುಗಾರರು ಬಂದಿದ್ದಾರೆ. ಕರ್ನಾಟಕದ ಕಬೀರ ಎಂದೇ ಗುರುತಿಸಲ್ಪಡುವ, ಕನ್ನಡದಲ್ಲಿ ತತ್ವಪದಗಳನ್ನು ರಚಿಸಿದ ಮೊದಲ ಮುಸ್ಲಿಮ್ ಕವಿ ಎಂದೇ ಕರೆಯಲ್ಪಡುವ ಶಿಶುನಾಳ ಶರೀಫ್ ಅವರದ್ದು ಯಾವ ಧರ್ಮ? ಲೆಕ್ಕವಿಲ್ಲದಷ್ಟು ಹಿಂದೂ ಭಕ್ತಿಗೀತೆಗಳನ್ನು ಬರೆದು ಮನೆಮಾತಾಗಿದ್ದ ಕರೀಮ್ ಖಾನ್ ಅವರದ್ದು ಯಾವ ಧರ್ಮ? 'ನಿತ್ಯೋತ್ಸವ' ಕವಿ ನಿಸ್ಸಾರ್ ಅಹಮದ್ ಅವರದ್ದು ಯಾವ ಧರ್ಮ?

"ಅಲ್ಲಾ ಅಲ್ಲಾ, ನೀನೇ ಎಲ್ಲಾ, ನೀನೇ ದಾರಿ, ನೀನಿಲ್ಲದೆ ಯಾವುದೂ ಇಲ್ಲ" ಎಂದು ಹಾಡಿದ ರಾಜ್‌ಕುಮಾರ್ ಅವರು ಮುಸಲ್ಮಾನರೆ? ಅಯ್ಯಪ್ಪ ಸ್ವಾಮಿ ಕುರಿತು ಹಲವಾರು ಗೀತೆಗಳನ್ನು ಹಾಡಿರುವ ಜೇಸುದಾಸ್ ಕ್ರಿಶ್ಚಿಯನ್ ಧರ್ಮದಲ್ಲಿ ಹುಟ್ಟಿದವರಲ್ಲವೇ?

ಪ್ರಖ್ಯಾತ ಗಾಯಕರಾಗಿದ್ದ ಪಾಕಿಸ್ತಾನದ ನುಸರ್ತ್ ಫತೆ ಅಲಿಖಾನ್ ಅವರು ಧರ್ಮಭ್ರಷ್ಟರೆ? ಅಪ್ಪಟ ಮುಸಲ್ಮಾನನಾಗಿದ್ದೂ ಪ್ರತಿದಿನ ದೇವಸ್ಥಾನದಲ್ಲಿ ತಮ್ಮ ಶಹನಾಯ್ ನುಡಿಸುತ್ತಿದ್ದ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ಇಸ್ಲಾಮ್ ವಿರೋಧಿಯೇ? ಭಾರತಕ್ಕೆ ಆಸ್ಕರ್ ಪ್ರಶಸ್ತಿ ತಂದುಕೊಟ್ಟ ಎ.ಆರ್.ರೆಹಮಾನ್ ಕ್ರಿಶ್ಚಿಯನ್ನರೇ? ಬಾಬಾಬುಡನ್ ಗಿರಿಯಲ್ಲಿರುವ ದರ್ಗಾಕ್ಕೆ ಹೋಗುವ ಜನರು ಯಾವ ಧರ್ಮದವರು? ಅಜ್ಮೀರ್‌ನಲ್ಲಿರುವ ಪ್ರಖ್ಯಾತ ದರ್ಗಾಕ್ಕೆ ಹಿಂದೂಗಳೂ ಹೋಗುವುದಿಲ್ಲವೆ? ಆಂಧ್ರದಲ್ಲಿರುವ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನಕ್ಕೆ ಪ್ರತಿ ವರ್ಷ ಯುಗಾದಿ ಹಬ್ಬದಂದು ಮುಸಲ್ಮಾನರು ಹೂ, ಅಕ್ಕಿ ಬೇಳೆ, ಬೆಲ್ಲ ಇತ್ಯಾದಿಗಳನ್ನು ಕಾಣಿಕೆಯಾಗಿ ಅರ್ಪಿಸಿ ಅಲ್ಲಿನ ಅರ್ಚಕನಿಂದ ಪ್ರಸಾದ ಸ್ವೀಕರಿಸುವುದಿಲ್ಲವೆ? ಉರುಸ್ ಸಮಯದಲ್ಲಿ ಉತ್ತರ ಕರ್ನಾಟಕದ ಅದೆಷ್ಟೋ ಹಳ್ಳಿಗಳಲ್ಲಿ ಹಿಂದೂಗಳು ಬೂಂದಿ ಮಾಡಿ ಹಂಚುವುದಿಲ್ಲವೇ?

ಇತ್ತೀಚೆಗೆ ಒಂದು ವರದಿ ಓದಿದೆ. ಬೇರೆ ಯಾವುದೋ ಒಂದು ರಾಜ್ಯದ ಹಳ್ಳಿ. ಆ ಹಳ್ಳಿಯಲ್ಲಿ ಒಬ್ಬನೇ ಒಬ್ಬ ಹಿಂದೂ ವಾಸಿಸುತ್ತಿಲ್ಲ. ಎಲ್ಲ ನಿವಾಸಿಗಳೂ ಮುಸಲ್ಮಾನರು. ಆ ಹಳ್ಳಿಯಲ್ಲಿ ಅದ್ಯಾರೋ ಹಿಂದೊಮ್ಮೆ ಕಟ್ಟಿದ್ದ ಒಂದು ಪುಟ್ಟ ಮಂದಿರವಿದೆ. ಆ ಮಂದಿರದಲ್ಲಿ 'ದೇವರು' ಇದ್ದರೂ ಅದಕ್ಕೆ ಪೂಜೆ ಸಲ್ಲಿಸಲು ಯಾರೂ ಇಲ್ಲವಲ್ಲ ಎಂದು ಕಳೆದ ಹಲವಾರು ವರ್ಷಗಳಿಂದ ಒಬ್ಬ ಮುಸಲ್ಮಾನ ಪ್ರತಿ ದಿನ ಅಲ್ಲಿರುವ ವಿಗ್ರಹಕ್ಕೆ ಹೂಗಳನ್ನು ಅರ್ಪಿಸಿ, ದೀಪ ಹಚ್ಚಿ, ಊದುಬತ್ತಿ ಬೆಳಗಿ ಪೂಜೆ ಸಲ್ಲಿಸುತ್ತಾರೆ. ಅದನ್ನು ಊರಿನ ಯಾರೂ ವಿರೋಧಿಸಿಲ್ಲ.

ಅಷ್ಟು ದೂರ ಯಾಕೆ, ಇಲ್ಲೇ ನಮ್ಮ ಕರ್ನಾಟಕದ್ದೇ ಒಂದು ಹಳ್ಳಿಯ ಉದಾಹರಣೆ ಕೊಡಬಹುದು. ಮಿತ್ರ ಮತ್ತು ಕವಿ ಈ. ಚಂದ್ರ ಒಮ್ಮೆ ತಮ್ಮ ಹಳ್ಳಿಯಲ್ಲಿ ಪ್ರತಿ ವರ್ಷ ನಡೆಯುವ ಒಂದು ಆಚರಣೆ ಬಗ್ಗೆ ಅಪ್ಪನಿಗೆ ಪತ್ರ ಬರೆದಿದ್ದರು. ಅದನ್ನು ಕುರಿತು ಅಪ್ಪ ತಮ್ಮ 'ಮರೆಯುವ ಮುನ್ನ' ಅಂಕಣದಲ್ಲಿ ದಾಖಲಿಸಿದ್ದರು. ಅದು ಹೀಗಿದೆ:

"ಒಂದು ಉರುಸು

ತಾಳೀಕಟ್ಟೆ ಎಂಬ ಚಿತ್ರದುರ್ಗದ ದೊಡ್ಡ ಗ್ರಾಮದ ಹೊಟ್ಟೆಯಲ್ಲಿರುವ ಅರ್ಥಪೂರ್ಣ ಗುಟ್ಟೊಂದನ್ನು ನಮ್ಮ ಹುಡುಗ ಈ. ಚಂದ್ರ ನನ್ನ ಓದುಗರ ಮುಂದಿಟ್ಟಿದ್ದಾನೆ. ಆತ ಕಳಿಸಿರುವ ಅಚ್ಚಾದ ಕರಪತ್ರದ ಮುಖ್ಯ ಪಂಕ್ತಿ ಹೀಗಿದೆ: 'ಹೊಳಲ್ಕೆರೆ ತಾಲ್ಲೂಕು ತಾಳೀಕಟ್ಟೆ ಗ್ರಾಮದಲ್ಲಿ ಪ್ರತಿವರ್ಷ ನಡೆದಂತೆ ಈ ವರ್ಷವೂ ಶ್ರೀ ಸೈಯದ್ ಮಹಮದ್ ಇಸ್ಮಾಯಿಲ್ ಷಾವಲಿ ಖಾದ್ರಿಯವರ ದರಗದ ಉರುಸ್ ಏರ್ಪಡಿಸಿದೆ. ಭಕ್ತಮಹಾಶಯರು ಸಕಾಲಕ್ಕೆ ಆಗಮಿಸಿ ವಲಿಯುವರ ಕಾರ್ಯಕ್ಕೆ ಭಾಗಿಗಳಾಗಬೇಕಾಗಿ ಕೋರಿದೆ.'

ಈ. ಚಂದ್ರನ ಕಾಗದ: 'ಈ ಪತ್ರದ ಜೊತೆಗೆ ನನ್ನ ಹಳ್ಳಿಯಲ್ಲಿ ನಡೆಯುವ ಮುಸ್ಲಿಮರ ಉರುಸುವಿನ ಕರಪತ್ರ ಇಟ್ಟಿರುತ್ತೇನೆ. ನಿಮಗೆ ಈ ಮಸೀದಿ ಬಗ್ಗೆ ಹೇಳಿದ್ದೆ. ನಮ್ಮೂರಲ್ಲಿ ಒಬ್ಬರು ಮುಸ್ಲಿಮರೂ ಇಲ್ಲ, ಆದರೆ ಮಸೀದಿ ಇದೆ. ಇದನ್ನು ನೋಡಿಕೊಳ್ಳುವವರು ಕುರುಬರು. ಹಾಗೆಯೇ ಕುರುಬರು ನಿಂತು ಉರುಸು ಮಾಡುತ್ತಾರೆ ಪ್ರತಿವರ್ಷ.

ಕ್ಯಾತೆ ತೆಗೆದು ಜಗಳ ಮಾಡುವ ನೀಚ ಚಡ್ಡಿಗಳು ಮತ್ತು ಜಮಾತೆ ಹೆಸರಲ್ಲಿ ಬೆಂಕಿ ಇಡುವ ಮುಸ್ಲಿಮರು ಈ ಹಳ್ಳಿಗೆ ಬಂದು ನೋಡಬೇಕು. ಈ ಊರು ಹುಟ್ಟಿದ ಇಷ್ಟು ದಿನಕ್ಕೆ ಮಸೀದಿ ಬಗ್ಗೆ ಜಗಳ ಆಗಿಲ್ಲ. ಊರಿನಲ್ಲಿನ ಕುರುಬರು ಬೇರೆ ದೇವರನ್ನು ಪೂಜಿಸಿದಷ್ಟೇ ಇದನ್ನು ಪೂಜಿಸುತ್ತಾರೆ...

ಜಾತಿಜಗಳದಲ್ಲಿ ಮನುಷ್ಯತ್ವವನ್ನು ಬಲಿ ತೆಗೆದುಕೊಳ್ಳುವ ನೀಚರೆಲ್ಲರೂ ಈ ಊರಿನ ಕುರುಬರಿಂದ ಕಲಿಯಬೇಕು- ಎಂದೇ ನನ್ನ ಅನ್ನಿಸಿಕೆ."

ಇನ್ನು ಸುಹಾನಾ ತಾನು ತೊಟ್ಟಿರುವ ಬುರ್ಖಾವನ್ನು ಕಳಚಬೇಕು ಎಂದಿರುವ ಬಗ್ಗೆ, ಇಸ್ಲಾಮ್ ಧರ್ಮ ಪುರುಷರು ಮತ್ತು ಮಹಿಳೆಯರು ಸಭ್ಯ ಉಡುಗೆಗಳನ್ನು ತೊಡಬೇಕು ಎನ್ನುತ್ತದೆಯೇ ಹೊರತು ಮಹಿಳೆಯರು ಮಾತ್ರ ಬುರ್ಖಾ ಧರಿಸಬೇಕೆಂದು ಹೇಳಿಲ್ಲ. ಆದ್ದರಿಂದಲೇ ವಿವಿಧ ಪ್ರದೇಶಗಳಲ್ಲಿ ವಿವಿಧ ತೆರನಾದ ಬುರ್ಖಾ/ ಹಿಜಾಬ್‌ಗಳಿರುವುದು. ಉದಾಹರಣೆಗೆ ಬಾಂಗ್ಲಾದೇಶದ ಪ್ರಧಾನಿ ಶೇಕ್ ಹಸೀನಾರವರು ಬುರ್ಖಾ ತೊಡುವುದಿಲ್ಲ, ಅವರು ಉಟ್ಟ ಸೀರೆಯ ಸೆರಗನ್ನು ತಮ್ಮ ತಲೆಯ ಮೇಲೆ ಹೊದ್ದಿರುತ್ತಾರೆ. ಹಾಗೆಯೇ ಪಾಕಿಸ್ತಾನದ ಮಾಜಿ ಪ್ರಧಾನಿ ಬೆನಜೀರ್ ಭುಟ್ಟೊ ಕೂಡ ಬುರ್ಖಾ ತೊಡುತ್ತಿರಲಿಲ್ಲ, ಅವರು ದುಪಟ್ಟಾವನ್ನು ತಲೆ ಮೇಲೆ ಹಿಜಾಬ್‌ನಂತೆ ಹಾಕಿಕೊಂಡಿರುತ್ತಿದ್ದರು.

ಇರಾನ್‌ನಲ್ಲಿ ಹಲವು ಮಹಿಳೆಯರು ಬುರ್ಖಾ ತೊಡುತ್ತಾರಾದರೂ ಹೆಚ್ಚಿನ ಯುವತಿಯರು ಆಧುನಿಕ ಶೈಲಿಯ ಜೀನ್ಸ್, ಲೆಗ್ಗಿಂಗ್ಸ್, ಟಾಪ್ ಇತ್ಯಾದಿಗಳನ್ನು ತೊಟ್ಟರೂ ತಲೆಮೇಲೆ ಹಿಜಾಬ್ ಸುತ್ತಿಕೊಂಡಿರುತ್ತಾರೆ. ಅಫಘಾನಿಸ್ತಾನದಲ್ಲಿ ಕಣ್ಣುಗಳ ಮುಂದೆ ಜಾಲರಿ ಇರುವಂತಹ ಬುರ್ಖಾವನ್ನು ಮಹಿಳೆಯರು ಧರಿಸಿದರೆ, ಈಗ ಹಿಂಸಾ ಕೇಂದ್ರದಂತಾಗಿರುವ ಸಿರಿಯಾದ ಅಧ್ಯಕ್ಷ ಅಸ್ಸದ್‌ನ ಪತ್ನಿ ಅಸ್ಮಾ ಪಾಶ್ಚಿಮಾತ್ಯ ಧಿರಿಸುಗಳನ್ನು ತೊಡುತ್ತಾರೆ. ಹೀಗಿರುವಾಗ 'ಮಂಗಳೂರು ಮುಸಲ್ಮಾನರು' ಯಾವ ಆಧಾರದ ಮೇಲೆ ಸುಹಾನಾ ಬುರ್ಖಾ ತ್ಯಜಿಸಬೇಕು ಎಂದಿದ್ದಾರೆ? ಹಾಗೆ ಹೇಳಲು ಅವರ್ಯಾರು?


ಮಿತ್ರ ಬಿ.ಎಂ.ಬಷೀರ್ ಹೇಳಿರುವಂತೆ "ಸಂಗೀತ ದೇವರ ಭಾಷೆ" ಆಗಿರಬಹುದು. ಯಾಕೆಂದರೆ ಸಂಗೀತ ಎಲ್ಲೆಲ್ಲಿಯೂ ಇದೆ. ಸಮುದ್ರದ ಅಲೆಗಳಲ್ಲಿ, ಜಲಜಲ ಹರಿಯುವ ನೀರಿನಲ್ಲಿ, ಬೀಳುವ ಮಳೆಯ ಹನಿಗಳಲ್ಲಿ, ಕಪ್ಪೆಗಳ ವಟಗುಟ್ಟುವಿಕೆಯಲ್ಲಿ, ಹಳಿಗಳ ಮೇಲೆ ರೈಲು ಚಲಿಸಿದಾಗ ಹೊರಡುವ ಚುಕುಬುಕು ಸದ್ದಿನಲ್ಲಿ, ನವಿಲಿನ ನೃತ್ಯದಲ್ಲಿ, ಅಮ್ಮ ಹಾಡುವ ಜೋಗುಳದಲ್ಲಿ, ಅಪ್ಪನ ಪ್ರೀತಿಯ ಮಾತುಗಳಲ್ಲಿ, ಗೆಳೆಯನ ಸನಿಹದಲ್ಲಿ, ಪ್ರಿಯಕರನ ಸ್ಪರ್ಶದಲ್ಲಿ, ಮಗುವಿನ ನಗೆಯಲ್ಲಿ, ಕಂದಮ್ಮಗಳ ತೊದಲು ಮಾತುಗಳಲ್ಲಿ, ನಮ್ಮ ಸೆಲ್‌ಫೋನ್‌ಗಳಲ್ಲಿ, ಸಿನಿಮಾ ನಾಟಕ ಇತ್ಯಾದಿಗಳಲ್ಲಿ, ಯಕ್ಷಗಾನ-ಗೀಗೀ ಪದಗಳಲ್ಲಿ, ... ಕೊನೆಗೆ ಪ್ರತಿನಿತ್ಯ ಮಸೀದಿಗಳಿಂದ ಹೊರಡುವ ಪ್ರಾರ್ಥನೆಯ ಕರೆಯಲ್ಲಿ ಕೂಡ ಸಂಗೀತ ಇದ್ದೇ ಇದೆ.


ಹೀಗಿರುವಾಗ ಸುಹಾನಾಳ ವಿರುದ್ಧ 'ಮಂಗಳೂರು ಮುಸ್ಲಿಮರು' ಎಂಬ ಫೇಸ್‌ಬುಕ್ ಅಕೌಂಟಿನಲ್ಲಿ ಹರಿಹಾಯ್ದಿರುವ ಹುಚ್ಚರ ತಲೆಗೆ ಒಂದು ಗೂಸಾ ಕೊಟ್ಟು ಅವರಿಗೆ ಬುದ್ಧಿ ಹೇಳಬೇಕಿರುವುದು ಎಲ್ಲರ ಕರ್ತವ್ಯವಾಗಿದೆ.

ಲಂಕೇಶ್ 82 ಮತ್ತು


ಗೌರಿ ಲಂಕೇಶ್ ಪತ್ರಿಕೆಯ 12ನೇ ವಾರ್ಷಿಕೋತ್ಸವ

ಮಾರ್ಚ್ 12ರಂದು ಬಿಡುಗಡೆಯಾಗಲಿರುವ ಲಂಕೇಶ್ ಪ್ರಕಾಶನದ ನೂತನ ಪುಸ್ತಕಗಳು










ಕಾರವಾರ: ಸೋಗಲಾಡಿ ಶಾಸಕ ಸೈಲ್ ಸರ್ಕಸ್ ಶುರು!








ಸಮುದ್ರ ನಗರಿ ಕಾರವಾರದ ಕಲಬೆರಕೆ ರಾಜಕಾರಣದ ಹೊರಳು-ತೆವಳು ದಿನಕ್ಕೊಂದು ಆಯಾಮ ಪಡೆಯುತ್ತಿದೆ. ಅಸೆಂಬ್ಲಿ ಎಲೆಕ್ಷನ್‌ಗೆ ಇನ್ನೂ ಒಂದು ವರ್ಷ ಬಾಕಿಯಿದ್ದರೂ ಯದ್ದಿ-ಚಡ್ಡಿ ಆರಂಭಿಸಿರುವ ಅಧಿಕಾರದ ಹಪಾಹಪಿಯ ಪ್ರಿಮ್ಯಾಚ್ಯೂರ್ ಪಾಲಿಟಿಕ್ಸ್‌ನ ಅಡ್ಡ ಪರಿಣಾಮ ಕಾರವಾರ-ಅಂಕೋಲಾ ಕ್ಷೇತ್ರದ ಮೇಲೂ ಆಗುತ್ತಿದೆ. ಯಾವ ಆ್ಯಂಗಲ್‌ನಿಂದ ನೋಡಿದರೂ ಈ ಕಾರವಾರ ಕ್ಷೇತ್ರದಲ್ಲಿ ಕೇಸರಿ ಪಕ್ಷಕ್ಕೆ ನೆಲೆ-ಬೆಲೆಯಿಲ್ಲ ಎಂಬುದು ಖಾತ್ರಿಯಾಗುತ್ತದೆ. 'ಸ್ವಂತ ಸಿದ್ಧಾಂತ'ದ ಸಮರ್ಥ ಹುರಿಯಾಳು ಇಲ್ಲಿ ಸಂಘಪರಿವಾರಕ್ಕೆ ಇಲ್ಲ. ಹಾಗಾಗಿ ಗುಳೆ ಗಿರಾಕಿಗಳೇ ಗತಿ ಎಂಬಂತಾಗಿದೆ ಬಿಜೆಪಿಗೆ!

ಕಾರವಾರ-ಅಂಕೋಲೆಯ ಬಿಜೆಪಿ ಎಂದರೆ, ಅದೊಂದು ಗಾಂಠಿ ಗುದುಮುರಿಗೆಯ ಗರಡಿ ಮನೆ. ಕಾಂಗ್ರೆಸ್ ಎಮ್ಮೆಲ್ಲೆಯಾಗಿದ್ದ ಆನಂದ ಅಸ್ನೋಟಿಕರ್ ಆಪರೇಷನ್ ಕಮಲ ಮಾಡಿಸಿಕೊಂಡ ಕ್ಷಣದಿಂದ ಅವನತಿ ಹೊಂದ ಹತ್ತಿದ. ಸ್ಥಳೀಯ ಬಿಜೆಪಿಗೆ ಇವತ್ತಿಗೂ ಒಂದು ನೆಲೆ ಎಂಬುದು ಕಂಡುಕೊಳ್ಳಲಾಗಿಲ್ಲ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜನರಿಂದ ತಿರಸ್ಕೃತನಾದ ನಂತರ ಅಸ್ನೋಟಿಕರ್ ಅಡ್ರೆಸ್ಸೇ ಇಲ್ಲದಂತೆ ನಾಪತ್ತೆಯಾಗಿಹೋದ. ಆಗ ಸೃಷ್ಟಿಯಾದ ಶೂನ್ಯ ಸಿಂಹಾಸನದ ಮೇಲೆ ಕಣ್ಣಿಟ್ಟು ಸಮಾಜ ಸುಧಾರಕನ ವೇಷ ತೊಟ್ಟವನೇ "ಪಹರೆ ನಾಗ!" ಕೆನರಾದ ನಿದ್ದೆ-ಬಡುಕ-ಸಂಸದನೂ ಯಡ್ಡಿ ಟೀಮಿನ ಉಪಾಧ್ಯಕ್ಷನೂ ಆಗಿರುವ ಅನಂತ್ಮಾಣಿ ಕೃಪಾಕಟಾಕ್ಷ ಗಿಟ್ಟಿಸಿದ ಪಹರೆ ನಾಗ ತಿಣುಕಾಡಿ-ಒದ್ದಾಡಿ ಅಂತೂ ಬಿಜೆಪಿ ಸೇರಿಕೊಂಡುಬಿಟ್ಟ.

ಅದುವರೆಗೂ ಕಾರವಾರ-ಅಂಕೋಲಾ ಬಿಜೆಪಿಗೆ ತಾನೇ ಯಜಮಾನನೆಂಬ ಧರತಿಯಲ್ಲಿದ್ದಾತ ಮಯೂರ ನಾಯಕ್. ಈ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಈತ ಬನ್ನಂಜೆ ರಾಜನಿಂದ ಹತನಾದ ಅಂಕೋಲೆಯ ತರಹೇವಾರಿ ದೋಖಾ ದಂಧೆದಾರ ಧನನಾಯಕ್‌ನ ಏಕೈಕ ಪುತ್ರರತ್ನ! ಅಪ್ಪ ಸ್ಥಳೀಯ ಬಿಜೆಪಿ ಕಟ್ಟಲು ಹರಿಸಿದ್ದ ತನು-ಮನ-ಧನದ ಮಹಿಮೆಯಿಂದ ತಾನು ಬಿಜೆಪಿಯಲ್ಲಿ ಪ್ರಶ್ನಾತೀತ ನಾಯಕನಾಗುತ್ತೇನೆಂದು ಮಯೂರ ಭ್ರಮಿಸಿದ್ದ. ಆತನೂ ಅಪ್ಪನಂತೆಯೇ ಹಣ ಬಿಜೆಪಿ ರಾಜಕಾರಣಕ್ಕಾಗಿ ಹರಿಸಿದ. ಜಿಪಂ-ತಾಪಂ-ಗ್ರಾಪಂ ಎಲೆಕ್ಷನ್‌ನಲ್ಲಿ ಸ್ವ-ಪಕ್ಷದಲ್ಲಿ ಯಾರೂ ಮಾಡದ ಸಾಧನೆಯೂ ಮಾಡಿದ. ಆದರೆ ಈ ಮಯೂರ ಮತ್ತು ಪಹರೆ ನಾಗನಿಗೆ ಅದೇನು ಸೇಡು-ಅಸೂಯೆಯೋ? ಈ ನಾಡವ ಶೂರರ ಮುಸುಕಿ ಕಾಳಗ ಜೋರಾಗಿ ನಡೆಯಹತ್ತಿತು.

ಪಹರೆ ನಾಗನಿಗೆ ಅನಂತ್ಮಾಣಿ ಗುರುವಾದರೆ, ಮಯೂರನಿಗೆ ಕಾಗೇರಿ ಮಾಣಿಯೇ ಗಾಡ್‌ಫಾದರ್. ಪಹರೆ ನಾಗ ಅಂಕೋಲೆಯ ಗದ್ದೆಗಳ ಊಳುತ್ತ, ಕಾರವಾರದ ಬೀದಿಗಳ ಗುಡಿಸುತ್ತ ಜನರ ಮರುಳು ಮಾಡಲು ಹವಣಿಸಿದರೆ, ಮಯೂರ ಹಳ್ಳಿಗಳ ಸಂಘ-ಸಂಘಟನೆಗಳ ಖರೀದಿಗೆ ಮಸಲತ್ತು ಮಾಡತೊಡಗಿದ. ಬಿಜೆಪಿಯಲ್ಲಿ ಗ್ಯಾಂಗ್‌ವಾರ್ ಬಿರುಸಾಗಹತ್ತಿತು. ಹೇಗಾದರೂ ಮಾಡಿ ಬಿಜೆಪಿ ಟಿಕೆಟ್ ಪಡೆವ ಛಲ ಪಹರೆ ನಾಗನದಾಯ್ತು; ಮಯೂರ ಟಿಕೆಟ್ ಕಟಿಪಿಟಿ ಮಾಡಲಿಲ್ಲ, ಆತನದು ಪಹರೆ ನಾಗನಿಗೆ ಟಿಕೆಟ್ ತಪ್ಪಿಸುವ ಹಟ! ಈ ಜಿದ್ದಾಜಿದ್ದಿ ನೋಡಿದ ಆನಂದ ಅಸ್ನೋಟಿಕರ್-ಇದೇ ತನ್ನ ಪುನರ್ ಪ್ರವೇಶಕ್ಕೆ ಪ್ರಶಸ್ತ ಸಮಯವೆಂದು ಭಾವಿಸಿ ಹಠಾತ್ ಕಾರವಾರದಲ್ಲಿ ಪ್ರತ್ಯಕ್ಷನಾದ! ತಾನು ಬಿಜೆಪಿಯಲ್ಲಿದ್ದೇನೆ, ಎಲೆಕ್ಷನ್ ಹತ್ತಿರ ಬಂದಾಗ ಬರ್‍ತೇನೆಂದು ಹೇಳಿಹೋದ.

ಒಂದುವೇಳೆ ತನಗೆ ಬಿಜೆಪಿ ಟಿಕೆಟ್ ಸಿಗದಂಥ ಪರಿಸ್ಥಿತಿ ಎದುರಾದರೆ ತನ್ನ ಪರಮಾಪ್ತೆ ರೂಪಾಲಿ ನಾಯ್ಕ್‌ಗೆ ಅಭ್ಯರ್ಥಿತನದ ಭಾಗ್ಯ ದಕ್ಕಬೇಕೆಂಬ ಸ್ಕೆಚ್‌ನೊಂದಿಗೆ ಆತ ಕಾರ್ಯಾಚರಣೆಗೆ ಇಳಿದಿದ್ದಾನೆ. ಆನಂದ ಅಸ್ನೋಟಿಕರ್ ಬಿಜೆಪಿಯಲ್ಲಿದ್ದಾಗ ಈಶ್ವರಿ ಬಣದ ಭೂಪ. ಯಡ್ಡಿ ಸಿಎಂ ಆಗಿದ್ದಾಗ ಬಂಡೆದ್ದು ಕಾಡಿದ ಶಾಸಕರಲ್ಲಿ ಈತನೂ ಮುಂಚೂಣಿಯವನೇ! ಹಾಗಾಗಿ ಯಡ್ಡಿಗೆ ಆತನ ತಲೆ ಕಂಡರಾಗದು. ತಾನು ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರುವಾಗ ಸಂಸದ ಅನಂತ್ಮಾಣಿಗೆ ನೀಡಿದ ಕಪ್ಪ ಕಾಣಿಕೆಯ ಋಣ ಆತನಿಗಿರಬಹುದೆಂದು ಅಸ್ನೋಟಿಕರ್ ಭಾವಿಸಿದ್ದು ಹುಸಿಯಾಗಿದೆ. ಅನಂತ್ಮಾಣಿ ಪಹರೆ ನಾಗನ ಬೆನ್ನಿಗೆ ನಿಂತಿದ್ದಾನೆ. ಯಡ್ಡಿಗೆ ತಾನು ಆನಂದ ಅಸ್ನೋಟಿಕರ್‌ಗೆ ಪರ್ಯಾಯವಾಗಿ ಕಾರವಾರ ಕ್ಷೇತ್ರದಲ್ಲಿ ಹೊಸ 'ದಂಡ' ನಾಯಕನ ಹುಟ್ಟು ಹಾಕಿರುವೆನಾಗಿಯೂ ರಿಪೋರ್ಟ್ ಕೊಟ್ಟಿದ್ದಾನೆ.



ಬಿಜೆಪಿ ಒಳಗಿನ ಬಡಿದಾಟ ಸೂಕ್ಷ್ಮವಾಗಿ ಅವಲೋಕಿಸಿ ತನ್ನ ಅಸ್ತಿತ್ವದ ತಂತ್ರಗಾರಿಕೆ ಹೆಣೆಯ ಬೇಕಾದ ಸಂದಿಗ್ಧಕ್ಕೆ ಶಾಸಕ ಸತೀಶ್ ಸೈಲ್ ಬದ್ದಿದ್ದಾನೆ. ಈ ಕಬ್ಬಿಣದ ಅದಿರು ಕಳ್ಳ ಸಾಗಾಣಿಕೆದಾರ ಶಾಸಕನಾಗಿದ್ದು ಪಕ್ಷೇತರನಾಗಿ; ಈಗಾತ ಆಡಳಿತಾರೂಢ ಕಾಂಗ್ರೆಸ್‌ನ ಸಹ-ಸದಸ್ಯ. ಆದರೆ ಆತನಿಗೆ ಮೂಲ ಕಾಂಗ್ರೆಸಿಗರೊಂದಿಗೆ ಹೊಂದಾಣಿಕೆಯೇ ಆಗುತ್ತಿಲ್ಲ. ಕಾರವಾರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೀಪಕ್ ವೈಂಗಣಕರ್ ತಂಡ ಸೈಲ್‌ನ ಹೆಸರೆತ್ತಿದರೆ ಉರಿದು ಬೀಳುತ್ತದೆ. ಆತ ತನ್ನ ಮನೆಗೆ ಮೀನು ತರುವ ಉಡುಪಿ ಮೂಲದ ಶಂಭುಶೆಟ್ಟಿ ಯಂಥ ದಂಡ-ಪಿಂಡಗಳ ಕಟ್ಟಿ ಕೊಂಡು ಓಡಾಡುವುದು ಮೂಲ ಕಾಂಗ್ರೆಸಿಗರಿಗೆ ಸಹಿಸಲಾಗುತ್ತಿಲ್ಲ. ಹೀಗಾಗಿ ಸೈಲ್‌ಗೆ ತಾನು ಕಾಂಗ್ರೆಸಿಗ ನೆಂದು ಗಟ್ಟಿಯಾಗಿ ಹೇಳಿಕೊಳ್ಳಲಾಗು ತ್ತಿಲ್ಲ. ಜಿಲ್ಲಾ ಮಂತ್ರಿ ದೋಷ ಪಾಂಡೆಯೂ ಸೈಲ್ ಬೆಳೆಯದಂತೆ ಆಗಾಗ ಬಾಲ ಟ್ರಿಮ್ ಮಾಡುತ್ತಲೇ ಇದ್ದಾರೆ.



ಹಾಗಂತ ಕಾಂಗ್ರೆಸ್‌ಗೆ ಸೈಲ್‌ನ ಬಿಟ್ಟರೆ ತಾಕತ್ತಿನ ಅಸೆಂಬ್ಲಿ ಕ್ಯಾಂಡಿಡೇಟ್ ಇಲ್ಲ, ಕೆಪಿಸಿಸಿ ಅಧ್ಯಕ್ಷ ಪರಮ್, ಕಾರ್ಯಾಧ್ಯಕ್ಷ ದಿನೇಶ್ ಗುಂ ಜತೆ ಸತೀಶ್ ಸೈಲ್ ಸಂಬಂಧ 'ಸರಿಯಾಗಿ' ಇಟ್ಟುಕೊಂಡಿದ್ದಾನೆ. ಗಣಿ ಹಗರಣದಲ್ಲಿ ವರ್ಷಗಟ್ಟಲೆ ಜೈಲೂಟ ಉಂಡು ಬಂದಿರುವ ಸೈಲ್‌ಗೆ ಗಣಿ ಮಾಫಿಯಾದ ರಾಮುಲು-ರೆಡ್ಡಿಗಳ ಸಖ್ಯವೂ ಇದೆ. ಸೈಲ್ ರಾಜಕಾರಣ ಸೇರುವ ಮೊದಲು ಎಂಪಿಯಾಗುವ ಕನಸು ಕಾಣುತ್ತಿದ್ದ. ಗಣಿ ಮಾಫಿಯಾದ ದೋಸ್ತ್ ರೆಡ್ಡಿ ಆತನಿಗೆ ಬಿಜೆಪಿಯ ಕೆನರಾದ ಸಂಸದ ಮಾಡುವ ಮಾತೂ ಕೊಟ್ಟಿದ್ದನಂತೆ. ಆದರೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ಸೇರಿಕೊಳ್ಳಬೇಕಾದ ಅನಿವಾರ್ಯತೆ ಆತನಿಗೆ ಬಂದಿತ್ತು. ಈಗಲೂ ಸೈಲ್‌ಗೆ ಪಾರ್ಲಿಮೆಂಟ್ ಕನಸು ಹಗಲಲ್ಲೂ ಬೀಳುತ್ತಿದೆ.

ಈಗ ಸೈಲ್ ಒಂದಲ್ಲ ಹತ್ತಾರು ಕಾರಣಕ್ಕಾಗಿ ಬಿಜೆಪಿಯತ್ತ ತೇಲುಗಣ್ಣು ಬಿಡುವಂತಾಗಿದೆ. ಇಷ್ಟು ದಿನ ಆತ ಕಾಂಗ್ರೆಸ್‌ಲ್ಲಿ ತನ್ನನ್ನು ಬಿಟ್ಟರೆ ಟಿಕೆಟ್ ತರುವ ಶಕ್ತಿವಂತ ಬೇರ್‍ಯಾರೂ ಇಲ್ಲವೆಂದುಕೊಂಡಿದ್ದ. ಆದರೆ ಮಾಜಿ ಸಂಸದೆ ಮ್ಯಾಗಿಯ ಪುಢಾರಿ ಪುತ್ರರತ್ನ ನಿವೇದಿತ್ ಆಳ್ವ ತನಗಿರುವ ದಿಲ್ಲಿ ಸಂಪರ್ಕ ಬಳಸಿ ಕಾರವಾರದಲ್ಲಿ ಕಾಂಗ್ರೆಸ್ ತರುವ ಪ್ರಯತ್ನ ನಡೆಸಿರುವುದು ಸೈಲ್‌ನ ಕಂಗೆಡಿಸಿದೆ. ಈ ನಿವೇದಿತ್ ಆಳ್ವ ಶಿರಸಿಯಿಂದ ವಿಧಾನಸಭೆಗೆ ಸ್ಪರ್ಧಿಸುವ ಪ್ಲಾನ್ ಹಾಕಿದ್ದು ಫ್ಲಾಪ್ ಆಗಿದೆ. ಆತ ಶಿರಸಿಯಲ್ಲಿ ಮನೆ ಮಾಡಿಕೊಂಡಿದ್ದ. ಕರಾವಳಿ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿದ್ದಾಗ ಶಿರಸಿ ಸೀಮೆಯಲ್ಲಿ ಹಲವು ಬ್ರಿಡ್ಜ್ ರಸ್ತೆ, ಮೀನು ಮಾರುಕಟ್ಟೆಯಂಥ ಕಾಮಗಾರಿ ಮಾಡಿಸಿದ್ದ. ಆದರೆ ಸ್ಥಳೀಯ ಬಹುಸಂಖ್ಯಾತ ದೀವರ ಧೀರ ಭೀಮಣ್ಣ ನಾಯ್ಕ ಕಾಂಗ್ರೆಸ್ ಟಿಕೆಟ್‌ಗೆ ಚಂಡಿ ಹಿಡಿದು ಕೂತಿರುವುದರಿಂದ ನಿವೇದಿತ್ ಕ್ಷೇತ್ರಾಂತರ ಮಾಡಬೇಕಾಗಿ ಬಂದಿದೆ. ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ ಎದುರು ಹಾಕಿಕೊಂಡು ಶಿರಸಿಯಲ್ಲಿ ಗೆಲ್ಲೋದು ಕಷ್ಟವೆಂಬುದು ನಿವೇದಿತ್‌ಗೆ ಅರ್ಥವಾಗಿದೆ. ಬಿಜೆಪಿಯ ಕಾಗೇರಿ ಸೋಲಿಸುವ ಸಾಮರ್ಥ್ಯ ಇರುವುದು ಶಿರಸಿ ಕಾಂಗ್ರೆಸಲ್ಲಿ ಮೊದ್ಮಣಿ ಭೀಮಣ್ಣನಿಗೊಬ್ಬನಿಗೇ!


ಯಾವಾಗ ನಿವೇದಿತ್ ಕಾರವಾರದ-ಅಂಕೋಲಾ ಕ್ಷೇತ್ರದಲ್ಲಿ ಸ್ಪರ್ಧಿಸುವ ಯೋಚನೆ ಶುರು ಮಾಡಿದ್ದಾನೆಂಬುದು ಸೈಲ್‌ಗೆ ಗೊತ್ತಾಯಿತೋ ಆಗಾತ ಬಿಜೆಪಿ ಸೇರುವ ಪ್ರಯತ್ನ ಆರಂಭಿಸಿದ್ದಾನೆ. ಸಂಸದ ಅನಂತ್ಮಾಣಿ ಹಿಡಿದುಕೊ... ಸರ್ಕಸ್ ಮಾಡುತ್ತಿದ್ದಾನೆ. ದಿಲ್ಲಿತನಕವೂ ಅನ... ಜತೆಗೂಡಿಯೇ ಹೋಗಿ ಬಂದಿದ್ದಾನೆ. ಅಲ್ಲಿ ಬಿಜೆ... ಘಟಾನುಘಟಿಗಳ ಸಂಧಿಸಿದ ಸೈಲ್ ಬೆಂಗಳೂರಿಗೆ ಬ... ಯಡ್ಡಿ ಪಾದಕ್ಕೆ ಡೈ ಹೊಡೆದಿದ್ದಾನೆ. ಮೊದಮೊ... ಪಹರೆ ನಾಗನಿಗೆ ಬೆಂಬಲಿಸುತ್ತಾ ಬಂದ ಅನಂತ... ಆತ ಸೈಲ್ ಎದುರು ಸ್ಪರ್ಧಿಸುವಂತ ಶಕ್ತಿಯಿರುವ... ಎಂಬುದು ಖಾತ್ರಿಯಾಗಿದೆ. ಹೀಗಾಗಿ ಅನಂತ್ಮಾಣಿ ಸೈ... ಸಮರ್ಥನೆಂದು ಭಾವಿಸಿದ್ದಾನೆ. ಹಾಗಂತ ಸೈಲ್ ಕಾ... ಟಿಕೆಟ್ ಬೇಡವೇ ಬೇಡವೆಂದು ದೃಢ ನಿರ್ಧಾರಕ್ಕೂ ... ಬಂದಿಲ್ಲ.

ಆತನ ಲೆಕ್ಕಾಚಾರ ಮಜಾ ಆಗಿದೆ. ಕಾಂಗ್ರೆಸ್... ನಿವೇದಿತ್ ಆಳ್ವಾ, ಬಿಜೆಪಿಯಿಂದ ಪಹರೆ ನಾಗ ಅ... ಆನಂದ ಅಸ್ನೋಟಿಕರ್ ಸ್ಪರ್ಧಿಸಿದರೆ ಆಗ ಸ... ಪಕ್ಷೇತರನಾಗಿ ಅಖಾಡಕ್ಕೆ ಇಳಿಯುವ ಗಣಿತ ಹಾಕಿ... ಈ ಕಾಳಗದಲ್ಲಿ ತಾನು ಮತ್ತೆ ಪಕ್ಷೇತರನಾಗಿ ಗೆಲ್ಲೋ... ಸುಲಭವೆಂದು ಭಾವಿಸಿರುವ ಸೈಲ್‌ಗೆ ಭಯವಿರುವ... ಈಗ ಬಿಜೆಪಿಯ ಆಕರ್ಷಣೆಯ ಕೇಂದ್ರವಾಗಿರುವ ರೂ... ನಾಯ್ಕ್ ಎಂಬ ಸುಂದರಾಂಗಿ ಒಬ್ಬಳದೇ! ಈಕೆ ಎಡ... ಆನಂದ ಅಸ್ನೋಟಿಕರ್‌ನ ಪರ್ವದಲ್ಲಿ ರಾಜಕಾರಣೆ... ಅವತರಿಸಿದವಳು. ಒಂದು ಅವಧಿಗೆ ಕಾರವಾರ ತಾ... ಅಧ್ಯಕ್ಷೆಯೂ ಆಗಿ ಮಿಂಚಿದಾಕೆ. ಬಳ್ಳಾರಿ-ಚಿತ್ರದು... ಕಬ್ಬಿಣದ ಅದಿರು ದಂಧೆಯಲ್ಲಿ ಹಿಟಾಚಿ, ಟಿಪ್ಪರ್... ದುಬಾರಿ ಮೆಷನರಿ ತೊಡಗಿಸಿರುವಾಕೆ. ಹೀಗಾಗಿ ... ಬಿಜೆಪಿಯ ಗಣಿ ಮಾಫಿಯಾದ ಸಂಪರ್ಕವೂ ಪುಷ್ಕಳ... ಸಿಕ್ಕಿದೆ. ರೂಪಾಲಿ ಆಗಾಗ ಶಿವಮೊಗ್ಗೆಗೆ ಹೋಗಿ ... ಪದತಲದಲ್ಲಿ ತಲೆ ಇಟ್ಟು ಆಶೀರ್ವಾದ ಪಡೆಯ... ಅಭ್ಯಾಸವೂ ಬೆಳೆಸಿಕೊಂಡಿದ್ದಾಳೆ. ಅತ್ತ 'ಹಿತೈಷಿ' ಆ... ಅಸ್ನೋಟಿಕರ್‌ನ ಮೂಲಕ ಈಶ್ವರಿ ಪರಿಚಯ... ಬೆಳೆಸಿಕೊಂಡಿದ್ದಾಳೆ.


ಆನಂದ ಅಸ್ನೋಟಿಕರ್‌ನ ಮಂತ್ರಿಗಿರಿ ಯುಗ... ಸರ್ಕಾರಿ ಕಾಮಗಾರಿಯ ಗುತ್ತಿಗೆದಾರಳಾಗಿ ಅವತ... ರೂಪಾಲಿ ಈಗ ಕಾರವಾರ-ಅಂಕೋಲೆಯ ... ಕಾರ್ಯಕ್ರಮಗಳಿಗೆ ಲಕ್ಷದ ಲೆಕ್ಕದಲ್ಲೇ ಹಣ ... 'ಜನಪ್ರಿಯತೆ' ಪಡೆಯಲು ಹವಣಿಸುತ್ತಿದ್ದಾಳೆ. ಆಕೆ ಕ್ಷೇತ... ಧೂಳು ಹರಿಸುತ್ತಿರುವ ಪರಿಗೆ ಶಾಸಕ ಸೈಲ್ ಬೆಚ್ಚಿಬಿದ್ದಿ... ಬಹುಸಂಖ್ಯಾತ ಕೊಂಕಣ ಮರಾಠ ಜಾತಿಯ ... ರೂಪಾಲಿ. ಆಕೆಯ ಗಂಡ ಕೊಂಕಣ ಮರಾಠ. ... ಕ್ರಿಶ್ಚಿಯನ್. ತಂದೆ ಪಡ್ತಿ ಸಮುದಾಯದವರು. ... ಮೂರು ಜಾತಿಗಳು ಆಕೆಯನ್ನು ತಮ್ಮವಳೆಂದು ಸ್ವೀಕರಿ... 'ಅಪಾಯ'ದ ಅರಿವೂ ಸೈಲ್‌ಗಾಗಿದೆ. ರೂಪಾಲಿಯ ... ನಿಲುವಿನಷ್ಟೇ ಆಕರ್ಷಕ ಆಕೆಯ ರಾಜಕೀಯ-ಸಾಮಾ... ಚಟುವಟಿಕೆ.


ಇಂತಿಪ್ಪ ರೂಪಾಲಿ ನಾಯ್ಕ್ ಬಿಜೆಪಿ ಕ್ಯಾಂಡಿಡೇಟ... ತನಗೆ ಗಂಡಾಂತರ ಎಂಬುದು ಸೈಲ್‌ಗೆ ಚಿಂತೆಗೆ... ಮಾಡಿದೆ. ಹಾಗಾಗಿ ಆತ ತಾನೇ ಬಿಜೆಪಿ ಕ್ಯಾಂಡಿಡೇಟಾ... ಯೋಚಿಸುತ್ತಿದ್ದಾನೆ. ಈಗಾತನದು ರೂಪಾಲಿ ಬಿ... ಅಭ್ಯರ್ಥಿಯಾಗೋದು ತಪ್ಪಿಸೋದೊಂದೇ ಗುರಿ. ವ... ಎಂದರೆ, ಹಣ-ತೋಳ್ಬಲದ ಶಾಸಕ ಸೈಲ್‌ನ ಆ... ಪೀಕಲಾಟ ಸುರಸುಂದರಿ ರೂಪಾಲಿಯ ಖಾಲಿ ಬ... ರಾಜಕಾರಣದ ಸುತ್ತ ಗಿರಕಿ ಹೊಡೆಯುತ್ತಿದೆ. ಒಂದ... ಖರೆ. ರೂಪಾಲಿ ನಾಯ್ಕಳ 'ಗ್ಲಾಮರ್ ಪಾಲಿಟಿಕ್ಸ್' ... ಸೈಲ್ ಒಬ್ಬನಲ್ಲಷ್ಟೇ ಅಲ್ಲ, ಬಿಜೆಪಿಯ ಟಿ... ಆಕಾಂಕ್ಷಿಗಳೆಲ್ಲರಲ್ಲೂ ನಡುಕ ಮೂಡಿಸಿದೆ.


■ ನಹ...

















ಳ್ಳಾರಿ: ರೆಡ್ಡಿ ಕುಟುಂಬ ಕಲಹದಲ್ಲಿ ಯಡ್ಡಿ ನೆರಳು?

ಒಂದು ಕಾಲಕ್ಕೆ ರೆಡ್ಡಿ ರಿಪಬ್ಲಿಕ್ ಅಂತಲೇ ಹೆಸರು ದ್ದ ಬಳ್ಳಾರಿಯಲ್ಲೀಗ ಅದೇ ರೆಡ್ಡಿ ಟೀಮಿನ ಜಂಗೀಕುಸ್ತಿ ೇ ಸದ್ದು ಮಾಡುತ್ತಿದೆ. ಎಲ್ಲವೂ ನೆಟ್ಟಗಿದ್ದಾಗ, ಅಧಿಕಾರ ಕೈಗೊಂಬೆಯಾಗಿದ್ದಾಗ ನಾಲ್ಕು ದೇಹ, ಒಂದೇ ರು ಎನ್ನುವಂತಿದ್ದ ರೆಡ್ಡಿ ಬ್ರದರ್ಸ್ ಮತ್ತು ಬಿ.ರಾಮುಲು ಯ ಸದ್ಯ ಹಾವು ಮುಂಗಸಿಯಂತೆ ಕಚ್ಚಾಡುತ್ತಾ ಗಿಳಿದಿದ್ದಾರೆ. ಅದ್ಯಾವಾಗ ಆಸ್ತಿ ವಿಚಾರಕ್ಕೆ ಸಂಬಂಧಿಸಿ ಬ್ರದರ್‌ಗಳ ಹಿರಿಯಣ್ಣ ಕಂ ಮಾಜಿ ಸಚಿವ ಕರುಣಾಕರ ಸಂಸದ ಶ್ರೀರಾಮುಲು ವಿರುದ್ಧ ನ್ಯಾಯಾಲಯದಲ್ಲಿ ಜಡಿದನೋ ಅಂದಿನಿಂದ ಶುರುವಾದ ದೋಸ್ತಿ ದಿನಕ್ಕೊಂದು ವಿಚಿತ್ರ ತಿರುವು ಪಡೆಯುತ್ತಾ ಬಂದಿದೆ. ಾವಣೆಯ ಹೊತ್ತಿಗೆ ಅದು ಬಿಗ್ ಫೈಟ್ ಆಗುವ ಸಾಧ್ಯತೆಗಳೂ ಎದ್ದು ಕಾಣುತ್ತಿವೆ.

ಎಲ್ಲಾ ಶುರುವಾದದ್ದು....


1997ರಲ್ಲಿ ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲು ರೂ ಸೇರಿ ಬಳ್ಳಾರಿ ನಗರದ ಹದ್ದಿನಗುಂಡು (ಈಗಿನ ಸ್ವರಾಜ್ ನಗರ) ಎಂಬಲ್ಲಿ ಪ್ರತ್ಯೇಕವಾಗಿ ಜಮೀನು ೇದಿಸಿದ್ದರು. ನಂತರ ರೆಡ್ಡಿ, ಅದನ್ನು ಕೃಷಿಯೇತರ ೀನನ್ನಾಗಿ ಪರಿವರ್ತನೆ ಮಾಡಿ ಆಸ್ತಿಯ ಜನರಲ್ ್ ಆಫ್ ಅಟಾರ್ನಿಯನ್ನು ಶ್ರೀರಾಮುಲುಗೆ ಕೊಟ್ಟಿದ್ದ ಲಾಗುತ್ತಿದೆ. ಆ ಜಮೀನು ನಿವೇಶನಗಳಾಗಿ ವರ್ತನೆಗೊಂಡಿತ್ತು. ಇವುಗಳಲ್ಲಿ 10 ನಿವೇಶನಗಳನ್ನು ಅನುಮತಿ ಇಲ್ಲದೇ ಶ್ರೀರಾಮುಲು ಮಾರಾಟ ಡಿದ್ದಾನೆ ಅನ್ನೋದು 'ದೊಡ್ಡ' ರೆಡ್ಡಿಯ ಆಲಾಪ. ಆ ಆಸ್ತಿ ಘೋಷಣೆಯಾಗಬೇಕೆಂದು ಒತ್ತಾಯಿಸಿ ಣಾಕರ ರೆಡ್ಡಿ ಫೆಬ್ರವರಿ 3ರಂದು ಬಳ್ಳಾರಿಯ ಸಿಜೆಎಂ ಯಾಲಯದಲ್ಲಿ ದಾವೆಯನ್ನೂ ಹೂಡಿದ್ದಾನೆ. ರಾಮುಲು ಮಾತ್ರವಲ್ಲದೆ ಬಳ್ಳಾರಿಯ ಕೆ.ತಿಮ್ಮರಾಜು, ದೇವನಹಳ್ಳಿಯ ಡಿ.ರಾಘವೇಂದ್ರ ಎಂಬುವವರನ್ನೂ ರಲ್ಲಿ ಆರೋಪಿಗಳನ್ನಾಗಿ ಮಾಡಲಾಗಿದೆ. ವಿಚಾರಣೆ ತ್ತಿಕೊಂಡಿರುವ ನ್ಯಾಯಾಲಯ ಈಗಾಗಲೇ ಮೂವರು ೋಪಿಗಳಿಗೆ ಸಮನ್ಸ್ ಜಾರಿಗೊಳಿಸಿತ್ತು.

ಯಾವಾಗ ಕರುಣಾಕರ ರೆಡ್ಡಿ ರಾಮುಲು ಮೇಲೆ ೆ ಜಡಿದನೋ, ರೊಚ್ಚಿಗೆದ್ದ ಶ್ರೀರಾಮುಲು ತನ್ನ ಬಲಿಗರ ಮೂಲಕ ಕರುಣಾಕರ ರೆಡ್ಡಿ ಮೇಲೆ ಫೆಬ್ರವರಿ ರಂದು ಜಾತಿನಿಂದನೆಯ ಕೇಸ್ ಹಾಕಿಸಿದ್ದಾನೆ. ನಿಂದನೆಯ ಕೇಸ್ ಹೇರಿಸಿಕೊಂಡ ಕರುಣಾಕರ ರೆಡ್ಡಿ ಕಾಗೋಷ್ಠಿಯಲ್ಲಿ "ನನ್ನ ಸಹೋದರರು ಮತ್ತು ರಾಮುಲು ನಡುವೆ ರಾಜಕೀಯ ಭಿನ್ನಾಭಿಪ್ರಾಯ ಬಿಟ್ಟು ್ಯಾವ ಭಿನ್ನಾಭಿಪ್ರಾಯಗಳಿಲ್ಲ, ನಾವ್ಯಾರೂ ಜಗಳ ಆಡಿಲ್ಲ. ಮುಲು ಬಿಎಸ್‌ಆರ್ ಕಾಂಗ್ರೆಸ್ ಪಕ್ಷ ಕಟ್ಟಿದಾಗ ಬಿಜೆಪಿ ್ಬ ಬಿಎಸ್‌ಆರ್ ಕಾಂಗ್ರೆಸ್ ಸೇರುವಂತೆ ನನಗೆ ಆತ ತ ಹಾಕಿದ್ದ, ನಾನು ಅವನ ಮಾತು ಕೇಳದಿದ್ದರಿಂದ ೆ ಹಗೆತನ ಸಾಧಿಸುತ್ತಿದ್ದಾನೆ. ಜೊತೆಗೆ ನನಗೆ ಸೇರಿದ ನಿವೇಶನಗಳನ್ನು ಮಾರಾಟ ಮಾಡಿದ್ದಲ್ಲದೆ 'ಇನ್ನೂ ಸ ನಿವೇಶನ ಮಾರುತ್ತೇನೆ, ಅದೇನ್ ಮಾಡುತ್ತಾನೋ ೇಡಿಕೊಳ್ಳುತ್ತೇನೆ' ಅಂತ ಧಮಕಿ ಹಾಕಿದ್ದರಿಂದ ದೂರು ಟ್ಟಿದ್ದೇನೆ. ಆದರೆ ಆತ ನನ್ನ ಮೇಲೆ ಜಾತಿನಿಂದನೆ ಹಾಕಿಸಿರೋದು ಎಳ್ಳಷ್ಟೂ ಸರಿಯಿಲ್ಲ" ಅಂತ ಬಿಕೊಂಡ. ಜೊತೆಗೆ, ಜಾತಿನಿಂದನೆ ನಡೆದಿದೆ ಎನ್ನಲಾದ ತಾನು ಊರಲ್ಲೇ ಇರಲಿಲ್ಲ, ಹಾಗಾಗಿ ಅದು ಬೋಗಸ್ ಅಂತಲೂ ಅವಲತ್ತುಕೊಂಡ.

ರಾಮುಲು ಬೆನ್ನಿಗೆ ಸಣ್‌ರೆಡ್ಡಿ

ಈ ಪ್ರಕರಣ ವಿಚಿತ್ರ ಟ್ವಿಸ್ಟ್ ಪಡೆದದ್ದೇ ರೆಡ್ಡಿ ಬ್ರದರ್ಸ್‌ಗಳ ಹೋದರ ಸೋಮಶೇಖರ ರೆಡ್ಡಿಯ ಎಂಟ್ರಿಯಿಂದ. ಈತ ಅಣ್ಣನ ಪರ ನಿಲ್ಲುವ ಬದಲು ಶ್ರೀರಾಮುಲು ಪರ ಬ್ಯಾಟಿಂಗ್ ಶುರುಮಾಡಿದ್ದಾನೆ. ದೊಡ್‌ರೆಡ್ಡಿಗೆ ಸೆಡ್ಡು ಹೊಡೆವಂತೆ ತಾನೂ ಒಂದು ಪತ್ರಿಕಾಗೋಷ್ಠಿ ನಡೆಸಿದ ಈ ಸಣ್‌ರೆಡ್ಡಿ "ನಿವೇಶನ ವಿಚಾರವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬಹುದಿತ್ತು. ಅದು ಬಿಟ್ಟು ನಮ್ಮ ಏಳಿಗೆಗೆ ಕಾರಣೀಭೂತರಾದ ರಾಮುಲು ಮೇಲೆ ದೂರು ನೀಡಿದ್ದು ಸರಿಯಲ್ಲ. ಆತ ನಮ್ಮ ಕುಟುಂಬಕ್ಕೆ ಆಧಾರಸ್ತಂಭ. ನಮ್ಮೆಲ್ಲರ ಜೀವನಾಡಿ. ಇಂತಹ ವ್ಯಕ್ತಿಯ ವಿರುದ್ಧ ದೂರು ನೀಡುವ ಮಟ್ಟಕ್ಕೆ ದ್ವೇಷ ಹೋಗಬಾರದಿತ್ತು. ಕರುಣಾಕರ ರೆಡ್ಡಿ ನನಗೆ ಅಣ್ಣ ಹೇಗೋ, ರಾಮುಲು ಕೂಡಾ ನನ್ನ ತಮ್ಮನಿದ್ದಂತೆ. ಆತನಿಂದಲೇ ಕರುಣಾಕರ ರೆಡ್ಡಿ ಸಂಸದ ರಾದದ್ದು, ಕಂದಾಯ ಸಚಿವರಾದದ್ದು. ಇದನ್ನು ಕರುಣಾಕರ ರೆಡ್ಡಿ ಮರೆಯಬಾರದಿತ್ತು" ಅಂತ ಬಾಂಬ್ ಸಿಡಿಸಿದ್ದಾನೆ.

ಅಷ್ಟೇ ಅಲ್ಲದೇ, "ರಾಮುಲು ಯಾವತ್ತೂ ಸ್ವಾರ್ಥದಿಂದ ಯೋಚಿಸಿಲ್ಲ. ಒಎಂಸಿ ಕಂಪನಿಯನ್ನು ಜನಾರ್ದನ ರೆಡ್ಡಿಗೆ ಕೊಡಿಸುವಲ್ಲಿ ಆತ ಮಹತ್ವದ ಪಾತ್ರ ವಹಿಸಿದ್ದ. ಒಎಂಸಿ ಕಂಪನಿ ಇಲ್ಲದಿದ್ದರೆ ಇಂದು ನಾವೆಲ್ಲಿ ಇರುತ್ತಿದ್ದೆವು? ಎನ್ನೋಬಲ್ ಇಂಡಿಯಾದಲ್ಲಿ ದೊಡ್ಡ ಸಮಸ್ಯೆ ಬಂದಾಗ ಆತನೇ ಜೊತೆಗಿದ್ದು ರಕ್ಷಣೆ ಮಾಡಿದ್ದ. ನಾವೆಲ್ಲರೂ ರಾಮುಲು ಹಿಂಬಾಲಕರಾಗಿದ್ದು ಈಗಲಾದರೂ ಕರುಣಾಕರ ರೆಡ್ಡಿ ದಾವೆ ಹಿಂಪಡೆಯಲಿ. ಜಾತಿನಿಂದನೆ ಕೇಸ್ ವಾಪಸ್ ತೆಗೆದುಕೊಳ್ಳುವಂತೆ ಶ್ರೀರಾಮುಲು ಬೆಂಬಲಿಗರನ್ನು ಮನವೊಲಿಸುತ್ತೇನೆ" ಎಂಬ ಸಂಧಾನಸೂತ್ರವನ್ನೂ ಮುಂದಿಟ್ಟಿದ್ದ.



ರೆಡ್ಡಿ ಕುಟುಂಬದ ನಡುವೆ ಇರುವ ಈ ಬಿರುಕನ್ನು ದೊಡ್ಡದಾಗಿಸಿ, ಅವರವರೇ ಕಿತ್ತಾಡುವಂತೆ ಮಾಡಿ, ಒಂದುಕಾಲಕ್ಕೆ ತನಗೆ ಮಗ್ಗುಲ ಮುಳ್ಳಾಗಿದ್ದ ರೆಡ್ಡಿಗಳನ್ನು ಬಳ್ಳಾರಿಯಲ್ಲಿ ಮಟ್ಟಹಾಕಬೇಕು ಅಂತ ಸ್ವತಃ ಯಡ್ಡಿಯೇ ತನ್ನ ಹಿಂಬಾಲಕರ ಮೂಲಕ ಈ ಕುಟುಂಬ ಕದನ ಸೃಷ್ಟಿಸಿದ್ದಾನೆ ಅನ್ನೋ ಮಾತುಗಳು ಕೇಳಿಬರುತ್ತಿವೆ. ರೆಡ್ಡಿಗಳು ಅಡ್ಡಡ್ಡ ಮಲಗಿದಂತಾಗುತ್ತೆ, ಜೊತೆಗೆ ತನ್ನ ಚೇಲಾನಿಗೆ ಟಿಕೆಟ್ ಸಿಗಲು ದಾರಿಯೂ ಸುಗಮವಾಗುತ್ತೆ ಅನ್ನೋ ಲೆಕ್ಕಾಚಾರ ಯಡ್ಡಿಯದ್ದಾಗಿರಬಹುದು.

ಕಣ್ಮರೆಯಾಗಿದ್ದ 'ಕರುಣೆ'

ಜನಾರ್ದನ ರೆಡ್ಡಿ ಜೈಲಿಗೆ ಹೋದಾಗ ಕರುಣಾಕರ ರೆಡ್ಡಿ ಒಂದು ಸಲ ಮನೆಗೆ ಭೇಟಿ ನೀಡಿದ್ದು ಬಿಟ್ಟರೆ ಮತ್ತೆ ಅತ್ತ ಸುಳಿದೇ ಇರಲಿಲ್ಲ. ಅಲ್ಲದೇ, ಸಿಬಿಐ ವಿಚಾರಣೆಯ ನಂತರ ಜನಾರ್ದನ ರೆಡ್ಡಿಯನ್ನು ಭೇಟಿ ಮಾಡುವ ಉಸಾಬರಿಗೇ ಕರುಣಾಕರ ರೆಡ್ಡಿ ಮುಂದಾಗಿರಲಿಲ್ಲ. ಆತ ಅಕ್ಷರಶಃ ನಾಪತ್ತೆಯಾಗಿದ್ದ. ಇದು ಜನಾರ್ದನ ರೆಡ್ಡಿಯನ್ನೂ ಒಳಗೊಂಡಂತೆ ಸೋಮಶೇಖರ್ ರೆಡ್ಡಿ, ರಾಮುಲು ಕೋಪಕ್ಕೆ ಕಾರಣ. ಜೈಲ್ ಜನಾರ್ದನ ಬೇಲ್ ಪಡೆದು ಹೊರಗೆ ಬಂದಾಗಿನಿಂದಲೂ ರೆಡ್ಡಿ ಕುಟುಂಬದಲ್ಲಿ ಈ ಅಸಮಾಧಾನ ಹೊಗೆಯಾಡುತ್ತಲೇ ಇತ್ತು. ಅದು ನಿವೇಶನದ ನೆಪದಲ್ಲಿ ಈಗ ಭುಗಿಲೆದ್ದಿದೆ. ಹಾಗಾಗಿಯೇ ಸೋಮಶೇಖರ್ ರೆಡ್ಡಿ ತನ್ನ ಅಣ್ಣನ ಪಕ್ಷ ವಹಿಸುವ ಬದಲು ದೋಸ್ತಿಯ ನೆಪದಲ್ಲಿ ರಾಮುಲು ಬೆನ್ನಿಗೆ ನಿಂತಿರೋದು. ಅಂದಹಾಗೆ, ರೆಡ್ಡಿಗಳ ಕುಟುಂಬ ಕಲಹ ಯಾವ ಮಟ್ಟಕ್ಕೆ ಹೋಗಿ ತಲುಪಿದೆಯೆಂದರೆ ಇತ್ತೀಚೆಗಷ್ಟೇ ಜಿಜುಬಿ ಮುನ್ನೂರು (?) ಕೋಟಿಯಲ್ಲಿ ಮುಗಿದ, ಬಡ ಜನಾರ್ದನ ರೆಡ್ಡಿಯ ಮಗಳು ಬ್ರಹ್ಮಿಣಿಯ 'ಸರಳ' ಮದುವೆಗೆ ಕರುಣಾಕರ ರೆಡ್ಡಿಯನ್ನು ಕರೆದೇ ಇರಲಿಲ್ಲವಂತೆ. ಇದನ್ನು ಸ್ವತಃ ಕರುಣಾಕರ ರೆಡ್ಡಿಯೇ ಹೇಳಿಕೊಂಡಿದ್ದಾನೆ.

ರೆಡ್ಡಿ ಕುಟುಂಬದಲ್ಲಿ ಯಡ್ಡಿ ಪೊಲಿಟಿಕ್ಸ್!


ಮೇಲ್ನೋಟಕ್ಕೆ ಇದು ಆಸ್ತಿ ವ್ಯಾಜ್ಯದಂತೆ ಕಂಡು ಬಂದರೂ ಇದರ ಹಿಂದೆ ನವರಂಗಿ ರಾಜಕಾರಣದ ಕುರುಹುಗಳು ಎದ್ದು ಕಾಣುತ್ತವೆ. ಯಾಕೆಂದರೆ ಅನಾಮತ್ತು ಕರ್ನಾಟಕವನ್ನೇ ಬಗೆದು ತಿಂದವರಿಗೆ, ಬಳ್ಳಾರಿಯ ಭೂಸಂಪತ್ತನ್ನೇ ಮಾರಿಕೊಂಡ ಮಹಾ ಖದೀಮರಿಗೆ ಯಃಕಶ್ಚಿತ್ ಐದೋ ಹತ್ತೋ ನಿವೇಶನಗಳು ಯಾವ ಲೆಕ್ಕ! ರೆಡ್ಡಿಗಳು ತಂತಮ್ಮ ಅಂಗಿ ಹರಿದುಕೊಳ್ಳುತ್ತಿರೋದರ ಹಿಂದೆ ಬಿಜೆಪಿಯ ಭಸ್ಮಾಸುರ ಯಡ್ಡಿಯ ಕೃಪಾಶೀರ್ವಾದವಿದೆ. ಕರುಣಾಕರ ರೆಡ್ಡಿಯದು ಹರಪನಹಳ್ಳಿ ಕ್ಷೇತ್ರ. ಕಳೆದ ಬಾರಿ ಕಾಂಗ್ರೆಸ್‌ನ ಎಂ.ಪಿ.ರವೀಂದ್ರನ ಎದುರು ಹೀನಾಯವಾಗಿ ಸೋತ ಕರುಣಾಕರ ರೆಡ್ಡಿ 2018ರ ಎಲೆಕ್ಷನ್‌ನಲ್ಲಿ ಗೆಲ್ಲಲೇಬೇಕು ಅಂತ ಬಿಜೆಪಿ ಅಭ್ಯರ್ಥಿಯಾಗಲು ತಾಲೀಮು ಶುರು ಮಾಡಿದ್ದಾನೆ. ಆದರೆ ಹರಪನಹಳ್ಳಿಯಿಂದ ತನ್ನ ಕೆಜೆಪಿ ಕಟ್ಟಾಳು ಪಂಚಮಸಾಲಿ ಲಿಂಗಾಯತ ಕೊಟ್ರೇಶ್ ಎಂಬಾತನಿಗೆ ಟಿಕೆಟು ಕೊಡಬೇಕೆನ್ನುವುದು ಯಡ್ಡಿಯ ಹಂಬಲ. ಇದು ಕರುಣಾಕರ ರೆಡ್ಡಿಗೆ ತಲೆನೋವಾಗಿ ಪರಿಗಣಿಸಿದೆ. ಹಾಲಿ ಕಾಂಗ್ರೆಸ್ ಶಾಸಕ ಎಂ.ಪಿ.ರವೀಂದ್ರ ಬಗ್ಗೆ ಕ್ಷೇತ್ರದ ಜನರಲ್ಲಿ ಅಸಮಾಧಾನವಿದೆ. ಜನರ ಕೈಗೆ ಸಿಗೋದಿಲ್ಲ ಅಂತ ಜನ ನೇರವಾಗಿ ಆರೋಪಿಸಿದರೂ ರವೀಂದ್ರ ಡೋಂಟ್ ಕೇರ್ ಧಾಟಿಯಲ್ಲಿ ತನ್ನದೇ ಪಟಾಲಮ್ಮಿನ ಮೋಜಿನ ಕೂಟದಲ್ಲೇ ಮುಳುಗಿದ್ದಾನೆ. ಕೇಳಲುಹೋದ ಜನರನ್ನೇ "ಏನು ಮಾಡುತ್ತೀರಿ? ಈ ಸಲ ಸೋಲಿಸುತ್ತೀರಾ, ಸೋಲಿಸಿ ನೋಡೋಣ" ಎನ್ನುವಷ್ಟರ ಮಟ್ಟಿಗೆ ರವೀಂದ್ರ ಹರಪನಹಳ್ಳಿಯ ವಿಲನ್ ಆಗಿ ಬದಲಾಗಿದ್ದಾನೆ. ಹಾಗಾಗಿ ಇಲ್ಲಿ ಬಿಜೆಪಿ ಹುರಿಯಾಳು ಗೆಲ್ಲುವ ಛಾನ್ಸು ಸದ್ಯಕ್ಕೆ ದಟ್ಟವಾಗಿ ಕಾಣುತ್ತಿದೆ. ಆದ್ದರಿಂದಲೇ ಇಲ್ಲಿನ ಟಿಕೆಟ್‌ಗಾಗಿ ಕರುಣ್ ಮತ್ತು ಯಡ್ಡಿಯ ಕೊಟ್ರೇಶ್ ನಡುವೆ ಜಿದ್ದಾಜಿದ್ದಿ ಏರ್ಪಟ್ಟಿದೆ.

ರೆಡ್ಡಿ ಕುಟುಂಬದ ನಡುವೆ ಇರುವ ಈ ಬಿರುಕನ್ನು ದೊಡ್ಡದಾಗಿಸಿ, ಅವರವರೇ ಕಿತ್ತಾಡುವಂತೆ ಮಾಡಿ, ಒಂದುಕಾಲಕ್ಕೆ ತನಗೆ ಮಗ್ಗುಲ ಮುಳ್ಳಾಗಿದ್ದ ರೆಡ್ಡಿಗಳನ್ನು ಬಳ್ಳಾರಿಯಲ್ಲಿ ಮಟ್ಟಹಾಕಬೇಕು ಅಂತ ಸ್ವತಃ ಯಡ್ಡಿಯೇ ತನ್ನ ಹಿಂಬಾಲಕರ ಮೂಲಕ ಈ ಕುಟುಂಬ ಕದನ ಸೃಷ್ಟಿಸಿದ್ದಾನೆ ಅನ್ನೋ ಮಾತುಗಳು ಕೇಳಿಬರುತ್ತಿವೆ. ರೆಡ್ಡಿಗಳು ಅಡ್ಡಡ್ಡ ಮಲಗಿದಂತಾಗುತ್ತೆ, ಜೊತೆಗೆ ತನ್ನ ಚೇಲಾನಿಗೆ ಟಿಕೆಟ್ ಸಿಗಲು ದಾರಿಯೂ ಸುಗಮವಾಗುತ್ತೆ ಅನ್ನೋ ಲೆಕ್ಕಾಚಾರ ಯಡ್ಡಿಯದ್ದಾಗಿರಬಹುದು. ಯಡ್ಡಿಯ ಫ್ಯಾಕ್ಟರನ್ನು ಸುಳ್ಳು ಅಂತ ಪಕ್ಕಕ್ಕಿಟ್ಟರೂ ತನ್ನ ಸೋದರರೇ ತನ್ನ ವಿರುದ್ಧ ಮಸಲತ್ತು ಮಾಡಬಹುದೆನ್ನುವ ಸುಳಿವಂತೂ ಕರುಣಾಕರ ರೆಡ್ಡಿಗೆ ಸಿಕ್ಕಿದೆ. ಹಾಗೆ ನೋಡಿದರೆ ಕೊಟ್ರೇಶಿಯನ್ನು ಇಡಿಯಾಗಿ ಕೊಂಡುಕೊಳ್ಳುವ ತಾಕತ್ತು ಕರುಣಾಕರ ರೆಡ್ಡಿಗಿದೆ. ಆದರೆ ಚುನಾವಣಾ ಸಂದರ್ಭದಲ್ಲಿ ಎದುರಾಗಬಹುದಾದ ಅಡೆತಡೆಗಳನ್ನು ನಿವಾರಿಸಿಕೊಳ್ಳಲು ಈಗಿನಿಂದಲೇ ತಯಾರಿ ನಡೆಸಿರುವ ಆತ ಈ ದಾವೆಯನ್ನು ಹೂಡುವ ಮೂಲಕ, "ನನ್ನ ರಾಜಕೀಯ ತಂಟೆಗೆ ಬಂದರೆ ನಾನೂ ತಿರುಗೇಟು ನೀಡಬಲ್ಲೆ" ಅನ್ನೋ ಮೆಸೇಜನ್ನು ರವಾನಿಸಿದ್ದಾನೆ. ಕೌಟುಂಬಿಕ ಕಲಹದೊಂದಿಗೆ ರಾಜಕಾರಣವೂ ಬೆರೆತಿರೋದರಿಂದ ಇದು ಸದ್ಯಕ್ಕೆ 'ಶುಭಂ' ಕಾಣುವ ಸೀರಿಯಲ್ ಅಲ್ಲ ಅನ್ನೋದು ಮಾತ್ರ ಸತ್ಯ.

■ ಮುತ್ತುರಾಜು

ರಂಗಸ್ವಾಮಿ ತನ್ನ ಲಿಕ್ಕರ್ ದಂಧೆ ವಿಸ್ತರಿಸಲು ಮಂಡ್ಯ ಭೂಗತಲೋಕದ ಕ್ರಿಮಿಗಳಿಗೆ ಆಶ್ರಯ ನೀಡಿದ್ದ. ರೌಡಿ ಅಣ್ಣಯ್ಯನನ್ನು ಕೊಂದು ಕೇಸು ಮುಗಿಸಿಕೊಂಡು ಹೊರಬಂದ ಕಲ್ಲಹಳ್ಳಿಯ ರೌಡಿಗಳಾದ ಅಶೋಕ್ ಪೈ ಹಾಗೂ ಬುಯ್ಯಾಸ್ವಾಮಿಯನ್ನು ಸಾಕಿಕೊಂಡಿದ್ದ. ಈತನ ರೇಡಿಂಗ್ ಟೀಂನಲ್ಲಿದ್ದ ಅಶೋಕ್ ಪೈ ರಂಗಸ್ವಾಮಿಯ ಗಮನಕ್ಕೆ ಬರದಂತೆ ಲಕ್ಷಾಂತರ ರೂಪಾಯಿ ಮಾಡಿಕೊಂಡಿದ್ದನ್ನು ತಿಳಿದ ಮೇಲೆ ಆತನನ್ನು ಹೊರಹಾಕಿದ್ದ. ರಂಗಸ್ವಾಮಿ ನಿಗೂಢವಾಗಿ ಹತ್ಯೆಯಾಗಿರೋದು ಮಂಡ್ಯ ಪಾತಕಲೋಕದಲ್ಲಿ ಮತ್ತಷ್ಟು ಗೋಜಲನ್ನು ಸೃಷ್ಟಿಸಿದೆ. ಫೆಬ್ರವರಿ 7ರಂದು ಮಲಗಿದ್ದ ಪೈ ಮೇಲೆ ಅಟ್ಯಾಕ್ ಮಾಡಿಸಿದ್ದು ಲಿಕ್ಕರ್ ರಂಗಸ್ವಾಮಿಯಾ? ಅವನ ಹಳೇ ಜಿದ್ದನ್ನು ಕಂಡು ಕನಲಿಹೋದ ಅಶೋಕ್ ಪೈನೇ ಲಿಕ್ಕರ್ ರಂಗಸ್ವಾಮಿಗೆ ವಿಷಪ್ರಾಶನ ಮಾಡಿಸಿ ಕೊಂದು ಮಲಗಿಸಿದ್ದಾನಾ? ಅಥವಾ ಇದು ಕರಾಳ ವ್ಯವಹಾರದ ಮತ್ತೊಂದು ನಿಗೂಢ ಬಲಿಯಾ?

ಮಂಡ್ಯ: ಗೂಂಡಾ ಗಾಡ್‌ಫಾದರ್ ರಂಗಸ್ವಾಮಿ ನಿಗೂಢ ಸಾವು!



ರಂಗಸ್ವಾಮಿ

ಮಂಡ್ಯ ಭೂಗತ ಪಾತಕಿಗಳ ಆಶ್ರಯದಾತ ಲಿಕ್ಕರ್ ರಂಗಸ್ವಾಮಿ ನಿಗೂಢವಾಗಿ ಸಾವನ್ನಪ್ಪಿದ್ದಾನೆ. ಅಬಕಾರಿ ದಂಧೆಯಲ್ಲಿ ಭರ್ಜರಿಯಾಗಿ ದುಡ್ಡು ಮಾಡಿದ್ದ ರಂಗಸ್ವಾಮಿ ಮಂಡ್ಯ ಭೂಗತಲೋಕಕ್ಕೆ ಎಂಟ್ರಿ ಕೊಟ್ಟ ತಪ್ಪಿಗೆ ತನ್ನ ಪ್ರೀತಿಪಾತ್ರ ಮಗನನ್ನೇ ಕಳೆದುಕೊಂಡಿದ್ದ. ಎಷ್ಟೇ ಖರ್ಚಾದರೂ ಸರಿಯೇ ತನ್ನ ಮಗ ಮಹೇಶನ ಹಂತಕರಿಗೆ ಶಿಕ್ಷೆ ಕೊಡಿಸಿಯೇ ತೀರುತ್ತೇನೆ ಎಂದು ಪಣ ತೊಟ್ಟಿದ್ದ ರಂಗಸ್ವಾಮಿ ಅದರಲ್ಲಿ ಯಶಸ್ವಿಯಾಗಿದ್ದ. ಅಷ್ಟಾದರೂ ಮಹೇಶನ ಹತ್ಯೆ ಹಿಂದಿನ ಅಸಲಿ ಸೂತ್ರಧಾರ, ರೌಡಿ ಜಡೇಜಾರವಿ ಹಂತಕ ಕಲ್ಲಹಳ್ಳಿ ಅಶೋಕ್ ಪೈ ನೆತ್ತರನ್ನು ಚೆಲ್ಲಿಯೇ ಸಿದ್ಧ ಎಂದಬ್ಬರಿಸಿದ್ದ ರಂಗಸ್ವಾಮಿ ಮಾರ್ಚ್ 3ರ ಬೆಳಗಿನ ಜಾವ ತನ್ನದೇ ಹೊಟೇಲ್‌ನ ರೂಮ್‌ನಲ್ಲಿ ರಕ್ತಕಾರಿಕೊಂಡು ನಿಗೂಢವಾಗಿ ಹೆಣವಾಗಿದ್ದಾನೆ. ರಂಗಸ್ವಾಮಿ ಅಂತ್ಯ ಹೀಗೆ ನಿಗೂಢವಾಗಿ ಆಗುತ್ತದೆಂದು ಮಂಡ್ಯದ ಜನರ್‍ಯಾರೂ ಭಾವಿಸಿರಲಿಲ್ಲ.

ನಿಗೂಢ ಸಾವು

ಮಾರ್ಚ್ 2ರ ಗುರುವಾರ ರಾತ್ರಿ ತನ್ನದೇ ಜ್ಯೋತಿ ಇಂಟರ್‌ನ್ಯಾಷನಲ್ ಹೊಟೇಲ್‌ನಲ್ಲಿ ಮಲಗಿದ್ದ ರಂಗಸ್ವಾಮಿ ಮಾರನೇದಿನ ಶುಕ್ರವಾರದ ಬೆಳಗ್ಗೆ 7.30 ಗಂಟೆಯ ವೇಳೆಗಾಗಲೇ ಎದ್ದು ಕಾಫಿ ಕುಡಿಯಲು ಬರಬೇಕಿತ್ತು. ಆದರೆ ಸಮಯ 9 ಗಂಟೆಯಾದರೂ ರಂಗಸ್ವಾಮಿ ಕಾಫಿಗೆ ಬರಲೇ ಇಲ್ಲ. ಹೋಟೆಲ್ ನೌಕರರು ರೂಮ್ ಬಾಗಿಲು ಬಡಿದರೂ ಪ್ರತಿಕ್ರಿಯೆ ಬಾರಲಿಲ್ಲ. ಕೊನೆಗೆ ಹೊಟೇಲ್ ಸಿಬ್ಬಂದಿಗಳು ರಂಗಸ್ವಾಮಿಯ ಮಗ ಶ್ರೀನಿವಾಸ್‌ನಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದರು. ಆತ ಬಂದು ಬಾಗಿಲು ಹೊಡೆಸಿ ನೋಡಿದಾಗ ರಂಗಸ್ವಾಮಿ ಬಾಯಲ್ಲಿ ರಕ್ತ ಕಾರಿಕೊಂಡು ಹಾಸಿಗೆ ಮೇಲೆ ಬಿದ್ದಿದ್ದ. ಕೂಡಲೇ ರಂಗಸ್ವಾಮಿಯನ್ನು ಜಿಲ್ಲಾಸ್ಪತ್ರೆಗೆ ಕೊಂಡೊಯ್ದರಾದರೂ ಅಷ್ಟೊತ್ತಿಗಾಗಲೇ ಆತ ಹೆಣವಾಗಿಹೋಗಿದ್ದ.

ರಂಗಸ್ವಾಮಿ ಬಾಯಲ್ಲಿ ರಕ್ತ ಕಾರಿಕೊಂಡಿದ್ದರಿಂದ ಅವರ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಪುತ್ರ ಶ್ರೀನಿವಾಸ್ ಸಾವಿನ ನಿಖರ ಕಾರಣ ಕುರಿತು ತನಿಖೆ ನಡೆಸುವಂತೆ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದ. ಹಾಗಾಗಿ ಪೊಲೀಸರು ದೇಹದ ಪೋಸ್ಟ್‌ಮಾರ್ಟಂ ನಡೆಸುವಂತೆ ಜಿಲ್ಲಾಸ್ಪತ್ರೆಯ ವೈದ್ಯರಿಗೆ ಒಪ್ಪಿಸಿದ್ದರು. ಘಟನೆಯ ಹಿಂದಿನ ರಾತ್ರಿ ರಂಗಸ್ವಾಮಿಯ ಜೊತೆಗೆ ಮದ್ಯ ಕುಡಿದಿದ್ದ ಸೇಟು ರಂಜಿತ್ ಎಂಬ ಯುವಕ ಕೂಡ ಅದೇ ರೀತಿಯಲ್ಲೇ ಸತ್ತುಬಿದ್ದಿರುವ ಮಾಹಿತಿ ಪೊಲೀಸರಿಗೆ ತಲುಪಿತ್ತು. ಕೂಡಲೇ ಅಲರ್ಟ್ ಆದ ಡಿವೈಎಸ್ಪಿ ಚಂದ್ರಶೇಖರ, ಸಿಪಿಐ ಸಂತೋಷ್, ಎಸ್‌ಐ ನಿರಂಜನ್ ಸುಭಾಷ್‌ನಗರದಲ್ಲಿರುವ ಸೇಟು ರಂಜಿತ್ ಮನೆಗೆ ಹೋಗಿ ನೋಡಿದರೆ ಆಗಲೇ ಆತನ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಲಾಗಿತ್ತು. ಕೂಡಲೇ ಸ್ಮಶಾನಕ್ಕೆ ದೌಡಾಯಿಸಿದ ಪೊಲೀಸರು ಚಿತೆಯ ಮೇಲಿದ್ದ ರಂಜಿತ್ ಶವವನ್ನು ಜಿಲ್ಲಾಸ್ಪತ್ರೆಗೆ ತಂದು ಪೋಸ್ಟ್‌ಮಾರ್ಟಂ ಮಾಡಿಸಿದ್ದಾರೆ.

ಸೇಟು ರಂಜಿತ್, ರಂಗಸ್ವಾಮಿಯ ಜ್ಯೋತಿ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿಯೇ ಮದ್ಯ ಸೇವನೆ ಮಾಡುತ್ತಿದ್ದ. ಹಲವು ಬಾರಿ ರಂಗಸ್ವಾಮಿ ಜೊತೆ ಡ್ರಿಂಕ್ಸ್ ಮಾಡುತ್ತಿದ್ದ. ಗುರುವಾರ ಸಂಜೆ ಕೂಡ ಆತ ಹೊಟ್ಟೆ ತುಂಬಾ ಕುಡಿದಿದ್ದ. ನಂತರ ಇಬ್ಬರೂ ಹೋಗಿ ಮಲಗಿದ್ದರು. ಬೆಳಗ್ಗೆ ನೋಡಿದರೆ ಇತ್ತ ರಂಗಸ್ವಾಮಿ ತನ್ನ ಹೋಟೆಲ್‌ನ ರೂಮಿನಲ್ಲಿ ನಿಗೂಢವಾಗಿ ಸಾವನ್ನಪ್ಪಿದ್ದರೆ, ಅತ್ತ ಸೇಟು ರಂಜಿತ್ ಸುಭಾಷ್‌ನಗರದ ಮನೆಯಲ್ಲಿ ಹೆಣವಾಗಿ ಮಲಗಿದ್ದ. ಪೋಸ್ಟ್‌ಮಾರ್ಟಂ ರಿಪೋರ್ಟ್ ಬರಲು ಇನ್ನೂ ಒಂದು ವಾರ ಸಮಯ ಬೇಕು. ಈ ನಡುವೆ ರಂಗಸ್ವಾಮಿಗೆ ಯಾರೋ ಡ್ರಿಂಕ್ಸ್‌ನಲ್ಲಿ ವಿಷ ಬೆರೆಸಿ ಕುಡಿಸಿದ್ದಾರೆ, ಸೇಟು ರಂಜಿತ್ ಕೂಡ ಅವನ ಜೊತೆಗೆ ಕುಡಿದಿದ್ದರಿಂದ ಆತನಿಗೂ ವಿಷಪ್ರಾಶನವಾಗಿದೆ ಎಂಬ ಚರ್ಚೆ ಹರಿದಾಡುತ್ತಿದೆ.

ಯಾರು ಲಿಕ್ಕರ್ ರಂಗಸ್ವಾಮಿ

ಮೂಲತಃ ರಾಮನಗರ ಜಿಲ್ಲೆಯ ಮಾಗಡಿಯವನಾದ ರಂಗಸ್ವಾಮಿ ಜಾತಿಯಿಂದ ಗಾಣಿಗ ಸಮುದಾಯಕ್ಕೆ ಸೇರಿದವನು. ಈಗ್ಗೆ 35 ವರ್ಷಗಳ ಹಿಂದೆ ಹೊಟ್ಟೆಪಾಡಿಗಾಗಿ ಮಂಡ್ಯಕ್ಕೆ ಬಂದು ಬಾರ್‌ವೊಂದರಲ್ಲಿ ಸಪ್ಲೈಯರ್ ಆಗಿದ್ದ. ನಂತರ ಕ್ಯಾಶಿಯರ್ ಹುದ್ದೆಗೇರಿದ್ದ ರಂಗಸ್ವಾಮಿ ಲಿಕ್ಕರ್ ದಂಧೆಯ ಆಳ-ಅಗಲ ತಿಳಿದುಕೊಂಡು ಕೆಲವೇ ವರ್ಷಗಳಲ್ಲಿ ಒಂದು ಸ್ವಂತ ಬಾರ್‌ನ ಮಾಲೀಕನಾಗಿದ್ದ. ಲಿಕ್ಕರ್ ದಂಧೆ ರಂಗಸ್ವಾಮಿಯ ಕೈಹಿಡಿದಿತ್ತು. ನಿಧಾನಕ್ಕೆ ಮಂಡ್ಯದ ಬಹುತೇಕ ಕಡೆ ಬಾರ್‌ಗಳನ್ನು ತೆರೆದ. ಮಂಡ್ಯ ಜಿಲ್ಲೆಗೆ ತನ್ನ ಹೋಲ್‌ಸೇಲ್ ಮೂಲಕ ಮದ್ಯ ಪೂರೈಸಿದ ರಂಗಸ್ವಾಮಿ ಸೆಕೆಂಡ್ಸ್ ದಂಧೆಯಲ್ಲಿ ಕೋಟಿಕೋಟಿ ದುಡಿದ. ಮತ್ತೊಬ್ಬ ಲಿಕ್ಕರ್ ದೊರೆ ಹನಕೆರೆ ನಾಗಣ್ಣ ಜೊತೆ ಪಾರ್ಟನರ್‌ಶಿಪ್‌ನಲ್ಲಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಾರಾಯಿ ಗುತ್ತಿಗೆ ಹಿಡಿದ. ಸಾರಾಯಿ ದಂಧೆ ನಿಯಂತ್ರಿಸಲು ಈ ಇಬ್ಬರು ಲಿಕ್ಕರ್ ದೊರೆಗಳಿಗೆ ರೌಡಿಗಳ ಅವಶ್ಯಕತೆ ಎದುರಾದದ್ದೇ ಆಗ.



ರಂಗಸ್ವಾಮಿ ಅವರ ಜ್ಯೋತಿ ಇಂಟರ್‌ನ್ಯಾಷನಲ್ ಹೋಟೆಲ್

ಅದಕ್ಕಾಗೇ ರಂಗಸ್ವಾಮಿ ಹಾಗೂ ಹನಕೆರೆ ನಾಗಣ್ಣ ಜಡೇಜಾರವಿ, ಚೀರನಹಳ್ಳಿ ಶಂಕರ, ಕಲ್ಲಹಳ್ಳಿ ಅಶೋಕ್ ಪೈ ಮೊದಲಾದ ನಟೋರಿಯಸ್ ರೌಡಿಗಳಿಗೆ ನೀರೆರೆದು ತಮ್ಮ ದಂಧೆಗೆ ಕಾವಲು ಮಾಡಿಕೊಂಡಿದ್ದರು. ಎಸ್.ಎಂ.ಕೃಷ್ಣ ಅವಧಿಯಲ್ಲಿ ಕರ್ನಾಟಕ ಪಾನೀಯ ನಿಗಮ (ಕೆಎಸ್‌ಬಿಸಿಎಲ್) ಅಸ್ತಿತ್ವಕ್ಕೆ ಬಂದ ತರುವಾಯ ಹೋಲ್‌ಸೇಲ್ ಮದ್ಯ ಮಾರಾಟಕ್ಕೆ ಮತ್ತು ಹೆಚ್.ಡಿ.ಕುಮಾರಸ್ವಾಮಿ ಅವಧಿಯಲ್ಲಿ ಸಾರಾಯಿ ನಿಷೇಧವಾಗಿ ಸಾರಾಯಿ ದಂಧೆಗೆ ಬ್ರೇಕ್ ಬಿತ್ತು. ಸಾರಾಯಿ ದಂಧೆ ನಿಷೇಧಕ್ಕೂ ಕೆಲ ದಿನಗಳ ಮುನ್ನವಷ್ಟೇ ಲಿಕ್ಕರ್ ರಂಗಸ್ವಾಮಿ ಹಾಗೂ ಹನಕೆರೆ ನಾಗಣ್ಣನ ಮಧ್ಯೆ ಮನಸ್ತಾಪ ಏರ್ಪಟ್ಟು ಇಬ್ಬರೂ ಬೇರ್ಪಟ್ಟಿದ್ದರು.

ಸಾರಾಯಿದಂಧೆ ನಿಂತಿದ್ದರಿಂದ ಹೋಟೆಲ್ ಉದ್ಯಮಕ್ಕೆ ಕಾಲಿಟ್ಟ ಲಿಕ್ಕರ್ ರಂಗಸ್ವಾಮಿ ಕಿರಗಂದೂರು ಗೇಟ್ ಬಳಿ ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜಿಂಗ್ ಸೌಲಭ್ಯವಿರುವ ಹತ್ತಾರು ಕೋಟಿ ಬೆಲೆಬಾಳುವ ಜ್ಯೋತಿ ಇಂಟರ್‌ನ್ಯಾಷನಲ್ ಹೋಟೆಲ್ ತೆರೆದು ಕೂತಿದ್ದ. ಮಂಡ್ಯವಲ್ಲದೆ ತನ್ನ ಹುಟ್ಟೂರು ಮಾಗಡಿ ಹಾಗೂ ಬೆಂಗಳೂರಿನಲ್ಲೂ ಹತ್ತಾರು ಬಾರ್ ತೆರೆದಿದ್ದ. ಕಲ್ಲಹಳ್ಳಿ, ಸಿಹಿನೀರು ಕೊಳ ಬಳಿ ಕೋಟ್ಯಾಂತರ ಬೆಲೆಬಾಳುವ ದಿವಿನಾದ ಬಂಗಲೆಗಳಿವೆ. ಸಂತೆಮಾಳದ ಬಳಿ ನಿವೇಶನ, ಸುರಭಿ ಕಲ್ಯಾಣ ಮಂಟಪದ ಪಕ್ಕ ಒಂದೂವರೆ ಎಕರೆ ಜಾಗವಿದೆ. ಇದರ ಬಾಬತ್ತೆ 12 ಕೋಟಿಯಷ್ಟಾಗುತ್ತದೆ. ಕೋಡಿಶೆಟ್ಟಿಪುರ ಬಳಿ 4 ಎಕರೆ ತೋಟ, ಬೆಂಗಳೂರು-ನೆಲಮಂಗಲ ರಸ್ತೆಯಲ್ಲಿ ಹತ್ತಾರು ಎಕರೆ ಇರುವ ಜಮೀನಿನ ಮೌಲ್ಯ ಏನಿಲ್ಲವೆಂದರೂ ಹಲವು ಕೋಟಿಗಳಿಗೆ ತೂಗುತ್ತದೆ.

ರಂಗಸ್ವಾಮಿ ತನ್ನ ಲಿಕ್ಕರ್ ದಂಧೆ ವಿಸ್ತರಿಸಲು ಮಂಡ್ಯ ಭೂಗತಲೋಕದ ಕ್ರಿಮಿಗಳಿಗೆ ಆಶ್ರಯ ನೀಡಿದ್ದ. ರೌಡಿ ಅಣ್ಣಯ್ಯನನ್ನು ಕೊಂದು ಕೇಸು ಮುಗಿಸಿಕೊಂಡು ಹೊರಬಂದ ಕಲ್ಲಹಳ್ಳಿಯ ರೌಡಿಗಳಾದ ಅಶೋಕ್ ಪೈ ಹಾಗೂ ಬುಯ್ಯಾಸ್ವಾಮಿಯನ್ನು ಸಾಕಿಕೊಂಡಿದ್ದ. ಈತನ ರೇಡಿಂಗ್ ಟೀಂನಲ್ಲಿದ್ದ ಅಶೋಕ್ ಪೈ ರಂಗಸ್ವಾಮಿಯ ಗಮನಕ್ಕೆ ಬರದಂತೆ ಲಕ್ಷಾಂತರ ರೂಪಾಯಿ ಮಾಡಿಕೊಂಡಿದ್ದನ್ನು ತಿಳಿದ ಮೇಲೆ ಆತನನ್ನು ಹೊರಹಾಕಿದ್ದ.

ತನಗೇ ಉಂಡೆನಾಮ ತೀಡಿ ಅಶೋಕ್ ಪೈ ಭರ್ಜರಿ ಕಾಸು ಮಾಡಿಕೊಂಡಿದ್ದು ರಂಗಸ್ವಾಮಿಯ ಕಣ್ಣುರಿಗೆ ಕಾರಣವಾಗಿತ್ತು. ಅಶೋಕ್ ಪೈನ ಸ್ನೇಹಿತ ಕಲ್ಲಹಳ್ಳಿ ಸೋಮ ಎಂಬಾತ, ಈಗ ಮೈಸೂರಿನ ಜೈಲು ಪಾಲಾಗಿರುವ ನಟೋರಿಯಸ್ ಲೇಡಿ ಡಾನ್ ಭಾಗ್ಯ ಎಂಬಾಕೆಯನ್ನು ಮದುವೆಯಾಗಿದ್ದ. ಇವರಿಬ್ಬರ ನಡುವೆ ಗಂಡ-ಹೆಂಡತಿ ಜಗಳ ತಾರಕಕ್ಕೇರಿತ್ತು. ಮಗಳಿಗೆ ಬುದ್ಧಿ ಹೇಳುವ ಬದಲು ಭಾಗ್ಯಳ ಅಮ್ಮ ಬಡ್ಡಿ ಪಾಪಮ್ಮ ಅಳಿಯ ಸೋಮನ ವಿರುದ್ಧವೇ ತಿರುಗಿ ಬಿದ್ದಿದ್ದಳು. ಇದರಿಂದ ಸಿಟ್ಟಿಗೆದ್ದ ಸೋಮ ಅತ್ತೆ ಬಡ್ಡಿ ಪಾಪಮ್ಮಳನ್ನು ಕೊಂದು ಹಾಕಿದ್ದ. ಇತ್ತ ತನ್ನ ಕೈಕೆಳಗೇ ಕೆಲಸ ಮಾಡಿಕೊಂಡು ತನಗೇ ಮುಂಡಾಯಿಸಿ ಲಕ್ಷಾಂತರ ರೂಪಾಯಿ ಕಾಸು ಮಾಡಿಕೊಂಡ ಅಶೋಕ್ ಪೈ ವಿರುದ್ಧ ಲಿಕ್ಕರ್ ರಂಗಸ್ವಾಮಿಗೆ ಎಲ್ಲಿಲ್ಲದ ಸಿಟ್ಟ... ಹಾಗಾಗಿ 'ನಿನ್ನ ತಾಯಿ ಪಾಪಮ್ಮಳ ಹತ್ಯೆ ಹಿಂದೆ ರೌ... ಅಶೋಕ್ ಪೈ ಪಾತ್ರವಿದೆ' ಅಂತ ರಂಗಸ್ವಾಮಿ, ಭಾಗ್ಯ... ಕಿವಿಯೂದಿ ಪಾಪಮ್ಮಳ ಕೊಲೆ ಕೇಸಿನಲ್ಲಿ ಪೈಯನ್ನು ಫಿಟ್ ಮಾಡಿಸಿಬಿಟ್ಟ.

ಅದಾದಮೇಲೆ ಅಶೋಕ್ ಪೈ, ರಂಗಸ್ವಾಮಿಯ ವಿರು... ಕತ್ತಿ ಮಸೆಯಲು ಶುರು ಮಾಡಿದ್ದ. ಅಷ್ಟೊತ್ತಿಗಾಗಲೆ ರಂಗಸ್ವಾಮಿ, ಜಡೇಜಾ ರವಿ ತನ್ನ ಸಾಕುರೌಡಿಯನ್ನಾ... ಮಾಡಿಕೊಂಡಿದ್ದ ಮತ್ತು ಅವನ ಮೂಲಕವೇ ಅಶೋಕ್ ಪೈಗೆ ಮಂಗಳ ಹಾಡಲು ತಂತ್ರ ಹೆಣೆದಿದ್ದ. ಇದ... ಸುಳಿವು ಸಿಕ್ಕ ಅಶೋಕ್ ಪೈ ಚೀರನಹಳ್ಳಿ ಬ್ರದರ್ಸ್‌ಗ... ಅಕ್ಕನ ಮಕ್ಕಳಾದ ಚೀರನಹಳ್ಳಿ ಚೇತನ್, ಮನು ಜೊತೆಗೂ... 2007ರ ಡಿಸೆಂಬರ್ 7ರಂದು ಮಾಯಣ್ಣನ ಕೊಪ್ಪಲು ಬಳಿ ಹಾಡುಹಗಲೆ ರೌಡಿ ಜಡೇಜಾ ರವಿಯನ್ನು ಕೊಂದು ಜೈಲು ಸೇರಿದ್ದ.

'ನಿನ್ನ ಬೆಂಗಾವಲು ಜಡೇಜಾರವಿಯನ್ನು ಕೊಂದು ಹಾಕಿದ್ದೇವೆ, ನಮಗೆ ಹಣ ಕೊಡದಿದ್ದರೆ ನಿನ್ನ ಮಗನನ್ನು ಕೊಲ್ಲುತ್ತೇವೆ' ಅಂತ ರಂಗಸ್ವಾಮಿಗೆ ಪೈ ಜೈಲಿನಿಂದಲೆ ಬೆದರಿಕೆ ಹಾಕಿದ್ದ. ಆದರೆ ಅದಕ್ಕೆ ರಂಗಸ್ವಾಮಿ ಸೊಪ್ಪು ಹಾಕಲಿಲ್ಲ. ತನ್ನ ಮಗ ಮಹೇಶ್‌ನನ್ನು ರಾಜಕಾರಣದ... ಪ್ರತಿಷ್ಠಾಪಿಸಬೇಕೆಂಬ ಹಂಬಲಕ್ಕೆ ಬಿದ್ದಿದ್ದ ರಂಗಸ್ವಾಮಿ ಆತನನ್ನು ಕಾಂಗ್ರೆಸ್ ಪಕ್ಷದಿಂದ ಬೂದನೂರು ಕ್ಷೇತ್ರ... ನಿಲ್ಲಿಸಿ ಗೆಲ್ಲಿಸಿಕೊಂಡಿದ್ದ. 2008ರ ವಿಧಾನಸಭಾ ಚುನಾವಣೆ... ತಾನೇ ಸ್ಪರ್ಧಿಸಲು ಮುಂದಾಗಿದ್ದ ರಂಗಸ್ವಾಮಿ ಅದಕ್ಕಾ... ತಯಾರಿಯನ್ನೂ ನಡೆಸಿಕೊಂಡಿದ್ದ. ಆದರೆ ಅದೊಂದು ದಿನ ಹರಿಪ್ರಿಯ ಹೋಟೆಲ್‌ನಲ್ಲಿ ಕರೆಯಲಾಗಿದ್ದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಭಾಗವಹಿಸಲೆಂದು ಬಂದಿ... ಮಹೇಶ್‌ನನ್ನು ಅಶೋಕ್ ಪೈ ಚೇಲಾಗಳು ಹಾಡುಹಗ... ಕೊಂದುಹಾಕಿದ್ದರು.


ಮಗ ಮಹೇಶ್‌ನ ಹತ್ಯೆಗೆ ಮುಯ್ಯಿ ತೀರಿಸಿಕೊಳ್ಳುವ... ಸಾಕ್ಷಿಗಳ ಬೆನ್ನಿಗೆ ನಿಂತ ರಂಗಸ್ವಾಮಿ ನಾಲ್ವರು ಆರೋಪಿಗಳಿ... ಜೀವಾವಧಿ ಶಿಕ್ಷೆಯಾಗುವಂತೆ ನೋಡಿಕೊಂಡಿದ್ದ. ಆದಾಗ... ತನ್ನ ಮಗನ ಹತ್ಯೆಯ ಸೂತ್ರಧಾರ ಅಶೋಕ್ ಪೈ ಸೂ... ಸಾಕ್ಷ್ಯಾಧಾರಗಳಿಲ್ಲದೆ ಖುಲಾಸೆಗೊಂಡದ್ದು ರಂಗಸ್ವಾಮಿಯ ಪಿತ್ತ ನೆತ್ತಿಗೇರುವಂತೆ ಮಾಡಿತ್ತು. ಹಾಗಾಗಿ ಅಶೋಕ್ ಪೈಯನ್ನು ಎತ್ತಿದರೆ ಕೋಟಿಗಟ್ಟಲೆ ಹಣ ಕೊಡುತ್ತೇ... ಎಂದು ಹಲವರು ಬಳಿ ಹೇಳಿಕೊಂಡಿದ್ದ. ಕಳೆದ ನವೆಂಬರ್ 25, 2016ರಲ್ಲಿ ಜಡೇಜಾ ರವಿ ಕೊಲೆ ಕೇಸಿನ... ಹೈಕೋರ್ಟ್‌ನಿಂದ ಜೀವಾವಧಿ ಶಿಕ್ಷೆ ರದ್ದು ಮಾಡಿಸಿಕೊಂಡು ಖುಲಾಸೆಯಾಗಿ ಹೊರಬಂದ ಅಶೋಕ್ ಪೈ ಹೆಂಡತಿಯ ತವರು ಮಾದರಹಳ್ಳಿ ಸೇರಿಕೊಂಡಿದ್ದ. ಫೆಬ್ರವರಿ 7... ಮುಂಜಾನೆ ರೌಡಿ ಅಶೋಕ್ ಪೈ ಮಲಗಿದ್ದ ಮನೆ... ನುಗ್ಗಿದ್ದ 11 ಮಂದಿ ದುಷ್ಕರ್ಮಿಗಳು ಪೈ ಹತ್ಯೆಗೆ ಯತ್ನಿ... ವಿಫಲವಾಗಿದ್ದರು. ಅವರಲ್ಲಿ ಪೈನ ಶಿಷ್ಯರೂ ಇದ್ದರು. ಇದರಲ್ಲಿ ರಂಗಸ್ವಾಮಿಯ ಪಾತ್ರವೂ ಇರಬಹುದೆಂ... ಅನುಮಾನ ಜೋರಾಗಿ ಕೇಳಿಬಂದಿತ್ತು. ಆದರೆ ಕೆ.ಎಂ.ದೊ... ಪೊಲೀಸರು ಬ್ಲ್ಯಾಕ್ ಅಂಡ್ ವೈಟ್ ವ್ಯವಹಾರವೇ ... ಹತ್ಯೆ ಯತ್ನದ ಹಿಂದಿರುವ ಕಾರಣ ಎಂದು ಷರಾ ಬರೆದು 11 ಮಂದಿ ಆರೋಪಿಗಳನ್ನು ಬಂಧಿಸಿ ಜೈಲಿಗೆ ಬಿಟ್ಟು ಬಂದಿದ್ದರು.


ಇದೀಗ ರಂಗಸ್ವಾಮಿ ನಿಗೂಢವಾಗಿ ಹತ್ಯೆಯಾಗಿರೋದು ಮಂಡ್ಯ ಪಾತಕಲೋಕದಲ್ಲಿ ಮತ್ತಷ್ಟು ಗೋಜಲನ್ನು ಸೃಷ್ಟಿಸಿದೆ. ಫೆಬ್ರವರಿ 7ರಂದು ಮಲಗಿದ್ದ ಪೈ ಮೇಲೆ ಅಟ್ಯಾಕ್ ಮಾಡಿಸಿದ್ದು ಲಿಕ್ಕರ್ ರಂಗಸ್ವಾಮಿಯಾ? ಅವನ ಹಳೇ ಜಿದ್ದನ್ನು ಕಂಡು ಕನಲಿಹೋದ ಅಶೋಕ್ ಪೈನೇ ಲಿಕ್ಕರ್ ರಂಗಸ್ವಾಮಿಗೆ ವಿಷಪ್ರಾಶನ ಮಾಡಿಸಿ ಕೊಂದು ಮಲಗಿಸಿದ್ದಾನಾ? ಅಥವಾ ಇದು ಕರಾಳ ವ್ಯವಹಾರದ ಮತ್ತೊಂದು ನಿಗೂಢ ಬಲಿಯಾ? ಎಂಬ ಪ್ರಶ್ನೆಗಳು ತಾಂಡವವಾಡುತ್ತಿ... ಪೋಸ್ಟ್‌ಮಾರ್ಟಂ ರಿಪೋರ್ಟ್‌ನತ್ತ ಎಲ್ಲರ ಕಣ್ಣು ನೆಟ್ಟಿ...

■ ಮಂಡ್ಯ ನಾಗೇಶ್

ಹನೂರು: ಸೋಮಣ್ಣ-ಪರಿಮಳಾ ಅಡಕತ್ತರಿಯಲ್ಲಿ ಯಡ್ಡಿ ತಳಮಳ







ತಾನು ಮತ್ತೆ ಸಿಎಂ ಆದಂತೆ ಕನಸು ಬಿದ್ದು ಅರ್ಧ ...ನಿದ್ರೆಯಲ್ಲೇ ಆಗಾಗ್ಗೆ ಬೆಚ್ಚಬಿದ್ದು ಕೂರುತ್ತಿರುವ ...ಡಿಯೂರಪ್ಪನ ಸಂಕಟಗಳು ದಿನದಿಂದ ದಿನಕ್ಕೆ ...ಷ್ಟ್ಯಾಗುತ್ತಲೇ ಇವೆ. ಒಂದುಕಡೆ ಕಾಂಗ್ರೆಸ್ ಸರ್ಕಾರ ...ಡ್ಡಿಯ ಮೇಲಿರುವ ಡಿನೋಟಿಫಿಕೇಷನ್ ಕೇಸುಗಳನ್ನು ...ಸುವ ರಣತಂತ್ರ ರೂಪಿಸಿದ್ದರೆ, ಮತ್ತೊಂದೆಡೆ ಈಶ್ವರಪ್ಪ ...ಬ ಬೆದರುಬೊಂಬೆ ಹೆಜ್ಜೆಹೆಜ್ಜೆಗೂ ಯಡ್ಡಿಯನ್ನು ...ದರಿಸುತ್ತಿದೆ. ಸಾಲದ್ದಕ್ಕೆ ಮೋದಿಯ '75' ...ರೋಮಿತಿಯ ಟಾರ್ಗೆಟ್ಟೂ ಚರ್ಚೆಯ ಮುನ್ನೆಲೆಗೆ ...ದು ಬಿಜೆಪಿ ರಾಜ್ಯಾಧ್ಯಕ್ಷನ ತಲೆಚಿಟ್ಟು ಹಿಡವಂತೆ ...ಡಿವೆ ಅನ್ನೋದು ಬಿಜೆಪಿ ಆಪ್ತ ವಲಯದಲ್ಲೇ ...ಬರುತ್ತಿರೋ ಸುದ್ದಿಗಳು.

ಈ ಪಾಟಿ ಪ್ರಾಬ್ಲಮ್‌ಗಳ ನಡುವೆ ಇದೀಗ ಹನೂರು ...ದ್ಧ ಯಡ್ಡಿಯನ್ನು ಮತ್ತಷ್ಟು ಹೈರಾಣು ಮಾಡಿದೆ. ...ಜಿ ಸಚಿವ ದಿವಂಗತ ಕಾಮಗೆರೆ ನಾಗಪ್ಪನ ಮಡದಿ ...ಮಳವ್ವನನ್ನು ಜೆಡಿಎಸ್‌ನಿಂದ ಬಿಜೆಪಿಗೆ ಸೇರಿಸಲು ...ಸೂರು ಭಾಗದ ಪ್ರಭಾವಿ ಲಿಂಗಾಯತ ಸ್ವಾಮೀಜಿಯೇ ...ತ್ತಿಗೆ ಹಿಡಿದು ನಿಂತಿದ್ದರೆ, ಬಿಜೆಪಿಯ ಬಿಸಿತುಪ್ಪ ಸೋಮಣ್ಣ ಶತಾಯಗತಾಯ ಆಯಮ್ಮ ಬಿಜೆಪಿ ...ರೋದು ಬ್ಯಾಡ ಅಂತ ಪಟ್ಟು ಹಿಡಿದು ಕೂತಿದ್ದಾರೆ. ...ಡ್ಡಿಯ ಪಾಲಿಗೆ ಅತ್ತ ದರಿ ಇತ್ತ ಪುಲಿ ಅನ್ನೋ ...ತ್ತೊಂದು ಮೆಗಾ ಎಪಿಸೋಡು ಇದು.


ಗಾಳಿ ಬಂದಕಡೆ ತೂರಿಕೊಳ್ಳೋದ್ರಲ್ಲಿ ಹೆಚ್ಚೂಕಮ್ಮಿ ...ಸ್ಟರ್ ಡಿಗ್ರಿಯನ್ನೇ ಮಾಡಿ ಮುಗಿಸಿರೋ ಸೋಮಣ್ಣನಿಗೆ ...ದ್ಯಕ್ಕೆ ಬೆಂಗಳೂರಿನಲ್ಲಂತೂ ರಾಜಕೀಯ ಉಳಿಗಾಲವಿಲ್ಲ ...ನ್ನೋದು ಸಾಬೀತಾಗಿದೆ. ಸೋಮಣ್ಣನ ಪ್ರಾಬಲ್ಯವಿದ್ದ ...ಜಯನಗರ ಮತ್ತು ಗೋವಿಂದರಾಜನಗರಗಳಲ್ಲಿ ಸಚಿವ ...ಎಂ.ಕೃಷ್ಣಪ್ಪ ಮತ್ತು ಅವರ ಮಗ ಪ್ರಿಯಾಕೃಷ್ಣ ಸತತವಾಗಿ ...ಏಟು ಕೊಡುತ್ತಲೇ ಬಂದಿದ್ದಾರೆ. ಇವೆರಡೂ ಕ್ಷೇತ್ರಗಳಲ್ಲಿ ...ಸೋಮಣ್ಣ ಮತ್ತೆ ಗೆಲ್ಲುವ ಸಣ್ಣದೊಂದು ಸುಳಿವೂ ...ಕಾಣಿಸುತ್ತಿಲ್ಲ, ಹಾಗಾಗಿ ಸೋಮಣ್ಣನ ಕಣ್ಣು ಚಾಮರಾಜನಗರ ...ಜಿಲ್ಲೆಯ ಮೇಲೆ ಬಿದ್ದಿದೆ. ಅದರಲ್ಲೂ ಹನೂರು ಕ್ಷೇತ್ರದಿಂದ ...ಮುಂಬರುವ ಚುನಾವಣೆಯಲ್ಲಿ ಕಣಕ್ಕಿಳಿಯಬೇಕೆಂದು ...ಸೋಮಣ್ಣ ಈಗಾಗಲೇ ಭರ್ಜರಿ ತಯಾರಿ ನಡೆಸಿದ್ದಾರೆ. ...ಆಗಿಂದಾಗ್ಗೆ ಹನೂರಿಗೆ ಭೇಟಿ ನೀಡಿ ಬೇಸ್ ಗಟ್ಟಿ ...ಮಾಡಿಕೊಳ್ಳುತ್ತಿದ್ದಾರೆ.

ಇಂಥಾ ಸಮಯದಲ್ಲಿ ಪರಿಮಳಾ ನಾಗಪ್ಪ ಬಿಜೆಪಿಗೆ ...ಬಂದು, ಆಕೆಗೆ ಹನೂರಿನ ಬಿಜೆಪಿ ಟಿಕೆಟು ಅನ್ನುವಂತಾದರೆ ...ಸೋಮಣ್ಣ ಸುಮ್ಮನಿರಲಾದೀತೆ? ಖಂಡಿತ ಇಲ್ಲ. ಅದರ ...ಸುಳಿಯನ್ನು ಯಡ್ಡಿಗೆ ತಲುಪಿಸಿಯಾಗಿದೆ. ಒಂದೊಮ್ಮೆ ...ಪರಿಮಳಾ ನಾಗಪ್ಪ ಬಿಜೆಪಿಗೆ ಬಂದಿದ್ದೇ ಆದಲ್ಲಿ ತಾನು ...ಬೇರೆ ದಾರಿ ನೋಡಿಕೊಳ್ಳಬೇಕಾಗುತ್ತೆ ಅಂತ ಸೋಮಣ್ಣ ...ಬಾಟುರು ಹಾಕಿದ್ದಾರೆ. ಈ ಹಿಂದೆ ಸಚಿವ ಎಚ್.ಎಸ್. ...ಮಹದೇವ ಪ್ರಸಾದ್‌ರು ಹಠಾತ್ತನೇ ತೀರಿಕೊಂಡಾಗ ...ಸೋಮಣ್ಣನನ್ನು ಕಾಂಗ್ರೆಸ್‌ಗೆ ವಾಪಾಸ್ ಕರೆತಂದು ...ಚಾಮರಾಜನಗರ ಜಿಲ್ಲೆಯಲ್ಲಿ ಎದುರಾಗಿರುವ ನಾಯಕತ್ವ ...ಕೊರತೆ ತುಂಬಿಕೊಳ್ಳಬೇಕು ಅಂತ ಕೈ ಪಕ್ಷ ಪ್ರಯತ್ನ ...ನಡೆಸಿತ್ತು. ಆಗ ಸೋಮಣ್ಣ ಕೂಡಾ ಪೂರಕವಾಗಿಯೇ ...ಪ್ರತಿಕ್ರಿಯಿಸಿದ್ದುಂಟು.

ಆದರೆ, ಗುಂಡ್ಲುಪೇಟೆ ಮತ್ತು ನಂಜನಗೂಡಿನಲ್ಲಿ ...ಉಪಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಈ ...ಭಾಗಗಳ ಪ್ರಭಾವಿ ಲಿಂಗಾಯತ ಮತಗಳ ಮೇಲೆ ...ಹಿಡಿತವಿರುವ ಸೋಮಣ್ಣನನ್ನು ಕಳೆದುಕೊಂಡರೆ ವ್ಯತಿರಿಕ್ತ ...ಪರಿಣಾಮ ಅನುಭವಿಸಬೇಕಾದೀತು ಅಂತಹ ಬೆಚ್ಚಿದ್ದ ...ಯಡ್ಡಿ ಸೋಮಣ್ಣನ ಮನೆಗೆಹೋಗಿ ಸಮಾಧಾನ ಮಾಡಿ ...ಬಿಜೆಪಿಯಲ್ಲೇ ಉಳಿದುಕೊಳ್ಳುವಂತೆ ಮಾಡಿದ್ದರು. ಆ ...ಉಪಚುನಾವಣೆಗಳಿನ್ನೂ ಮುಗಿದಿಲ್ಲ, ಅಂತಹ ಸಂದರ್ಭದಲ್ಲಿ

ಗಾಳಿ ಬಂದಕಡೆ ತೂರಿಕೊಳ್ಳೋದ್ರಲ್ಲಿ ಹೆಚ್ಚೂಕಮ್ಮಿ ಮಾಸ್ಟರ್ ಡಿಗ್ರಿಯನ್ನೇ ಮಾಡಿ ಮುಗಿಸಿರೋ ಸೋಮಣ್ಣನಿಗೆ ಸದ್ಯಕ್ಕೆ ಬೆಂಗಳೂರಿನಲ್ಲಂತೂ ರಾಜಕೀಯ ಉಳಿಗಾಲವಿಲ್ಲ ಅನ್ನೋದು ಸಾಬೀತಾಗಿದೆ. ಸೋಮಣ್ಣನ ಪ್ರಾಬಲ್ಯವಿದ್ದ ವಿಜಯನಗರ ಮತ್ತು ಗೋವಿಂದರಾಜನಗರಗಳಲ್ಲಿ ಸಚಿವ ಎಂ.ಕೃಷ್ಣಪ್ಪ ಮತ್ತು ಅವರ ಮಗ ಪ್ರಿಯಾಕೃಷ್ಣ ಸತತವಾಗಿ ಏಟು ಕೊಡುತ್ತಲೇ ಬಂದಿದ್ದಾರೆ. ಇವೆರಡೂ ಕ್ಷೇತ್ರಗಳಲ್ಲಿ ಸೋಮಣ್ಣ ಮತ್ತೆ ಗೆಲ್ಲುವ ಸಣ್ಣದೊಂದು ಸುಳಿವೂ ಕಾಣಿಸುತ್ತಿಲ್ಲ. ಹಾಗಾಗಿ ಸೋಮಣ್ಣನ ಕಣ್ಣು ಚಾಮರಾಜನಗರ ಜಿಲ್ಲೆಯ ಮೇಲೆ ಬಿದ್ದಿದೆ. ಅದರಲ್ಲೂ ಹನೂರು ಕ್ಷೇತ್ರದಿಂದ ಮುಂಬರುವ ಚುನಾವಣೆಯಲ್ಲಿ ಕಣಕ್ಕಿಳಿಯಬೇಕೆಂದು ಸೋಮಣ್ಣ ಈಗಾಗಲೇ ಭರ್ಜರಿ ತಯಾರಿ ನಡೆಸಿದ್ದಾರೆ. ಆಗಿಂದಾಗ್ಗೆ ಹನೂರಿಗೆ ಭೇಟಿ ನೀಡಿ ಬೇಸ್ ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ. ಇಂಥಾ ಸಮಯದಲ್ಲಿ ಪರಿಮಳಾ ನಾಗಪ್ಪ ಬಿಜೆಪಿಗೆ ಬಂದು, ಆಕೆಗೆ ಹನೂರಿನ ಬಿಜೆಪಿ ಟಿಕೆಟು ಅನ್ನುವಂತಾದರೆ ಸೋಮಣ್ಣ ಸುಮ್ಮನಿರಲಾದೀತೆ?

ಸೋಮಣ್ಣ ಬಿಜೆಪಿ ತೊರೆದರೆ ಲುಕ್ಸಾನು ಗ್ಯಾರಂಟಿ ಅಂತ ಯಡ್ಡಿಯೂ ಸೋಮಣ್ಣನ ಬೆದರಿಕೆಗೆ ಬೆಂಡಾದಂತೆ ಕಾಣಿಸುತ್ತೆ. ಹಾಗಾಗಿಯೇ ಬುಧವಾರ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಪರಿಮಳಾ ನಾಗಪ್ಪ ಬಿಜೆಪಿ ಸೇರ್ಪಡೆ



ಕಾರ್ಯಕ್ರಮ ಗೊತ್ತುಗುರಿಯಿಲ್ಲದಂತೆ ಮುರಕೊಂಡು ಬಿದ್ದಿದೆ.

ದಿವಂಗತ ನಾಗಪ್ಪನವರು ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಣಕ್ಕೊಳಗಾಗಿ, ಕಾಡಿನಲ್ಲೇ ಹೆಣವಾದ ತರುವಾಯ ಅದೇ ಸಿಂಪಥಿ ಅಲೆಯಲ್ಲಿ ಗೆದ್ದು ಶಾಸಕಿಯಾಗಿದ್ದ ಪರಿಮಳಾ ನಾಗಪ್ಪ ಜನರ ಮನಸ್ಸಿನಲ್ಲಿ ನಿಲ್ಲುವಂತ ಕೆಲಸ ಮಾಡಲಿಲ್ಲ, ಹಾಗಾಗಿ ಎರಡನೇ ಪ್ರಯತ್ನದಲ್ಲಿ ಅವರು ಮನೆಸೇರಬೇಕಾಯ್ತು. ಪರಿಸ್ಥಿತಿ ಹೀಗೇ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ಅವರ ಹೆಸರೇ ಮಾಯವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ, ಹಾಗಾಗಲು ಬಿಡಬಾರದು ಎಂಬ ಉದ್ದೇಶದಿಂದಲೇ ಮೈಸೂರು ಭಾಗದ ಲಿಂಗಾಯತ ಸಮುದಾಯದ ಪ್ರಭಾವಿ ಮಠಾಧೀಶರೊಬ್ಬರು ಪರಿಮಳಾ ನಾಗಪ್ಪ ಅವರಿಗೆ ಮತ್ತೆ ರಾಜಕೀಯ ನೆಲೆ ಸೃಷ್ಟಿಸಲು ಮುಂದಾಗಿ, ಅವರನ್ನು ಬಿಜೆಪಿಗೆ ಸೇರಿಸುತ್ತಿದ್ದಾರೆ. ಆ ಮಠಾಧೀಶರ ಮಾತೆಂದರೆ ಯಡ್ಡಿಗೆ ಕಟ್ಟಪ್ಪಣೆ ಇದ್ದಂತೆ. ಪರಿಮಳಾ ನಾಗಪ್ಪ ಅವರಿಗೆ ಹನೂರಿನಿಂದಲೇ ಟಿಕೆಟ್ ನೀಡಬೇಕು ಎಂಬ ಶರತ್ತು ವಿಧಿಸಿರುವ ಮಠಾಧೀಶರು ಯಡ್ಡಿಯನ್ನು ಒಪ್ಪಿಸಿದ್ದರು.

ಇತ್ತ ಸೋಮಣ್ಣನಿಗೂ ಚಾಮರಾಜನಗರ ಜಿಲ್ಲೆಯ ಲಿಂಗಾಯತ ಲೀಡರ್ ಆಗಿ ನೆಲೆಯೂರಬೇಕೆಂಬ ಆಸೆ ಬಹುದಿನದಿಂದಲೂ ಇದೆ. ಹಿಂದೆ ಕಾಂಗ್ರೆಸ್‌ನಲ್ಲಿದ್ದಾಗ 2005-06ರಲ್ಲಿ ನಡೆದ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಚಾಮರಾಜನಗರ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಿದ್ದರು. ಅಂದಿನಿಂದಲೂ ಅವರು ಚಾ.ನಗರ ಜಿಲ್ಲೆಯನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಹವಣಿಸುತ್ತಿದ್ದಾರೆ. ತಮ್ಮದೇ ಆದ ಜಾತಿಮತಗಳ ನೆಟ್‌ವರ್ಕ್ ಕೂಡಾ ಸ್ಥಾಪಿಸಿಕೊಂಡಿದ್ದಾರೆ. ಹನೂರು ಅವರ ಟಾರ್ಗೆಟ್. ಈಗ ಪರಿಮಳಾ ನಾಗಪ್ಪ ಎಂಟ್ರಿಯಿಂದ ಒಂದೇ ಏಟಿಗೆ ಅದೆಲ್ಲಾ ಹಾಳಾಗುತ್ತಿರೋದು ಸೋಮಣ್ಣನ ನಿದ್ದೆಗೆಡಿಸಿದೆ.

ಇವರಿಬ್ಬರ ನಡುವೆ ಯಡ್ಡಿ ವಿಲವಿಲ ಅಂತ ಒದ್ದಾಡುತ್ತಿರೋದು ಮಾತ್ರ ಸುಳ್ಳಲ್ಲ, ಒಂದುಕಡೆ ಸೋಮಣ್ಣ ಮತ್ತೊಂದೆಡೆ ಸ್ವಾಮೀಜಿ. ಸೋಮಣ್ಣನನ್ನು ಕಳೆದುಕೊಳ್ಳಲು ಉಪಚುನಾವಣೆಗಳ ಭೀತಿ. ಪರಿಮಳಗೆ ನೋ ಎನ್ನಲು ಸ್ವಾಮೀಜಿಯ ಫಜೀತಿ. ಸ್ವಾಮೀಜಿಯನ್ನು ಎದುರು ಹಾಕಿಕೊಂಡರೆ ತನ್ನ ಕತೆ ಮುಗಿದಂತೆ ಅನ್ನೋದು ಯಡ್ಡಿಗೆ ಚೆನ್ನಾಗಿಯೇ ಗೊತ್ತು, ಹಾಗಾಗಿಯೇ ಮೊನ್ನೆ ನಡೆಯಬೇಕಿದ್ದ ಪರಿಮಳಾ ಬಿಜೆಪಿ ಸೇರ್ಪಡೆ ಕಾರ್ಯಕ್ರಮವನ್ನು ಯಡ್ಡಿಯೇ ಮುಂದೂಡಿದ್ದಾರೆ.

ನಿಧಾನಕ್ಕೆ ಸೋಮಣ್ಣನನ್ನು ಸಮಾಧಾನ ಮಾಡಿ, ಗುಂಡ್ಲುಪೇಟೆಯ ಟಿಕೆಟ್ ಭರವಸೆ ಕೊಟ್ಟು ಅವರನ್ನು ಒಪ್ಪಿಸಿ ತರುವಾಯ ಪರಿಮಳಾರನ್ನು ಬಿಜೆಪಿಗೆ ಕರೆತಂದು ಹನೂರು ಅಭ್ಯರ್ಥಿಯಾಗಿಸೋದು ಯಡ್ಡಿಯ ಸ್ಟ್ರಾಟಜಿ. ಇಲ್ಲೂ ಯಡ್ಡಿಗೆ ಎರಡು ತೊಡಕುಗಳಿವೆ. ಮೊದಲನೆಯದಾಗಿ ಸೋಮಣ್ಣ ಈ ಸಂಧಾನಸೂತ್ರಕ್ಕೆ ಒಪ್ಪದೇ ಹೋಗಬಹುದು. ಯಾಕೆಂದರೆ ಮುಂದಿನ ಎಲೆಕ್ಷನ್ ಗಮನದಲ್ಲಿಟ್ಟುಕೊಂಡು ಈಗಾಗಲೇ ಹನೂರಿನಲ್ಲಿ ಆತ ಸಾಕಷ್ಟು ಗ್ರೌಂಡ್‌ವರ್ಕ್ ಮಾಡಿದ್ದಾರೆ. ಅದನ್ನೀಗ ಸುಖಾಸುಮ್ಮನೆ ವಿರೋಧಿ ಪರಿಮಳಕ್ಕನಿಗೆ ಬಿಟ್ಟುಕೊಟ್ಟು ಹೊಸದಾಗಿ ಗುಂಡ್ಲುಪೇಟೆಯಲ್ಲಿ ಹೆಣಗಾಡಲು ಸೋಮಣ್ಣ ಒಪ್ಪದಿರಬಹುದು. ಒಂದೊಮ್ಮೆ ಸೋಮಣ್ಣ ಗುಂಡ್ಲುಪೇಟೆಗೆ ಸೈ ಅಂದರೂ ಎರಡನೇ ಸಮಸ್ಯೆಯಾಗಿ ಅಲ್ಲಿನ ಲೋಕಲ್ ಲೀಡರ್ ಸಿ.ಎಸ್. ನಿರಂಜನ್ ಯಡ್ಡಿಯ ಮುಂದೆ ಪುಟಿದು ನಿಲ್ಲುತ್ತಾನೆ.

ಈ ನಿರಂಜನ್ ಕುಮಾರ್ ಗುಂಡ್ಲುಪೇಟೆಯಲ್ಲಿ ಮಹದೇವ ಪ್ರಸಾದ್ ಎದುರು ಸತತವಾಗಿ ಬಿಜೆಪಿಯನ್ನು ಪ್ರತಿನಿಧಿಸುತ್ತಾ ಸೋಲನುಭವಿಸಿದಂತವ. ಈ ಉಪ ಚುನಾವಣೆಯಲ್ಲಿ ಸಿಂಪಥಿ ಅಲೆಯಲ್ಲಿ ಗೀತಾ ಮಹದೇವ ಪ್ರಸಾದ್ ಗೆದ್ದರೂ 2018ರ ಚುನಾವಣೆ ವೇಳೆಗೆ ಗೆಲುವು ಬಿಜೆಪಿಯತ್ತ ತಿರುಗಬಹುದೆನ್ನುವ ಲೆಕ್ಕಾಚಾರದಲ್ಲಿರೋ ನಿರಂಜನ್, ಇಷ್ಟುದಿನದ ಪರಿಶ್ರಮವನ್ನು ಸೋಮಣ್ಣನಿಗೆ ಧಾರೆಯೆರೆಯಲು ಸುತಾರಾಂ ಒಪ್ಪುವುದಿಲ್ಲ, ಆಗಲೂ ಯಡ್ಡಿ ಇಕ್ಕಟ್ಟಿಗೆ ಸಿಲುಕಬೇಕಾಗುತ್ತೆ. ಹಾಗಾಗಿ ಯಡ್ಡಿ ಈ ಮೂವರಲ್ಲಿ ಯಾರಾದರು ಒಬ್ಬರನ್ನು ಕಳೆದುಕೊಳ್ಳಲೇಬೇಕು. ಹೆಚ್ಚೆಂದರೆ ಯಾರಾದರು ಒಬ್ಬರಿಗೆ ಎಂಎಲ್‌ಸಿ ಅಥವಾ ನಿಗಮ ಮಂಡಳಿಯ ತುಪ್ಪ ಸವರುವ ಪ್ರಯತ್ನ ಮಾಡಬಹುದು. ಆದರೆ ಈಗಾಗಲೇ ನಿರಾಶ್ರಿತ ಶಿಬಿರಕ್ಕೆ ಸೇರಿಸಿಕೊಳ್ಳುವಂತೆ ಎಸ್.ಎಂ.ಕೃಷ್ಣ ಕುಬಂ ಆದಿಯಾಗಿ ಕಂಡಕಂಡ ವರನ್ನು ಇಂತದೇ ಭರವಸೆಗಳ ಮೂಲಕ ಭರ್ತಿ ಮಾಡಿಕೊಂಡಿರುವ ಯಡ್ಡಿಯ ಬಿಜೆಪಿ ಫ್ಲ್ಯಾಟ್ ಫಾರ್ಮ್ ಇಂತವರ ಭಾರ ತಾಳದೆ ಕುಸಿದುಬೀಳುವ ಅಪಾಯವೇ ಹೆಚ್ಚು ಅಂತ ಸೂಚನೆ ಸಿಕ್ಕ ತಕ್ಷಣ ಈ ಮೂವರಲ್ಲಿ ಯಾರೋ ಒಬ್ಬರು ಬಂಡಾಯವೆದ್ದರು ಯಡ್ಡಿಯ ಪ್ಲ್ಯಾನು ಮಕಾಡೆ ಮಲಗಲಿದೆ. ಯಾವುದಕ್ಕೂ ಕಾಲವೇ ಉತ್ತರ ಹೇಳಬೇಕು.

■ ಶರ

ಬಿಜೆಪಿ ತೆಪ್ಪ ತುಂಬಿಕೊಳ್ಳುತ್ತಿರುವ ಗುಂಡುಕಲ್ಲುಗಳು!

ಚುನಾವಣೆ ಬಂತೆಂದರೆ ಪಕ್ಷಾಂತರಿ ರಾಜಕಾರಣಿಗಳ ...ಗೆ ಪರಾಕ್ರಮ ಶುರುವಾಗಿ ಬಿಡುತ್ತೆ, ಪಕ್ಷ, ಸಿದ್ಧಾಂತಗಳ ...ಗೇ ಇಲ್ಲದ ಇಂತವರಿಗೆ ಗೆಲ್ಲೊ ಎತ್ತಿನ ಬಾಲ ...ಡಿಯುವುದೇ ಕಾಯಕ. ಮೋದಿಯ ಭ್ರಮನಿರಸನ, ...ಜೆಪಿಗಳ ಒಳಜಗಳ, ಕರ್ನಾಟಕ ವಿಚಾರದಲ್ಲಿ ಕೇಂದ್ರದ ...ಲಕ್ಷ್ಯ ಧೋರಣೆ, ಭ್ರಷ್ಟರ ನಾಯಕತ್ವ ಇದ್ದಾಗ್ಯೂ ಅದ್ಯಾವ ...ಮ್ಯಾಜಿಕ್ಕು ಮುಂದಿನ ಸಲ ಬಿಜೆಪಿ ಗೆದ್ದು ಅಧಿಕಾರಕ್ಕೇರುತ್ತೆ ...ಕ್ಕೊ ಕತೆ ಹರಿಬಿಟ್ಟಿದ್ದಾರೋ ಗೊತ್ತಿಲ್ಲ, ಅದನ್ನು ನಂಬಿ ಈ ...ಡಿಮ್ಯಾಡ್ ಪಕ್ಷಾಂತರಿಗಳು ತೂತುಬಿದ್ದ ಬಿಜೆಪಿ ತೆಪ್ಪಕ್ಕೆ ...ಗುಂಡುಕಲ್ಲುಗಳಂತೆ ಒಂದೊಂದಾಗಿ ಜಿಗಿದು ಸಾಮೂಹಿಕ ...ಆತ್ಮಹತ್ಯೆಗೆ ಸಜ್ಜಾಗುತ್ತಿವೆ.


ಇತ್ತ, ಬಿಜೆಪಿ ರಾಜ್ಯಾಧ್ಯಕ್ಷ ಯಡ್ಡಿಯಂತೂ 2018ರ ...ಚುನಾವಣೆಯಲ್ಲಿ ತಾವು ಈಗಾಗಲೇ ಗೆದ್ದಾಗಿದೆ, ಇನ್ನು ಅಧಿಕಾರ ಸ್ವೀಕಾರ ಒಂದೇ ಬಾಕಿ ಎಂಬಂತೆ ಪೋಜು ಕೊಡುತ್ತಿದ್ದಾರೆ. ಆತನ ಐಲು ಅದ್ಯಾವಮಟ್ಟ ತಲುಪಿದೆಯೆಂದರೆ, ಈಗಲೂ ಕೋರ್ಟ್ 'ಏಯ್' ಅಂದ್ರೆ ಕಂಬಿ ಹಿಂದೆ ಕೂರಬೇಕಾದ ಪರಿಸ್ಥಿತಿಯಲ್ಲಿ ಇದ್ದಾಗ್ಯೂ ತಾನು ಮುಖ್ಯಮಂತ್ರಿಯಾದ ಮಾರನೆಯ ದಿನವೇ ಸಿದ್ದರಾಮಯ್ಯ ಫ್ಯಾಮಿಲಿಯನ್ನು ಜೈಲಿಗೆ ಕಳಿಸುತ್ತೇನೆ ಅಂತ ಹೋಗಿಬಂದಲೆಲ್ಲ ಹೇಳಿಕೊಂಡು ತಿರುಗುತ್ತಿದ್ದಾರೆ. ಈ ಪರಾಕ್ರಮವನ್ನು ನಂಬಿ ಯಡಿಯೂರಪ್ಪ ಸರ್ಕಾರದಲ್ಲಿ ತಮಗೆ ಯಾವುದಾದರೊಂದು ಸ್ಥಾನ ಗ್ಯಾರೆಂಟಿ ಎಂಬ ಭ್ರಮೆಯಲ್ಲಿ ಬಿಜೆಪಿ ಸೇರುತ್ತಿರುವ ನಾಯಕರು, ಮರಿ ನಾಯಕರು, ಪುಢಾರಿಗಳ ಸಂಖ್ಯೆ ಹೆಚ್ಚುತ್ತಿದೆ. ಹಿಂದೆ ಇದ್ದ ಪಕ್ಷದಲ್ಲಿ ಯಾವ ಘನಕಾರ್ಯ ಮಾಡದೆ ಡಬ್ಬಾ ಅನ್ನಿಸಿಕೊಂಡವರು ಇವತ್ತು ಬಿಜೆಪಿಯ ಫ್ಲೆಕ್ಸು ಬ್ಯಾನರ್‌ಗಳಲ್ಲಿ ರಾರಾಜಿಸುತ್ತಿದ್ದಾರೆ.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕುಮಾರ್ ಬಂಗಾರಪ್ಪ, ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಈಗಾಗಲೇ ಬಿಜೆಪಿಯಲ್ಲಿ ಕಾಲೂರಿದ್ದರೆ, ಜಾಫರ್ ಷರೀಫ್, ಸಿ.ಎಂ.ಇಬ್ರಾಹಿಂ, ಮಾಜಿ ಸಂಸದ ಎಚ್.ವಿಶ್ವನಾಥ್ ಮುಂತಾದವರು ಹೋದರೆ ಹೇಗೆ, ಹೋಗದಿದ್ದರೆ ಹೇಗೆ ಎಂದು ಮೀನಾಮೇಷ ಎಣಿಸುತ್ತಿದ್ದಾರೆ. ಇನ್ನು ಶ್ರೀನಿವಾಸ ಪ್ರಸಾದ್ ಅವರ ಬೆಂಬಲಿಗರಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಕೆ.ಆರ್.ಮೋಹನ್ ಕುಮಾರ್, ಸಿ.ಬಸವೇಗೌಡ ಮುಂತಾದ ಪುಡಿ ರಾಜಕಾರಣಿಗಳು ಎಲ್ಲಿ ತಮಗೆ ಅಧಿಕಾರ, ಲಾಭ ಸಿಗುತ್ತದೋ ಅಲ್ಲಿ ಜೈ ಎನ್ನುವವರು. ಅಧಿಕಾರದಾಸೆಗೆ ಬಿಜೆಪಿ ಸೇರುತ್ತಿರುವ ಇಂಥಾ ಒಣ ಗುಂಡುಕಲ್ಲುಗಳ ಭಾರದಿಂದಲೇ ಯಡ್ಡಿಯ ತೆಪ್ಪ ತಲೆಕೆಳಗಾದರು ಅಚ್ಚರಿಯಿಲ್ಲ,

ಕೊಡಗು: ಅರಣ್ಯ ಇಲಾಖೆ ಲೂಟಿ ಹೊಡೆಯುತ್ತಿರುವ ಮನೋಜ್‌ಕುಮಾರ್


ರೋಮ್ ಹೊತ್ತಿ ಉರಿಯುವಾಗ ನೀರೋ ಪಿಟೀಲು ಬಾರಿಸಿದ ಎನ್ನುವಂತೆ ಕೊಡಗಿನಲ್ಲಿ ಅರಣ್ಯ ಇಲಾಖೆ ಕಾರ್ಯ ನಿರ್ವಹಿಸುತ್ತಿದೆ. ಕೊಡಗು ಜಿಲ್ಲೆಯ ನಾಗರಹೊಳೆ, ಮತ್ತಿಕಾಡು ಮತ್ತು ಆನೆಕಾಡಿನಲ್ಲಿ ಸಾವಿರಾರು ಎಕ್ರೆ ಅರಣ್ಯ ಭೂಮಿ ಬೆಂಕಿಯ ಕೆನ್ನಾಲಿಗೆಗೆ ತುತ್ತಾಗಿದೆ. ಸಾಕಷ್ಟು ಮೂಕಪ್ರಾಣಿಗಳು ಬೆಂಕಿಯಲ್ಲಿ ಬೆಂದು ಹೋಗಿವೆ. ಅರಣ್ಯ ಇಲಾಖೆಯು ಕಾಡಿನ ಸುತ್ತ ಕಂದಕಗಳನ್ನು ತೋಡಿದ್ದು ಇದರಿಂದಾಗಿ ಕೆಲವು ಕಡೆ ಪ್ರಾಣಿಗಳು ಹೊರಹೋಗದಂತಾಗಿ ಅಸುನೀಗಿವೆ. ಕಾಡಿನಲ್ಲಿ ಇರುವ ಪ್ರಾಣಿಗಳಿಗೆ ನೀರಿನ ಸೌಲಭ್ಯವೇ ಇಲ್ಲ. ಈ ವರ್ಷ ಬರವಿದ್ದರೂ,





ಮನೋಜ್ ಕುಮಾರ್


ಕಾವೇರಿ ನಿಸರ್ಗಧಾಮದ ಕಾಮಗಾರಿಯ ಫೋಟೋಗಳು





ಅರಣ್ಯ ಇಲಾಖೆ ಕಾಡಿನ ಒಳಗಿನ ಪ್ರಾಣಿಗಳಿಗೆ ಬೇಕಾದ ಪ್ರಮಾಣದ ನೀರು ಸಂಗ್ರಹಿಸಲು ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ಕಾಡಿನಲ್ಲಿರುವ ಕೆರೆಗಳ ಹೂಳೆತ್ತುವ ಕಾರ್ಯವನ್ನು ಮಾಡಲೇ ಇಲ್ಲ, ಬಹುಶಃ ದಾಖಲೆಪತ್ರಗಳಲ್ಲಿ ಹೂಳೆತ್ತಿರುವ ಸಾಧ್ಯತೆಗಳು ಇವೆ. ಪ್ರತಿವರ್ಷ ಕಾಡಿಗೆ ಬೆಂಕಿ ಬೀಳುತ್ತಿದೆ. ಬೆಂಕಿ ನಂದಿಸುವ ಕಾರ್ಯ ನಡೆಯುತ್ತವೆ ಮತ್ತು ಪ್ರಾಣಿಗಳು ಸಾಯುತ್ತವೆ. ಕಾಡಿಗೆ ಬೆಂಕಿ ಬೀಳದಂತೆ ಅರಣ್ಯ ಇಲಾಖೆ ಮತ್ತು ಕೆಲವು ಸಂಘಟನೆಗಳು ನಾಡಿನಲ್ಲಿ ಬ್ಯಾನರ್ ಹಿಡಿದು ಜಾಗೃತಿ ಜಾಥಾ ನಡೆಸುವುದು ಬಿಟ್ಟು ವೈಜ್ಞಾನಿಕ ಮುನ್ನೆಚ್ಚರಿಕೆಗೆ ಮುಂದಾಗದಿರುವುದು ದುರಂತ.

ನೈಸರ್ಗಿಕ ಅರಣ್ಯ ಎಂಬುದು ಮಾಯವಾಗಿ ಬಹುತೇಕ ಅರಣ್ಯಗಳಲ್ಲಿ ಇಲಾಖೆ ನೆಟ್ಟ ತೇಗದ ಮರಗಳೇ ತುಂಬಿಕೊಂಡಿವೆ. ತೇಗದ ಮರದ ಕೆಳಗೆ ಹುಲ್ಲೂ ಬೆಳೆಯುವುದಿಲ್ಲ, ಪಕ್ಷಿಗಳು ಹಾರುವುದಿಲ್ಲ, ಹಾಗಿರುವಾಗ ನೀರಿನ ಸೆಲೆ ಇರಲು ಸಾಧ್ಯವೇ ಎಂಬ ಸಾಮಾನ್ಯ ವಿಚಾರಗಳು ಅರಣ್ಯ ಇಲಾಖೆಯವರಿಗೆ ಹೊಳೆಯುತ್ತಿಲ್ಲ, ಬ್ರಿಟಿಷರ ಕಾಲದಲ್ಲಿ ರೈಲ್ವೆಗೆ ಬಳಸುವ ಉದ್ದೇಶದಿಂದ ತೇಗದ ಮರ ಬೆಳೆಸಲಾಗಿತ್ತು, ಸ್ವಾತಂತ್ರ್ಯ ನಂತರ ಆರ್ಥಿಕ ಭದ್ರತೆಗಾಗಿ ತೇಗವನ್ನು ಬೆಳೆಸಲಾಯಿತು. ಇದು ಅವೈಜ್ಞಾನಿಕ ಎಂಬುದು ತಿಳಿದಿದ್ದರೂ, ಇದನ್ನು ತೆಗೆದು ನೈಸರ್ಗಿಕ ಕಾಡನ್ನು ಬೆಳೆಸುವ ಕೆಲಸಕ್ಕೆ ಅರಣ್ಯ ಇಲಾಖೆ ಮುಂದಾಗುತ್ತಿಲ್ಲ, ತಮ್ಮ ವಶದಲ್ಲಿರುವ ಅರಣ್ಯವನ್ನು ಹೀಗೆಲ್ಲ ಹಾಳುಗೆಡವಿರುವ ಅರಣ್ಯ ಇಲಾಖೆ ಕೆಲ ಡೋಂಗಿ ಪರಿಸರವಾದಿಗಳ ಜೊತೆ ಸೇರಿಕೊಂಡು ಮಾಧವ ಗಾಡ್ಗಿಲ್ ವರದಿ ಹಾಗೂ ಕಸ್ತೂರಿ ರಂಗನ್ ವರದಿ ತಂದು ಖಾಸಗಿ ತೋಟಗಳ ಮೇಲೆ ನಿಯಂತ್ರಣ ಸಾಧಿಸಿ, ಜನರ ಜೀವನವನ್ನು ಅಸ್ತವ್ಯಸ್ತಗೊಳಿಸುವ ಉಮೇದಿನಲ್ಲಿದೆ. ಇದೂ ದುರಂತ.



ಏಡುಕೊಂಡಲು

ಒಂದು ಕಡೆ ಕಾಡಿಗೆ ಬೆಂಕಿ ಬಿದ್ದು ಪ್ರಾಣಿಗಳು ನಿರ್ದಯವಾಗಿ ಭಸ್ಮವಾಗುತ್ತಿದ್ದರೆ ಮತ್ತೊಂದು ಕಡೆ ಜಿಲ್ಲೆಯ ಅರಣ್ಯಾಧಿಕಾರಿಗಳು ಲೂಟಿ ಹೊಡೆಯುವ ಕಾರ್ಯದಲ್ಲಿ ಬಿಜಿಯಾಗಿದ್ದಾರೆ. ಆನೆಕಾಡು ಮತ್ತು ಮತ್ತಿಕಾಡುಗಳಿಗೆ ಬೆಂಕಿ ಬಿದ್ದಾಗ ಜಿಲ್ಲೆಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್‌ಕುಮಾರ್ ಕೊಡಗಿನಲ್ಲೇ ಇರಲಿಲ್ಲ, ವಿಷಯ ತಿಳಿದ ಮೇಲೂ ಬೆಂಗಳೂರಿನಿಂದ ಕೊಡಗಿಗೆ ಆಗಮಿಸುವ ಕೃಪೆ ತೋರಲಿಲ್ಲ ಮಾರಾಯ. ಇನ್ನು ಈಗಷ್ಟೇ ಪ್ರೊಬೆಷನರಿ ಮುಗಿಸಿ ಡಿ.ಸಿ.ಎಫ್. ಹುದ್ದೆಗೇರಿರುವ ತೀರಾ ಎಳಸು ರೀತಿಯಲ್ಲಿ ವರ್ತಿಸುವ ಸೂರ್ಯಸೇನ ಬೆಂಕಿನಂದಿಸುವ ಜವಾಬ್ದಾರಿ ಹೊತ್ತಿದ್ದರು. ಅಲ್ಲದೆ, ಜಿಲ್ಲೆಗೆ ಉಸ್ತುವಾರಿ ಸಚಿವರು ಭೇಟಿ ನೀಡಿದಾಗಲೂ ಅವರಿಗೆ ಮಾಹಿತಿ ನೀಡಿದ್ದು ಕೂಡಾ ಇದೇ ಸೂರ್ಯಸೇನ. ಆಗಲೂ ಮನೋಜ್ ಕುಮಾರ್ ಇತ್ತ ಸುಳಿಯಲಿಲ್ಲ, ಆತ ತನ್ನ ಖಾಸಗಿ ವಿಚಾರ ಮತ್ತು ಪ್ರಮೋಷನ್ ಗದ್ದಲದಲ್ಲೇ ಬಿಜಿಯಾಗಿದ್ದಾನೆ.

ಕಾವೇರಿ ನಿಸರ್ಗಧಾಮದಲ್ಲಿ ಕಾಮಗಾರಿ

ಕುಶಾಲನಗರದ ಬಳಿ ಅರಣ್ಯ ಇಲಾಖೆಯವರು ಕಾವೇರಿ ನಿಸರ್ಗಧಾಮ ಎಂಬ ರೆಸಾರ್ಟ್ ಮಾದರಿಯ ಒಂದು ಪ್ರವಾಸಿ ಕೇಂದ್ರ ನಡೆಸುತ್ತಿದ್ದಾರೆ. ತೂಗು ಸೇತುವೆ ಇಲ್ಲಿನ ಪ್ರಮುಖ ಆಕರ್ಷಣೆ. ಅದುಬಿಟ್ಟರೆ ಯಾವ ಆಕರ್ಷಣೆಯೂ ಅಲ್ಲಿಲ್ಲ, ಕಾಡಿನ ವಾತಾವರಣವೂ ಇಲ್ಲ, ಸುಮಾರು ಆರು ಕಾಟೇಜ್ ಇದ್ದು, ತಂಗಲು ವ್ಯವಸ್ಥೆ ಇದೆ. ಆದರೆ ಇದು ಸರಕಾರಿ ವ್ಯವಸ್ಥೆ, ಸಾಕಷ್ಟು ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಬಿಲ್ ಪಾವತಿಸದೆ, ವಿದ್ಯುತ್ ಕಡಿತವಾಗಿರುತ್ತದೆ. ಒಳ್ಳೆಯ ಆದಾಯ ತರಬಲ್ಲ ಕೇಂದ್ರ ಇದಾಗಿದ್ದರೂ ಇಲಾಖೆಯ ನಿರ್ಲಕ್ಷ್ಯತನದಿಂದಾಗಿ ಪ್ರವಾಸಿಗರ ಸಂಖ್ಯೆ ತುಂಬಾ ಕಮ್ಮಿ. ಇದರ ಸುತ್ತ ತಲೆಯೆತ್ತಿರುವ ಖಾಸಗಿ ರೆಸಾರ್ಟ್‌ಗಳು ಉತ್ತಮ ಸೌಲಭ್ಯ ನೀಡುತ್ತಿರುವಾಗ ಈ ಸರ್ಕಾರಿ ರೆಸಾರ್ಟ್‌ನ್ನು ಯಾರು ತಾನೇ ಮೂಸಿ ನೋಡುತ್ತಾರೆ. ಈ ನಿಸರ್ಗಧಾಮದೊಳಗೆ ಒಂದೆರಡು ಜೋಡಿ ಬಡಕಲು ಜಿಂಕೆಗಳನ್ನು ಬಿಟ್ಟರೆ ಬೇರಾವುದೇ ಪ್ರಾಣಿಗಳು ಇಲ್ಲ, ಓಬಿರಾಯನ ಕಾಲದ ಬೋಟ್‌ಗಳು ಸಹ ಪ್ರವಾಸಿಗರನ್ನು ಆಕರ್ಷಿಸುವುದಿಲ್ಲ, ಇದಕ್ಕಾಗಿಯೋ ಏನೋ ಅರಣ್ಯ ಇಲಾಖೆ ನಿಸರ್ಗಧಾಮದಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ಕಾಮಗಾರಿಯನ್ನು ಶುರುಮಾಡಿದೆ. ಪಕ್ಕದಲ್ಲೇ ಹರಿದುಹೋಗುವ ಕಾವೇರಿ ನದಿಯ ತಟದಲ್ಲಿ ಒಂದು ಡೈನಿಂಗ್ ಹಾಲ್ ನಿರ್ಮಿಸಲಾಗುತ್ತಿದೆ. ಎಲ್ಲ ಕಡೆ ಕುಳಿತುಕೊಳ್ಳಲು ಬೆಂಚ್‌ಗಳನ್ನು ಹಾಕಲಾಗುತ್ತಿದೆ. ಆದರೆ ಇಷ್ಟರಿಂದಲೇ ಜನರನ್ನು ಆಕರ್ಷಿಸುತ್ತೇವೆ ಎಂದರೆ ಅದು ಸಾಧ್ಯವಾಗದು.

ನಿರ್ಮಾಣ ಕಾರ್ಯದಲ್ಲಿ ಗೋಲ್‌ಮಾಲ್

ಅಸಲಿಗೆ ನಿಸರ್ಗಧಾಮದ ಈ ಕಾಮಗಾರಿಯನ್ನು ಇಲಾಖೆ ಶುರು ಮಾಡಿರೋದು ಪ್ರವಾಸಿಗರನ್ನು ಸೆಳೆಯಲು ಅಲ್ಲ, ಲೂಟಿ ಹೊಡೆಯಲು. ಈ ಹಿಂದೆ ಏಡುಕೊಂಡಲು ಎಂಬಾತ ಮಡಿಕೇರಿಯ ಡಿ.ಸಿ.ಎಫ್. ಆಗಿದ್ದ, ಆತ ಮೂಲತಃ ಸಿವಿಲ್ ಇಂಜಿನಿಯರ್. ಕಾವೇರಿ ನಿಸರ್ಗಧಾಮ ಅಭಿವೃದ್ಧಿ ಯೋಜನೆಯ ನೀಲನಕ್ಷೆ ಸಿದ್ಧಪಡಿಸಿ ಅಂದಾಜು ಪಟ್ಟಿ ತಯಾರಿಸುವಂತೆ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ಹೇಳಿದ್ದು ಇದೇ ಏಡುಕೊಂಡಲುಗೆ. ಆತ ಸಿದ್ಧಪಡಿಸಿದ್ದ ನೀಲನಕ್ಷೆಯಂತೆಯೇ, ಅವರ ಉಸ್ತುವಾರಿಯಲ್ಲಿಯೇ ಕಾಮಗಾರಿ ಆರಂಭವಾಗಿತ್ತು,



ಸೂರ್ಯಸೇನ

ಈ ನಡುವೆ ಮನೋಜ್ ಮತ್ತು ಏಡುಕೊಂಡಲ ನಡುವೆ ಸಂಘರ್ಷ ಶುರುವಾಗಿತ್ತು, ಹಲವಾರು ಬಿಲ್‌ಗಳಿಗೆ ಸಹಿ ಹಾಕಲು ಏಡುಕೊಂಡಲು ನಿರಾಕರಿಸಿದ್ದ, ಖರ್ಚಿಗೂ, ಅಧಿಕಾರಿಗಳು ಸಲ್ಲಿಸಿದ್ದ ಬಿಲ್‌ಗಳಿಗೂ ತಾಳೆ ಇರಲಿಲ್ಲ, ಆನೆ ಹಿಡಿಯುವ ವಿಚಾರದಲ್ಲಿ ಲೂಟಿ ಹೊಡೆಯುವ ಯೋಜನೆಗೆ ಏಡುಕೊಂಡಲು ಕಡಿವಾಣವನ್ನು ಹಾಕಿದ್ದರು. ಇಂದಿಗೂ ಆ ಬಿಲ್‌ಗಳನ್ನು ಪಾಸ್ ಮಾಡಲು ಸಾಧ್ಯವಾಗಿಲ್ಲ, ಇದರ ಜೊತೆಯಲ್ಲಿ ಬೇಲೂರು ಮಠಕ್ಕೆ ಸಂಬಂಧಪಟ್ಟಂತೆ ಸುಮಾರು 150 ಎಕ್ರೆ ಅರಣ್ಯ ಪ್ರದೇಶವನ್ನು ಮಠಕ್ಕೆ ಬಿಟ್ಟು ಕೊಡುವ ವಿಚಾರದಲ್ಲಿ ಯಾವುದೇ ಒತ್ತಡಕ್ಕೂ ಏಡುಕೊಂಡಲು ಮಣಿಯಲಿಲ್ಲ,

ನಿಸರ್ಗಧಾಮದ ಕಾಮಗಾರಿಗೆ ಕೋಟ್ಯಾಂತರ ರೂಪಾಯಿ ಮಂಜೂರಾತಿ ಪಡೆದು, ಲೂಟಿ ಹೊಡೆಯುವ ತನ್ನ ಉದ್ದೇಶಕ್ಕೆ ಈತ ಇದ್ದರೆ ಅಡ್ಡಿಯಾಗುತ್ತೆ ಎಂದರಿತ ಮನೋಜ್‌ಕುಮಾರ್ ಆತನನ್ನು ಅಲ್ಲಿಂದ ಎತ್ತಂಗಡಿ ಮಾಡಿಸಿದ್ದ, ಅವರ ಜಾಗಕ್ಕೆ ವಿರಾಜಪೇಟೆಯಲ್ಲಿ ಆಗಷ್ಟೇ ಕಾಯಂಮಾತಿಗೊಂಡು ಡಿ.ಸಿ.ಎಫ್. ಆಗಿದ್ದ ಸೂರ್ಯಸೇನನನ್ನು ಮಡಿಕೇರಿ ಡಿ.ಸಿ.ಎಫ್. ಆಗಿ ಹಾಕಿಸಿಕೊಂಡಿದ್ದ ಮೇಲ್ನೋಟಕ್ಕೆ ಅತ್ಯಂತ ವಿನಯವಂತನಂತೆ ವರ್ತಿಸುವ ಮನೋಜ್, ವಾಸ್ತವದಲ್ಲಿ ಪರಮ ಕಪಟಿ.

ತಿಂಗಳ 20 ದಿನ ಬೆಂಗಳೂರಿನಲ್ಲಿಯೇ ಇರುವ ಮನೋ ಕುಮಾರ್, ಕೊಡಗಿನಲ್ಲಿ ಯಾವುದೇ ಕಾರ್ಯ ಮಾಡುವುದಿ ತನ್ನ ಕೈಕೆಳಗಿನ ಅಧಿಕಾರಿಗಳು ಮಾಡಿದ್ದನ್ನೇ ತಾ ಮಾಡಿರುವುದಾಗಿ ಬಿಂಬಿಸಿಕೊಳ್ಳುವುದರಲ್ಲಿ ನಿಷ್ಣಾ ಆನೆಗಳನ್ನು ಹಿಡಿಯುವ ವಿಚಾರದಲ್ಲಿ ಯೋಜನೆ ರೂಪಿಸಿ ಏಡುಕೊಂಡಲು, ಆದರೆ ಅದರ ಕ್ರೆಡಿಟ್ ಪಡೆದ ಮನೋಜ್ ಕುಮಾರ್. ಪಾಪ; ಅರಣ್ಯ ಸಚಿವ ರಮಾನಾ ರೈಗೆ ಇವನ ಗೋಸುಂಬಿ ಗೊತ್ತಿದ್ದಂತೆ ಕಾಣುವುದಿ ಹಾಗಾಗಿ ಮನೋಜ್ ಓರ್ವ ದಕ್ಷ ಅಧಿಕಾರಿ ಎಂ ಭರವಸೆಯಲ್ಲೇ ಆತ ಹೇಳಿದ್ದಕ್ಕೆಲ್ಲ ರೈ ಸೈ ಅನ್ನುತ್ತಿದ್ದಾ ಏಡುಕೊಂಡಲರನ್ನು ವರ್ಗಾವಣೆ ಮಾಡುವಂತೆ ಮನೋ ಕಿವಿಯೂದಿದಾಗ ಸಚಿವರು ಅದಕ್ಕೆ ಜೈ ಅಂದದ್ದು ಕೂ ಇದೇ ಕಾರಣಕ್ಕೆ.

ಏಡುಕೊಂಡಲ ಅತ್ತ ಹೋದಕೂಡಲೇ ಕಾವೇ ನಿಸರ್ಗಧಾಮದ ಕಾಮಗಾರಿ ಕದಲಾಡಲು ಶುರುವಾಗಿ ಖಚಿತ ಮೂಲಗಳ ಪ್ರಕಾರ 1 ಕೋಟಿ 50 ಲ ರೂಪಾಯಿಗ ಯೋಜನೆಯನ್ನು ರೂಪಿಸಲಾಗಿದೆ. ಕಾಮಗಾ ನಡೆಯುವುದರಲ್ಲಿ ಏನೂ ವಿಶೇಷತೆ ಇಲ್ಲ, ಆದರೆ ಇ ನಡೆದಿರುವ ಹಲವು ವಿಚಾರಗಳು ಸಾಕಷ್ಟು ಅನುಮಾನಗ ಎಡೆಮಾಡಿಕೊಟ್ಟಿದೆ. ಇದು ಬಹಳ ದೊ ಕಾಮಗಾರಿಯಾಗಿರುವುದರಿಂದ ಈ ಬಗ್ಗೆ ಟೆಂಡ ಕರೆಯಬೇಕಾಗಿತ್ತು, ಇಲ್ಲವೇ ಸರಕಾರಿ ಸಂಸ್ಥೆಗಳಿಗೆ ಗು ನೀಡಬೇಕಾಗಿತ್ತು. ಅಂದರೆ ಭೂಸೇನಾ ನಿಗಮ ಅಥ ನಿರ್ಮಿತಿ ಕೇಂದ್ರಕ್ಕೆ ನೀಡಬೇಕಾಗಿತ್ತು, ಹಾಗೆ ಮಾಡಲಿ ನೇರವಾಗಿ ಅರಣ್ಯ ಇಲಾಖೆಯ ಅಧಿಕಾರಿಗ ಕಾಮಗಾರಿಯನ್ನು ಮಾಡುತ್ತಿದ್ದಾರೆ. ಇದರ ಉಸ್ತುವಾರಿಯ ಮಡಿಕೇರಿ ವಿಭಾಗದ ಡಿ.ಸಿ.ಎಫ್. ಆಗಿರುವ ಸೂರ್ಯಸೇ ವಹಿಸಿಕೊಂಡಿದ್ದಾನೆ. ಆತ ಕಚೇರಿಯಲ್ಲಿ ಇರುವುದಕ್ಕಿ ಹೆಚ್ಚಾಗಿ ನಿಸರ್ಗಧಾಮದಲ್ಲೇ ಕಳೆಯುತ್ತಾನೆ. ಈ ಬ ವಿಚಾರಿಸಿದರೆ, ಟೆಂಡರ್ ಕರೆಯಲಾಗಿತ್ತು ಆದರೆ ಯಾ ಟೆಂಡರ್‌ನಲ್ಲಿ ಭಾಗವಹಿಸಲಿಲ್ಲ, ಹಾಗಾಗಿ ಇಲಾಖೆ ಅನುಮತಿ ಪಡೆದು ನಾವೇ ಕಾಮಗಾರಿ ಶುರು ಮಾಡಿದ್ದ ಎಂಬ ಸಬೂಬು ಹೇಳುತ್ತಾರೆ.


ಸದರಿ ಕಾಮಗಾರಿ ನಡೆಯುವುದರ ಬಗ್ಗೆ ಇಲಾಖೆಯ ಸೂರ್ಯಸೇನ್ ಮತ್ತು ಮನೋಜ್ ಕುಮಾರ್ ಬಿ ಬೇರೆ ಯಾರಿಗೂ ತಿಳಿದಿಲ್ಲ, ವಾಸ್ತವದಲ್ಲಿ ಕುಶಾಲನ ಭಾಗದ ರೇಂಜರ್ ವ್ಯಾಪ್ತಿಗೆ ನಿಸರ್ಗಧಾಮ ಬರುತ್ತದೆ. ಅವರ ಗಮ ಬಂದೇ ಈ ಕಾಮಗಾ ನಡೆಯಬೇಕಾಗಿತ್ತು, ಆದರೆ ಇಲ್ಲಿಯವ ಅವರ ಗಮನಕ್ಕೇ ಬಂದಿಲ್ಲ, ಇ ಸೋಮವಾರಪೇಟೆಯಲ್ಲಿರುವ ವಿಭಾಗದ ಎ.ಸಿ.ಎಫ್.ಓ. ಅವರಿ ಕಾಮಗಾರಿಯ ಬಗ್ಗೆ ಮಾಹಿತಿ ಇಲ್

ವಿಶೇಷವೆಂದರೆ ಕಾಮಗಾ ಆರಂಭವಾಗುತ್ತಲೇ ಖಾತೆಯಿಂದ ಲಕ್ಷ ರೂಪಾಯಿಯನ್ನು ಪಡೆಯಲಾಗಿದೆ. ಇಷ್ಟೊಂ ಬೃಹತ್ ಮೊತ್ತವನ್ನು ಖಾತೆಯಿಂದ ತೆಗೆಯಬೇಕಾದ ಸರಿಯಾದ ದಾಖಲೆಗಳು ಇರಲೇಬೇಕು. ಒಂದುವೆ ಇಲಾಖೆಯ ಅನುಮತಿಯ ಮೇರೆ ಇಲಾಖೆಯಿಂದ ಕಾಮಗಾರಿಯನ್ನು ಮಾಡುತ್ತಿದ್ದರೆ, ಆಗಿರುವ ಕಾಮಗಾ ಮೊತ್ತವನ್ನು ಪಡೆಯಬೇಕಾದರೆ, ಕಾಮಗಾರಿ ಆಗಿರ ಪ್ರಮಾಣದ ಪರಿಶೀಲನೆ ಅಂದರೆ ಅಳತೆ (ಮೆಷರ್‌ಮೆಂಟ್) ಆಗಬೇಕು. ಇದನ್ನು ಮಾಡಬೇಕಾದ ಸೋಮವಾರಪೇಟೆ ಭಾಗದ ಎ.ಸಿ.ಎಫ್.ಓ. ಅ ಕಾಮಗಾರಿ ವಿಚಾರವೇ ಅವರಿಗೆ ಗೊತ್ತಿಲ್ಲ ಎಂದಾ ಇನ್ನು ಪರಿಶೀಲನೆ ಹೇಗೆ ಮಾಡಿಯಾರು!

ಪರಿಸರಸ್ನೇಹಿ ಅಲ್ಲ

ನಾಪೋಕ್ಲು ಸಮೀಪ ತಾಮರ ರೆಸಾರ್ಟ್ ಬಂದ ಕೊಡಗಿನ ಡೋಂಗಿ ಪರಿಸರವಾದಿಗಳು ಪರಿಸರ ನಾ ಕೂಗು ಎಬ್ಬಿಸಿದ್ದರು. ಅಲ್ಲಿಯ ಡೈನಿಂಗ್ ಹಾ ಜಲಪಾತವೊಂದರ ಮೇಲೆ ನಿರ್ಮಾಣವಾಗಿದೆ ಎಂ ಪ್ರತಿಭಟನೆಗಳನ್ನು ಮಾಡಿದ್ದರು. ನ್ಯಾಯಾಲಯ, ಹಸಿ ಪೀಠ ಎಂದೆಲ್ಲಾ ಹೇಳಿಕೊಂಡು ಹಿಂಸಿಸಿದರು. ಪ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾ ಮಾಲಿನ್ಯ ನಿಯಂತ್ರಣ ಮಂಡಳಿ ಸಾಕಷ್ಟು ಕಿರುಕುಳ ನೀಡಿ ಆದರೆ ಈಗ ಕಾವೇರಿ ನಿಸರ್ಗಧಾಮದಲ್ಲಿ ನಡೆಯುತ್ತಿ ಕಾಮಗಾರಿ ಸಂಪೂರ್ಣವಾಗಿ ಪರಿಸರವನ್ನು ಹಾ ಮಾಡುವ ಯೋಜನೆಯಾಗಿದೆ. ಕಾವೇರಿ ನದಿಯ ಡೈನಿಂಗ್ ಹಾಲ್ ನಿರ್ಮಿಸಲಾಗುತ್ತಿದೆ. ಖಾಸಗಿಯ ಮಾಡಿದಂತೆ, ಇವರು ಕೂಡ ಪ್ರವಾಸಿಗರನ್ನು ಆಕರ್ಷಿ ಉದ್ದೇಶದಿಂದ ಈ ರೀತಿ ಮಾಡಿರುವುದರಲ್ಲಿ ಅನುವ ವಿಲ್ಲ. ಆದರೆ ಜಿಲ್ಲೆಯ ಡೋಂಗಿ ಪರಿಸರವಾದಿ ಇದನ್ನು ವಿರೋಧಿಸುತ್ತಿಲ್ಲ, ಅಂದರೆ ಕೊಡಗಿನಲ್ಲಿ ಅ ಇಲಾಖೆ ಮತ್ತು ಡೋಂಗಿ ಪರಿಸರವಾದಿಗ ಜಂಟಿಯಾಗಿಯೇ ಕಾರ್ಯ ನಿರ್ವಹಿಸುತ್ತಿರೋ ಸಾಬೀತಾದಂತಾಗುತ್ತೆ.

▶▶| 15




ಹಾರಂಗಿ ಜಲಾಶಯದ ಸಮೀಪ ಟ್ರೀ ಪಾರ್ಕ್ ಕಾಮಗಾರಿ ನಡೆಯುತ್ತಿರುವುದು

...ಂದಗಿಯಲ್ಲಿ ನಿಜಗುಣಸ್ವಾಮೀಜಿಯ ಪ್ರವಚನಕ್ಕೆ ಅಡ್ಡಿ?!

...ವಿಜಯಪುರ ಜಿಲ್ಲೆಯ ಸಿಂದಗಿಯ ಮಾಯಾ ಬಿಂದಗಿ ...ಬಾ ಪ್ರಸಿದ್ಧವಾಗಿತ್ತು. ನೂರಾರು ಕೊಡ ನೀರು ...ದರೂ ತುಂಬದ ಬಿಂದಿಗೆಯ ಪವಾಡ ಆಗ 'ಲಂಕೇಶ್ ...ಕೆ'ಯಲ್ಲಿ ಬಟಾಬಯಲಾದದ್ದೆ ತಡ, ಅಲ್ಲಿನ ...ರೋಹಿತನನ್ನು ಕ್ಯಾರೆ ಅನ್ನದ ಸ್ಥಿತಿ ಹಿಂದೆ ...ರ್ಮಾಣವಾಗಿತ್ತು. ಆದರೆ ಹೇಳಿಕೇಳಿ ಸರಕಾರಿ ಜಾಲಿ. ...ಹೊಲದ ನೆಲ ಹದ ಮಾಡಿ ಹೊಸ ಬೀಜ ಬಿತ್ತಿ ...ೀನು ಬೆಳೆ ನಾಟಿತು ಎನ್ನುವಷ್ಟರಲ್ಲಿಯೆ ಅದನ್ನು ಆರಗಿ ...ತು ಹೊಡೆಯುವ ಪುರೋಹಿತರ ಪಟಾಲಂ ಜಾಲಿ ...ಬಿತ್ತುತ್ತ ನಡೆದು ಬಿಡುತ್ತದೆ. ಇದು ಕೇವಲ ಸಿಂದಗಿಯ ...ಮಾತ್ರವಲ್ಲ ಇಡೀ ಭಾರತದ ಕತೆಯೂ ಹೌದು.

...ಪಂಚನದಿಗಳ ನಾಡೆಂದು ಬಣ್ಣಿಪ ನಾಡು ವಿಜಯಪುರ ...ೀಗ ಅಕ್ಷರಶಃ ಬರದ ನಾಡು. ಬರದ ನಾಡಿನಲ್ಲೂ ...ಸಕಲಕಲಾ ವಿದ್ಯಾ ಪಾರಂಗತರಾದ ಮಠಾಧೀಶರು ...ತ್ರ ತಮ್ಮ ಶಕ್ತಿಗೆ ಅನುಸಾರವಾಗಿ ಜನರಲ್ಲಿ ಮೌಢ್ಯಗಳನ್ನು ...ತಾವು ಗಡದ್ದಾಗಿ ತಿಂದು ತೇಗಿ ಕುಳಿತಿರುವುದನ್ನು ...ಕಾಣುತ್ತೇವೆ. ಭೀಮಾನದಿಯ ತೀರದ ಜನಗಳನ್ನು ...ತಕರನ್ನಾಗಿ ರೂಪಿಸಿದ್ದರಲ್ಲಿ ಮಠಗಳ ಪಾತ್ರವೂ ಇದೆ ...ಬುದು ಅತ್ಯಂತ ಖೇದದ ಸಂಗತಿಯಾಗಿದೆ.

...ಇಂಥ ಮೌಢ್ಯಗಳ ನಾಡಿನಲ್ಲಿ ಸಹಜವಾಗಿ ಮುತಾಲಿಕ್ ...ಮನುವಿನ ಮೊಮ್ಮಗನ ಕೆಲಸ ತುಂಬಾ ಸಲೀಸು. ...ವ ಜನತೆಗೆ ಹಿಂದೂತ್ವದ ಅಫೀಮು ಕುಡಿಸಿ ...ರೆಲ್ಲರಿಂದ ಮಾಡಬಾರದ ಹೀನಾಯ ಕೆಲಸಗಳನ್ನೆಲ್ಲ ...ಸಗಟಾಗಿ ಮಾಡುತ್ತ ಬಂದಿದ್ದಾನೆ. ಶ್ರೀರಾಮಸೇನೆಯ ...ವ ಅಧ್ಯಕ್ಷನಾದ ಆಂದೋಲದ ಸಿದ್ಧಲಿಂಗಸ್ವಾಮಿ ...ಯಾಸ್ ನಟೋರಿಯಸ್ ಭಯೋತ್ಪಾದಕನ ಕುಯುಕ್ತಿಗೆ ...ಗಿ ಅಕ್ಷರಶಃ ನಲುಗಿ ಹೋಗಿದೆ. ಗಣೇಶೋತ್ಸವದ ...ರ್ಭದಲ್ಲೂ ಮೆರವಣಿಗೆ ಪೊಲೀಸ್ ಬಿಗಿ ...ಮೋಬಸ್ತನಲ್ಲಿ ಸಾಗುತ್ತದೆಂದರೆ ಇಲ್ಲಿ ಎಂಥ ಬಗ್ಗಡ



ಸ್ಥಿತಿ ನಿರ್ಮಾಣವಾಗಿದೆ ಎಂಬುದನ್ನು ನೀವೇ ಊಹಿಸಿಕೊಳ್ಳಿ.

ಹಿಂದೊಮ್ಮೆ ಹಿಂದೂ ಧರ್ಮದ ನಕಲಿ ಹುಲಿಗಳ ಮಾತುಕೇಳಿ ಇಲ್ಲಿನ ವಿವೇಕವಿಲ್ಲದ ಹುಡುಗರು ಪಾಕಿಸ್ತಾನದ ಧ್ವಜ ಹಾರಿಸಿ, ಅದನ್ನು ಮುಸ್ಲಿಂ ಸಮುದಾಯದ ಮೇಲೆ ಆರೋಪ ಹೊರಿಸಿದ್ದು, ನಂತರ ಸತ್ಯ ಬಯಲಾದದ್ದು ಯಾರೂ ಮರೆತಿಲ್ಲ.

ಈ ಕರಾಳ ಇತಿಹಾಸವನ್ನು ಅಳಿಸಿ ಹೊಸ ಮನ್ವಂತರ ಉಂಟುಮಾಡಲೆಂದು ಬಂದಿರುವ ಮುಂಡರಗಿ ಮಠದ ಶ್ರೀ ನಿಜಗುಣಸ್ವಾಮಿಗಳ ಪ್ರವಚನ ನಡೆಯುತ್ತಿರುವಂತೆ ಕೆಲವರಿಗೆ ಅಂಡಿನಲ್ಲಿ ತುರಿಕೆ ಉಂಟಾಗಿದೆ. ಹನ್ನೆರಡನೆಯ ಶತಮಾನದ ಅಕ್ಕಮಹಾದೇವಿಯ ಕುರಿತ ಪ್ರವಚನದ ಜೊತೆಜೊತೆಗೆ ನಿಜವಾದ ಆಧ್ಯಾತ್ಮವನ್ನು ಬಿತ್ತುತ್ತ ನಡೆದಿರುವ ನಿಜಗುಣಸ್ವಾಮಿಗಳ ಮಾತು ಅರಗಿಸಿಕೊಳ್ಳಲಾಗದೆ ಒಳಗೊಳಗೆ ಮುಲುಗುಟ್ಟುತ್ತಿವೆ.

ದೇವರು, ಧರ್ಮಗಳನ್ನು ಮೌಢ್ಯಗಳ ಆಚರಣೆಯಲ್ಲಿ ಹುದುಗಿಟ್ಟು ಕೇವಲ ಅರ್ಚನೆ, ಪೂಜೆಗಳೆಂಬ ಬಾಹ್ಯ ಆಚರಣೆಗಳ ಮೂಲಕ ಧರ್ಮವನ್ನು ಉಳಿಸಬಹುದು; ದೇವರನ್ನು ಕಾಣಬಹುದು ಎಂಬುದನ್ನು ಬುಡಮೇಲುಗೊಳಿಸುವ ಸ್ವಾಮೀಜಿಯ ಮಾತು ಅಕ್ಷರಶಃ ಅವರನ್ನು ದಿಕ್ಕುಗೆಡಿಸಿದೆ. ಆದರೆ ಇಲ್ಲಿನ ಜನ ಸಾಮಾನ್ಯ ಮಾತ್ರ ದಿನದಿಂದ ದಿನಕ್ಕೆ ಪ್ರವಚನ ಕೇಳಲು ಹಾತೊರೆದು ಬಂದು ಕಾಲೇಜಿನ ಪ್ರಾಂಗಣದ ತುಂಬೆಲ್ಲ ರಂಗು ತುಂಬುತ್ತಿದ್ದಾನೆ. ಎತ್ತುವಳಿ ಕಾರ್ಯಕ್ರಮವೆ ಧರ್ಮ; ಮೆರವಣಿಗೆ ಉರವಣಿಗೆಗಳೆ ಧರ್ಮವನ್ನು ಬೆಳೆಸುವ ಪರಿ ಎಂದೆಲ್ಲ ಇದುವರೆಗೆ ನಂಬಿಕೊಂಡು ಬಂದ ಜನಕ್ಕೆ ಬಸವಾದಿ ಶರಣರ ವಚನಗಳ ನೇರ ನಿಷ್ಠುರ ದಾರಿ ಜನತೆಯನ್ನು ಜ್ಞಾನದೆಡೆಗೆ ಕೊಂಡೊಯ್ಯುತ್ತಿದೆ. ಇಷ್ಟು ದಿನ ತಾವು ನಿತ್ಯವೂ ಗುಡಿಯಲ್ಲಿ ಪೂಜಿಸುತ್ತಿದ್ದ ನೈವೇದ್ಯ ಅರ್ಪಿಸಿ ಕೃತಾರ್ಥತೆಯನ್ನು ಅನುಭವಿಸುತ್ತಿದ್ದುದ್ದೆಲ್ಲ ಸುಳ್ಳಿನ ಕಂತೆ ಎಂಬುದು ಅವರಿಗೆಲ್ಲ ಮನದಟ್ಟಾಗಿದೆ.

ಜಗತ್ತು ಒಂದೆ ಇದ್ದರೂ ಇದಕ್ಕೆ ಹಲವಾರು ಜನ ಗುರುಗಳು. ವ್ಯಕ್ತಿ ಗುರುವಲ್ಲ, ತತ್ವಸಹಿತ ವ್ಯಕ್ತಿ ಗುರುವಾಗಬಲ್ಲ. ಗುರು ಕೇವಲ ಒಂದು ಜನಾಂಗದ ಸ್ವತ್ತಲ್ಲ. ಅದು ಸರ್ವಜನಾಂಗದ ಸ್ವತ್ತು. ಗುರುಲಿಂಗ ಜಂಗಮವೆಂಬುದು ಹೊರಗಿನ ಪದಗಳಲ್ಲ. ಅವು ಅಂತರಂಗದ ಶಬ್ದಗಳೂ ಹೌದು ಎಂಬ ಮಾತು ಜನರನ್ನು ಉಲ್ಲಸಿತರನ್ನಾಗಿ ಮಾಡುತ್ತಿವೆ. 'ಹೆಣ್ಣು ಕೀಳು ಗಂಡು ಮೇಲು. ಹೆಣ್ಣು ಮಾಯೆ. ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ' ಎಂಬ ಮಾತು ಪುಂಡ ಪುರೋಹಿತನ ಸೃಷ್ಟಿ ಎಂಬುದು ಸ್ಪಷ್ಟವಾಗುತ್ತಿದೆ. ಜಗತ್ತಿನಲ್ಲಿರುವ ಎಲ್ಲರೂ ಶಿವ ಪ್ರಸಾದಿಗಳು. ಇಲ್ಲಿ ಯಾರೂ ಮೇಲಿಲ್ಲ, ಕೀಳಿಲ್ಲ, ಜಾತಿಗಳು ಮನುಷ್ಯ ಸೃಷ್ಟಿ. ಈ ಸಂಕೋಲೆಯ ಬಲೆಯನ್ನು ಕಿತ್ತೆಸೆದಾಗಲೆ ಸತ್ಯ ಗೋಚರಿಸುತ್ತದೆ ಎಂಬ ಮಾತುಗಳು ಜನತೆಯನ್ನು ಬಡಿದೆಬ್ಬಿಸುತ್ತಿವೆ.

ಆದರೆ ಈ ಬೆಳವಣಿಗೆಯನ್ನು ಕಂಡು ಸಹಿಸದ ಕೆಲವು ಕುತಂತ್ರಿಗಳು ನಿಜಗುಣಸ್ವಾಮಿಗಳ ಪ್ರವಚನವನ್ನು ಹೇಗಾದರೂ ನಿಲ್ಲಿಸಬೇಕೆಂದು ಹಠತೊಟ್ಟವರಂತೆ ಏನೇನೋ ಕಿರಿಕ್ಕುಗಳನ್ನು ಆರಂಭಿಸಿದ್ದಾರೆ. ಪ್ರಚೋದನಾತ್ಮಕ ಮಾತುಗಳ ಮೂಲಕ ಎಲ್ಲೋ ನಿಂತು ಪರಿಸ್ಥಿತಿ ಹದಗೆಡಿಸುವ ಹುನ್ನಾರದ ಎತ್ತುಗಡೆಯಲ್ಲೂ ತೊಡಗಿದ್ದಾರೆ. ಸಾಲದೆಂಬಂತೆ ನಿಜಗುಣಸ್ವಾಮಿ ಧರ್ಮವನ್ನು ಟೀಕಿಸಿ ತಮ್ಮ ಮನಸ್ಸಿಗೆ ನೋವುಂಟುಮಾಡುತ್ತಿದ್ದಾನೆ ಎಂಬ ಕ್ಷುಲ್ಲಕ ಆರೋಪ ಮಾಡಿ ಪೊಲೀಸರನ್ನು ಛೂಬಿಡುವ ಮಟ್ಟಕ್ಕೂ ಹೋಗಿದ್ದಾರೆ.

ಸಿಂದಗಿಯ ಕೆಲವೆ ಕೆಲವು ಜನ ಮುಠಾಳರು ಈಗಲಾದರೂ ಸತ್ಯ ಅರಿತುಕೊಳ್ಳಬೇಕು. ಗುಲಾಮಗಿರಿಯ ಧರ್ಮವಾದ ಮನುಧರ್ಮವನ್ನು ಅಪ್ಪಿಕೊಳ್ಳುವುದಕ್ಕಿಂತ ಮನಸ್ಸಿನ ಧರ್ಮವನ್ನು ಅಪ್ಪಿಕೊಳ್ಳಲು ಮುಂದಾಗಬೇಕು. 'ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿದೆಯೇನು? ಎಂದೋ ಮನು ಬರೆದಿಟ್ಟುದೆಮಗೆ ಕಟ್ಟೇನು? ಮನು ನಿನಗೆ ನೀನು' ಎಂಬ ಕುವೆಂಪು ವಾಣಿಯನ್ನು ಎಚ್ಚರಿಕೆಯ ನುಡಿಗಳೆಂದು ಪರಿಗಣಿಸಿ ನಿಜಗುಣ ಶಿವಯೋಗಿಗಳ ಪ್ರವಚನ ಸಾಂಗವಾಗಿ ಜರುಗುವಂತೆ ನೋಡಿಕೊಳ್ಳಬೇಕು. ಇದು ಪ್ರಜ್ಞಾವಂತ ನಾಗರಿಕರ ಕರ್ತವ್ಯವೂ ಆಗಿದೆ.

■ ವರದಿಗಾರ

...ೃಷ್ಣನದ್ದು ಈ ಶತಮಾನದ ರಾಜಕೀಯ ದ್ರೋಹವಂತಲ್ಲಾ!

ಥೂತ್ತೇರಿ

ಯಾಹೂ

...ಕಡೆಗೂ ನಮ್ಮ ಸೋಮೇನಹಳ್ಳಿ ವಯೋವೃದ್ಧ ...ಿಯ ವೃದ್ಧಾಶ್ರಮ ಸೇರಲು ತೀರ್ಮಾನಿಸಿದ್ದಾರೆ. ಇದು ...ತ್ತಾದಕೂಡಲೇ ಎಡೂರಪ್ಪ ಮತ್ತು ಅಶೋಕ್ ಸುಗಂಧ ...ದ ಪುಷ್ಪ ನೀಡಿ, ಅವರಿಗೆ ನಿಗದಿಯಾಗಿರುವ ಮಂಚ, ...ಶೀಟ್, ಊಟ ಇತ್ಯಾದಿ ವಿವರ ಕೊಟ್ಟರಂತಲ್ಲಾ. ...ತೆಗೆ ಬೆಂಗಳೂರು ನಗರ ತಿರುಗಾಡಿಸಿ ಕೊಂಡು ಬರುವ ...ದಿ ವಿವರ ಕೊಟ್ಟಿದ್ದಾರಂತಲ್ಲಾ. ಯಾವ ಡಿಮ್ಯಾಂಡನ್ನು ...ದ ವೃದ್ಧರು "ಕಾಂಗ್ರೆಸ್ ನನ್ನನ್ನು ವಯಸ್ಸಿನ ಕಾರಣಕ್ಕೆ ...ರ ಮಾಡಿದ್ದರಿಂದ ನಾನು ನಿಮ್ಮ ಮನೆಗೆ ಬಂದೆ ... ಸಿದ್ದಾರ್ಥನ ವಿಷಯ ನಿಮಗೆ ಬಿಟ್ಟದ್ದು. ಇನ್ನು ...ಭವಿಷ್ಯ ವಾಜಪೇಯಿ, ಅಡ್ವಾನಿ, ಮುರಳಿ ಮನೋಹರರ ...ಷ್ಯದಂತೆ ಉಜ್ವಲವಾಗಿದೆ. ಬೆಂಗಳೂರಿನ ಎಲ್ಲಾ 28 ...ದ ವಿಷಯ ನನಗೆ ಬಿಡಿ" ಎಂದರಂತಲ್ಲಾ.

...ಸದರಿ ವಿಷಯ ತಿಳಿದ ಕಾಂಗ್ಯೆಗಳು "ಇದು ಈ ...ಮಾನದ ರಾಜಕೀಯ ದ್ರೋಹ. ಇಂತಹ ಮಾತನ್ನು ...ಬೇಕಾದರೆ ನಮ್ಮ ವಿಶ್ವನಾಥನೇ ಸರಿಯಾಗಿದ್ದ. ಆದರೆ ...ೂ ತಿರುಗಿ ಬಿದ್ದಿದ್ದಾನೆ. ಪೂಜಾರಿ ಏನು ಹೇಳುತ್ತಾರೋ ...ಡೋಣ" ಎಂದು ಕಾಯುತ್ತಿವೆಯಂತಲ್ಲಾ, ಥೂತ್ತೇರಿ!

* * *

...ಪ್ರಬುದ್ಧ ಮನಸ್ಸಿನ ಗುರ್‌ಮೆಹರ್ ವಿರುದ್ಧ ದೇಶದ ...ೊಂಗಿ ಭಕ್ತರು ಬಿತ್ತರಿಸಿದ ಪ್ರತಿಕ್ರಿಯೆಗೆ ಬೆಚ್ಚಿದ ನಮ್ಮ ...ಯ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಸರಿಯಾದ ...ರವನ್ನೇ ಕೊಟ್ಟಿದ್ದಾರಲ್ಲಾ. ಸಂಘ ಪರಿವಾರದವು ...ಮೆಹರ್‌ಳನ್ನು ಸುತ್ತುವರಿದಿದ್ದನ್ನು ಗ್ರಹಿಸಿದ ಕ್ಯಾಪ್ಟನ್‌ಗೆ ...ಾದ ಕಾಡಿನಲ್ಲಿ ಚಿಗರೆಯನ್ನು ಹೈನಾಗಳೂ ಹರಿದು ...ವಂತೆ ಕಂಡಿದೆ. ಸಾಮಾನ್ಯವಾಗಿ ಹೈನಾಗಳು ...ಯಾಡುವುದು ಕಡಿಮೆ. ಬೇರೆಯವು ಆಡಿದ ...ಯನ್ನು ಕಿತ್ತು ತಿನ್ನುವುದರಲ್ಲಿ ಜಂಗಲುಗಳು. ಆಕಸ್ಮಾತ್ ...ಯಾಡಿದರೆ ಮಿಕದ ಜೀವ ತೆಗೆಯುವುದಕ್ಕೂ ಮುನ್ನ ...ೂಡಗುತ್ತವೆ. ಅದೇ ಹುಲಿ, ಸಿಂಹ ಮತ್ತು ಚಿರತೆ ... ಕತ್ತು ಹಿಡಿದು ಪೂರ್ಣವಾಗಿ ಕೊಂದ ನಂತರ ...ತ್ತವೆ. ಆದರೆ ಯಾರಿಗೂ ಇಷ್ಟವಾಗದ ಹೈನಾಗಳ ...ರಿಯೇ ಬೇರೆ. ಇಂತಹ ಹೀನಜಾತಿ ಕುಲಕ್ಕೆ ನಮ್ಮ ...ದ ಢೋಂಗಿ ದೇಶಭಕ್ತರನ್ನು ಹೋಲಿಸಿರುವುದು ನೂರಕ್ಕೆ ... ಸರಿ. ಈ ಹೈನಾಗಳ ಗುಂಪಿನಲ್ಲಿ ಮೈಸೂರು ...ದ ಸಂಸದರನ್ನು ಸೇರಿರುವುದು ಇನ್ನೂ ಸರಿಯಾಗಿದೆಯಂತಲ್ಲಾ, ...ತ್ತೇರಿ!!

* * *

...ಬಳ್ಳಾರಿ ಗಣಿ ಧೂಳಿನಿಂದ ಮುಕ್ತಿ ಎದ್ದು ಬಂದಿರುವ ...ನ ರೆಡ್ಡಿ ಉಡುಪಿಗೆ ಹೋಗಿ ಕೃಷ್ಣನನ್ನು ಭೇಟಿಯಾಗಿ ...ರಂತಲ್ಲಾ. ಇದಕ್ಕೆ ಕಾರಣವೇನೆಂದು ತರ್ಕಿಸಿದರೆ ಕೃಷ್ಣ ಗೋವರ್ಧನಗಿರಿಯನ್ನೇ ಬಗೆದು ಎತ್ತಿ ಹಿಡಿದಿದ್ದ; ಈ ರೆಡ್ಡಿ ಬಳ್ಳಾರಿ ಭೂಭಾಗವನ್ನೇ ಬಗೆದು ಚೀನಾ ದೇಶದಲ್ಲಿ ಸುರಿದ. ಬಳ್ಳಾರಿಯ ಗಣಿ ಲೂಟಿ ಕಾರಣಕ್ಕೆ ಜೈಲು ಪಾಲಾದ. ಆದರೆ ಕೃಷ್ಣ ಹುಟ್ಟಿದ್ದೇ ಜೈಲಿನಲ್ಲಿ, ಅಲ್ಲಿಂದ ಹೊರಬಂದನಂತರ ಮಾಡಿದ್ದು ಕಳ್ಳತನದ ಕೆಲಸಗಳು. ಬೆಣ್ಣೆ ಕದಿಯುವುದು, ಹೆಣ್ಣು ಮಕ್ಕಳ ಬಟ್ಟೆ ಕದಿಯುವುದು ಇವೆಲ್ಲ ತುಂಟಾದ ಕಳ್ಳತನಗಳು. ಸುಳ್ಳು, ಮೋಸ, ವಂಚನೆ, ಇವೆಲ್ಲವನ್ನು ಮಾಡಿ ದೇವರಾದ ಕೃಷ್ಣನ ದರ್ಶನ ಭಾಗ್ಯದಿಂದಲಾದರೂ ತಾನು ಮಾಡಿದ ಕಳ್ಳತನ, ವಂಚನೆ ಮತ್ತು ಹೇಳಿದ ಸುಳ್ಳುಗಳಿಂದ ಪಾರಾಗಿ ಜನಾರ್ದನನೆನಿಸಿಕೊಳ್ಳಲು ಹಂಬಲಿಸಿರುವ ರೆಡ್ಡಿ ಉಡುಪಿಗೆ ಯೋಗ್ಯನಾದ ಭಕ್ತನಂತಲ್ಲಾ, ಥೂತ್ತೇರಿ!!

* * *

ಜನಾರ್ದನರೆಡ್ಡಿ ಉಡುಪಿಗೆ ಯಾಕೆ ಯೋಗ್ಯನಾದ ಭಕ್ತನೆಂದರೆ ಅಲ್ಲಿ ನೆಲೆಸಿರುವ ಪೇಜಾವರ ಶ್ರೀಗಳಿಗೆ ಇಂತಹ ಭಕ್ತರೆಂದರೆ ಎಲ್ಲಿಲ್ಲದ ಪ್ರೀತಿ. ಕಳ್ಳ ಭಕ್ತರನ್ನು ಸಮರ್ಥಿಸಿಕೊಳ್ಳಲು ಅವರ ಬಳಿ ಪದಪುಂಜಗಳ ಬಂಡಾರವೇ ಇದೆ. ನೀವು ಕಳ್ಳತನದ ಆರೋಪಿಗಳೇ ಹೊರತು ಅಪರಾಧಿಗಳಲ್ಲ. ಒಂದು ವೇಳೆ ಅಪರಾಧಿಗಳು ಎಂದು ತೀರ್ಪು ಬಂದಿದ್ದರೆ, ಅದನ್ನು ಮಾನ್ಯ ಮಾಡುವ ಅಗತ್ಯವಿಲ್ಲ. ಅಷ್ಟಕ್ಕೂ ನಾವು ಮಾಡಿಕೊಂಡಿರುವ ಕೋರ್ಟು, ಕಚೇರಿ, ವಿಚಾರಣೆ ಇದೆಲ್ಲವೂ ಮನುಷ್ಯರ ಅನುಕೂಲಕ್ಕಾಗಿ ರಚನೆಯಾಗಿರುವಂತದ್ದು. ನಿಜವಾಗಲೂ ನಮ್ಮ ತಪ್ಪುಗಳಿಗೆ ಶಿಕ್ಷೆ ಕೊಡುವ ಅಧಿಕಾರ ದೇವರಿಗೆ ಮಾತ್ರ ಇರುವಂತದ್ದು. ಅದೇ ಅಂತಿಮ. ಹಾಗಾಗಿ ಎಲ್ಲರೂ ದೇವರ ಶಿಕ್ಷೆಗೆ ಕಾಯಬೇಕೆ ಹೊರತು ನಮ್ಮ ಕೋರ್ಟು, ಕಚೇರಿಗಳಿಗೆ ಹೆದರುವ ಅಗತ್ಯವಿಲ್ಲ. ಇಂತಹ ತರ್ಕಗಳಿಂದ ರೆಡ್ಡಿಯಂಥವರಿಗೆ ಸಮಾಧಾನ ಆದ್ದರಿಂದ ತಿಮ್ಮಪ್ಪನಿಗೆ ಬಂಗಾರದ ಕಿರೀಟ ಕೊಟ್ಟಿರುವ ರೆಡ್ಡಿ ಉಡುಪಿ ಕೃಷ್ಣನಿಗೆ ಪ್ಲಾಟಿನಂ ಉಡಿದಾರ, ವಜ್ರಖಚಿತ ಕಚ್ಚೆ ಕೊಟ್ಟರೂ ಆಚ್ಚರಿಯಿಲ್ಲವಂತಲ್ಲಾ, ಥೂತ್ತೇರಿ!!

* * *

ಉಡುಪಿ ಕೃಷ್ಣ ಕನಕನಿಗಾಗಿ ಪಶ್ಚಿಮಕ್ಕೆ ತಿರುಗಿ ಗೋಡೆ ಹೊಡೆದು ದರ್ಶನ ಕೊಟ್ಟ ಎಂಬ ಸುದ್ದಿಯಿಂದ ಬಳ್ಳಾರಿಯಿಂದ ಓಡಿಬಂದು ಕೃಷ್ಣನಿಗೇ ರೆಡ್ಡಿ ದರ್ಶನ ಕೊಟ್ಟನಂತಲ್ಲಾ. ರೆಡ್ಡಿ ಹೋದನಂತರ ಅದಮಾರು ಶ್ರೀಗಳು "ನಮ್ಮ ಉಡುಪಿ ಕೃಷ್ಣ ಕನಕನಿಗಾಗಿ ತಿರುಗಿಲ್ಲ. ಬದಲಿಗೆ ಜನರಿಗೇ ತಲೆ ತಿರುಗಿದೆ" ಎಂದರಂತಲ್ಲಾ. ಇದನ್ನ ಕೇಳಿಸಿಕೊಂಡ ಭಕ್ತಾದಿಗಳು, "ಈ ಅಧಮರ ತಲೆಯೇ ತಿರುಗಿದೆ. ನಮ್ಮ ಕೃಷ್ಣನ ಬಗ್ಗೆ ಇಂತಹ ಸುಳ್ಳು ಹೇಳುವುದೆ" ಎಂದು ಸಿಡಿಮಿಡಿಗೊಂಡರಂತಲ್ಲಾ. ಹಾಗೆ ನೋಡಿದರೆ ಈ ಅಧಮರು ಹೇಳಿದ ಸಂಗತಿ ನೂರಕ್ಕೆ ನೂರು ಸತ್ಯ. ಕಲ್ಲು ದೇವರು ಭಕ್ತನ ಕಡೆ ತಿರುಗುವುದಿಲ್ಲ. ಏಕೆಂದರೆ ಅದೊಂದು ಕಲ್ಲಿನ ವಿಗ್ರಹ. ಆದರೆ ಅದನ್ನು ಮನುಷ್ಯರು ತಿರುಗಿಸಬಹುದು. ಆ ಕೆಲಸ ನಡೆದಿದೆ. ಆದರೆ ವಿಗ್ರಹವನ್ನೇ ಆ ದಿಕ್ಕಿಗೆ ಸ್ಥಾಪಿಸಿ, ಬಾಗಿಲು ಬಿಡುವುದರ ಬದಲು ಕಿಂಡಿ ಬಿಡುವ ಅಗತ್ಯವೇನು? ಪಶ್ಚಿಮ ದಿಕ್ಕಿಗೇ ಭವ್ಯ ಬಾಗಿಲನ್ನ ಬಿಡಬಹುದಿತ್ತಲ್ಲ, ಥೂತ್ತೇರಿ!!

* * *

ಕನಕನಿಗೆ ಕೃಷ್ಣ ದರ್ಶನ ಕೊಟ್ಟ ಸಂದರ್ಭದ ತಲೆಮಾರಿನ ತಲೆಮಾರನ್ನ ಮಾತನಾಡಿಸಿ ಸತ್ಯವನ್ನು ಶೋಧಿಸಿದ್ದಾದರೆ ದೊರಕುವ ಸಂಗತಿ ಅದಮಾರಿನ ಅಭಿಪ್ರಾಯಕ್ಕೆ ಹತ್ತಿರವಾಗಿದೆಯಲ್ಲಾ. ಉತ್ತರ ಕರ್ನಾಟಕದಿಂದ ನಡೆದುಕೊಂಡು ತನ್ನ ಪರಿವಾರದೊಡನೆ ಬಂದ ಕನಕನಿಗೆ ಮೇಲುಕೋಟೆಯಲ್ಲಿ ಅಸ್ಪೃಶ್ಯತೆಗೆ ಆಸ್ಪದವಿಲ್ಲದೆ ಆತಿಥ್ಯ ದೊರಕಿತು. ಅದು ರಾಮಾನುಜಾಚಾರ್ಯರು ರೂಪಿಸಿದ್ದ ನಡವಳಿಕೆಯಾಗಿತ್ತು. ಆದರೆ ಉಡುಪಿಯಲ್ಲಿ ಬಾಗಿಲ ಹೊರಗೆ ಕನಕನನ್ನು ನಿಲ್ಲಿಸಿ ಹಿಂಸಿಸಿದರು. ಸುದ್ದಿ ಸುತ್ತಲ ಜಗತ್ತಿಗೆ ತಿಳಿಯಿತು. ಜನ ಜಮಾಯಿಸಿದರು. ಮಠ ಉಳಿಸಿಕೊಳ್ಳಲು ಸಂಚು ರೂಪಿಸಿದ ಮಾಧ್ವರು, "ನೀನು ಕೃಷ್ಣನನ್ನು ನೋಡಬೇಕು ತಾನೆ? ಹಾಗಾದರೆ ಹಿಂಭಾಗಕ್ಕೆ ಬಾ" ಎಂದು ಕರೆದು ಕೃಷ್ಣ ವಿಗ್ರಹ ತಿರುಗಿಸಿ ಕಿಂಡಿ ಕೊರೆದು "ನೋಡು" ಎಂದರು. ಕನಕ ನೋಡಿದ. ಧನ್ಯತಾಭಾವದಲ್ಲಿ ಹಾಡತೊಡಗಿದ. ಜನಸ್ತೋಮ ದುಡ್ಡು, ಒಡವೆಗಳನ್ನು ಕಿಂಡಿಗೆ ಎಸೆಯತೊಡಗಿದರು. ಪ್ರತಿದಿನ ಸಂಗ್ರಹವಾಗುವ ಧನಕನಕದಿಂದ ಸಂಭ್ರಮಗೊಂಡ ಮಾಧ್ವರು ಕಿಂಡಿಯನ್ನು ಹಾಗೇ ಬಿಟ್ಟು "ಕೃಷ್ಣನೇ ತಿರುಗಿ ಗೋಡೆ ಹೊಡೆದು ಕನಕನಿಗೆ ದರ್ಶನ ಕೊಟ್ಟ" ಎಂಬ ಪವಾಡ ಹಬ್ಬಿಸಿದರು. ನಾಡಿನ ಮೂಲೆಮೂಲೆಯಿಂದ ಬಂದ ಭಕ್ತರು ಉಡುಪಿ ಮಠವನ್ನು ಶ್ರೀಮಂತಗೊಳಿಸಿದರು. ಈ 21ನೇ ಶತಮಾನದಲ್ಲಿ ಹಾದುಹೋಗಲು ಗಣೇಶನಿಗೆ ಹಾಲು ಕುಡಿಸಿ ಜನಸ್ತೋಮವನ್ನು ಕುರಿಗಳನ್ನಾಗಿ ಮಾಡಿದ ಪುರೋಹಿತಶಾಹಿಗಳು, ಕನಕನ ಕಾಲದಲ್ಲಿ ಮಾಡಿದ ಸುಳ್ಳು ಪವಾಡವನ್ನು ಜನಗಳು ಇವತ್ತಿಗೂ ನಂಬಲ್ಲವೆ. ಅದರ ಅದಮಾರು ಸತ್ಯಸಂಗತಿ ಮುಚ್ಚಿ ಮತ್ತೊಂದು ಸುಳ್ಳು ಹೆಣೆಯುತ್ತಿರುವುದು ಮಾತ್ರ ಅಧಮರು ಮಾಡುವ ಕೆಲಸವಾಗಿದೆಯಂತಲ್ಲಾ, ಥೂತ್ತೇರಿ!! ■



ಕೃಪೆ: ಸತೀಶ್ ಆಚಾರ್ಯ

ದರ್ಶನ್ V/s ಸುದೀಪ್



ದೋಸ್ತಿ ಖತಂ ದುಶ್ಮನಿ ಶುರು

1981ರಲ್ಲಿ ಗಲ್ಲಾಪೆಟ್ಟಿಗೆ ಚಿಂದಿಯೆಬ್ಬಿಸಿದ್ದ 'ಅಂತ'ದ ಕತೆಯನ್ನು ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಮೊದಲು ಮುಂದಿಟ್ಟಿದ್ದು ವಿಷ್ಣು ಮುಂದೆ. ಕತೆ ಕೇಳಿದ ವಿಷ್ಣು 'ಇಂಥಾ ರಫ್ ಅಂಡ್ ಟಫ್ ಪಾತ್ರಕ್ಕೆ ನನಗಿಂತಲೂ ನನ್ನ ಗೆಳೆಯ ಅಮರ್‌ನಾಥ್‌ನೇ ಹೆಚ್ಚು ಸೂಟ್ ಆಗ್ತಾನೆ. ನೋಡು, ಅವನೇ ಇದಕ್ಕೆ ಲಾಯಕ್ಕು' ಎಂದು ಇವತ್ತಿನ 'ಅಂಬರೀಶ್' ಎಂಬ ದೈತ್ಯನ ಸೃಷ್ಟಿಗೆ ಕಾರಣವಾಗಿದ್ದು ಇತಿಹಾಸ!

ಇದನ್ನು ಸ್ವತಃ ರಾಜೇಂದ್ರಸಿಂಗ್ ಬಾಬು ಬಾಯಿಬಿಟ್ಟಾಗ ಅದನ್ನು ವಿಷ್ಣು ದರ್ಪದಿಂದ ಕೊಚ್ಚಿಕೊಳ್ಳಲಿಲ್ಲ, ಅಂಬರೀಶ್ ಕೂಡ ಧಿಕ್ಕರಿಸಲಿಲ್ಲ. ಹಾಗೆಯೇ 1984ರಲ್ಲಿ ಬಿರುಗಾಳಿಯೆಬ್ಬಿಸಿದ 'ಬಂಧನ'ದ ಕತೆಯನ್ನು ಅದೇ ಸಿಂಗ್‌ಬಾಬು ಅಂಬರೀಶ್‌ಗೆಂದು ಹೆಣೆದಿದ್ದೆಂಬುದೂ ಗುಟ್ಟೇನಲ್ಲ, ಆದರೆ ಕತೆ ಕೇಳಿದ ಅಂಬಿ 'ಇಂಥಾ ಸಾಫ್ಟ್ ಡಾಕ್ಟರ್ ಪಾತ್ರಕ್ಕೆ ನನಗಿಂತಲೂ ವಿಷ್ಣುವೇ ಹೆಚ್ಚು ಹೊಂದುತ್ತಾರೆ' ಎಂದು ವಿಷ್ಣುಗಾಗಿ ಬಯಸಿ ಬಂದ ಪಾತ್ರ ಬಿಟ್ಟುಕೊಟ್ಟು ಅದನ್ನು ಯಾವತ್ತೂ ದರ್ಪದಿಂದ ಬಡಾಯಿ ಮಾಡಲಿಲ್ಲ, ಅದು ಅವರ ದೊಡ್ಡತನ ಮತ್ತು ಸೌಹಾರ್ದ ಮನಸ್ಥಿತಿ ಕೂಡ.

ಈಗವರ ಜೂನಿಯರ್‌ಗಳ ಕಚ್ಚಾಟ ತಾರಕಕ್ಕೇರಿದೆ. ಅಂದರೆ ತಾನೇ ವಿಷ್ಣುವರ್ಧನ್ ಉತ್ತರಾಧಿಕಾರಿಯೆಂದು ಹೇಳಿಕೊಳ್ಳುವ ಸುದೀಪ್ ಮತ್ತು ಅಂಬರೀಷ್ ನಂತರ ನಾನೊಬ್ಬನೇ ಮಂಡ್ಯದ ಗಂಡೆಂದು ಪೋಜು ಕೊಡುವ ದರ್ಶನ್‌ರ ಟ್ವಿಟ್ಟೂ ಲಟ್ಟೂ ಜಗಳ. ನ್ಯೂಸ್ ಚಾನಲ್ಲುಗಳಿಗಂತೂ ಮಾರಿ ಹಬ್ಬ!

ಸುದೀಪ್‌ನ 'ಹೆಬ್ಬುಲಿ' ಸೂಪರ್ ಡೂಪರ್ ಹಿಟ್ಟಾಗಿ ಗಲ್ಲಾಪೆಟ್ಟಿಗೆ ಚಿಂದಿಯೆಬ್ಬಿಸುತ್ತಿದ್ದಾಗಲೇ ದರ್ಶನ್ ಟ್ವೀಟು ಹೊರಬಿದ್ದಿದೆ. ಅದು ಹೆಬ್ಬುಲಿಯ ಆರ್ಭಟಕ್ಕೆ ದರ್ಶನ್ ಹಾಕಿದ ಪೆಟ್ರೋ, ಸುದೀಪ್ ಅಬ್ಬರ ಕಂಡು ದರ್ಶನ್ ಹೊಟ್ಟೆಕಿಚ್ಚೋ ಅಥವಾ ಶಿವಣ್ಣನ ಜೊತೆ ಸುದೀಪ್ ನಟಿಸಹೊರಟ ಪ್ರೇಮ್‌ನ 'ವಿಲನ್' ಚಿತ್ರದ ಪರಿಣಾಮವೋ ಗೊತ್ತಾಗುತ್ತಿಲ್ಲ, ಬಹುಶಃ ದರ್ಶನ್ ಸುತ್ತ ಅಷ್ಟಮ ಶನಿಗಳಂತೆ ಸುತ್ತುವ ಚೇಲಾಗಳು ಮಾಡಿದ ಕಿತಾಪತಿಯ ಘಟಸ್ಫೋಟವೂ ಈ ರೂಪದಲ್ಲಿ ವ್ಯಕ್ತವಾಯಿತೆ?

ಏನಿದು ಯೂಟರ್ನ್?

ಇಲ್ಲದಿದ್ದರೆ ಈಗ ಏಕಾಏಕಿ ದರ್ಶನ್ ಟ್ವೀಟ್ ಮಾಡಲು ಕಾರಣವೇ ಇರಲಿಲ್ಲ, ನಾಲ್ಕು ವರ್ಷದ ಹಿಂದೆ ಯಾವುದೋ ಟೀವಿಯೊಂದರ ಸಂದರ್ಶನದಲ್ಲಿ ಸುದೀಪ್ ಹೇಳಿದ ಮಾತೆತ್ತಿ ಅದನ್ನೇ ಮಹಾಪರಾಧವೆಂಬಂತೆ ಈಗ ದರ್ಶನ್ 'ಟೂ' ಬಿಡ್ತೀನಿ ಎಂದು ಬಾಲಿಶವಾಗಿ ಕ್ಯಾತೆ ತೆಗೆಯುತ್ತಾನೆಂದರೆ ಕಾರಣ ಬೇರೆಯದೇ ಇರಬೇಕು. ಅಷ್ಟು ಕ್ಷುಲ್ಲಕ ವಿಷಯಕ್ಕೆ ಸುದೀಪ್‌ನಂಥ ಚತುರ್ಭಾಷಾ ಸ್ಟಾರ್‌ನ ಸಂಬಂಧ ಹರಿಕೊಳ್ಳುವಷ್ಟು ದಡ್ಡತನವಂತೂ ದರ್ಶನ್‌ಗಿರಲು ಸಾಧ್ಯವಿಲ್ಲ. ಹಾಗೆಯೇ ದರ್ಶನ್‌ನಂಥ ದೈತ್ಯನ ಜೊತೆಗಿನ ನಂಟನ್ನು ಇಷ್ಟೊಂದು ಚಿಲ್ಲರೆ ವಿಷಯಕ್ಕೆ ಕಳೆದುಕೊಳ್ಳುವಂಥ ಮುಗ್ಧನೂ ಸುದೀಪ್ ಅಲ್ಲ, ಹಕೀಕತ್ತು ಬೇರೆಯದೇ ಇದೆ ಮತ್ತು ಅದೀಗ ಪಿಳ್ಳೆ ನೆಪವೊಂದರ ಮೂಲಕ ಸ್ಫೋಟಿಸಿದೆ- ಗಾಂಧಿನಗರದ ಮಂದಿಗಿದು ಬಿಟ್ಟಿ ಮನರಂಜನೆಯಾದರೆ ಬರಗೆಟ್ಟ ನ್ಯೂಸ್ ಚಾನಲ್ಲುಗಳಿಗೆ ಟಿಆರ್‌ಪಿ ರಸಗವಳವಲ್ಲದೆ ಸತ್ಯ ಕಟ್ಟಿಕೊಂಡು ಯಾರಿಗೇನಾಗಬೇಕಾಗಿದೆ?

ಮೊನ್ನೆ ನಭೂತೋ ನಭವಿಷ್ಯತಿ ಎಂಬಂತೆ ರಾಜ್ಯದ ನಾನೂರಕ್ಕೂ ಅಧಿಕ ಥೇಟರುಗಳಲ್ಲಿ 'ಹೆಬ್ಬುಲಿ' ತೆರೆಕಂಡಾಗ ಇಡೀ ಗಾಂಧಿನಗರವೇ ಸುದೀಪ್ ಅಬ್ಬರಕ್ಕೆ ಬೆಕ್ಕಸ ಬೆರಗಾಯಿತು. ಅದು ಕನ್ನಡ ಚಿತ್ರರಂಗದ ಮಟ್ಟಿಗೆ ದಾಖಲೆಯೇ. ತೆರೆಕಂಡು ಮೂರೇ ದಿನಕ್ಕೆ ಹೆಬ್ಬುಲಿ 25 ಕೋಟಿ ಬಾಚಿತ್ತು. ಇದೂ ಕೂಡ ಮತ್ತೊಂದು ಮೈಲುಗಲ್ಲಾಗಿತ್ತು, ಮೊದಲನೇ ವಾರದ ಹೊತ್ತಿಗೆ ಹೆಬ್ಬುಲಿ 30 ಕೋಟಿ ಗಳಿಸಿದ ಮತ್ತೊಂದು ದಾಖಲೆ ಬರೆದದ್ದೂ ಸುದ್ದಿಯಾಯಿತು. ಹೀಗಿರುವಾಗಲೇ ಅನಿರೀಕ್ಷಿತ ಅಚ್ಚರಿಯೆಂಬಂತೆ ದರ್ಶನ್‌ನ ಟ್ವೀಟ್ ಹೊರಬಿತ್ತು, 'ನನಗೆ ಮೆಜೆಸ್ಟಿಕ್ ಚಿತ್ರದಲ್ಲಿ ಚಾನ್ಸ್ ಕೊಡಿಸಿದ್ದು ಸುದೀಪ್ ಅಲ್ಲ, ಅದಕ್ಕೆ ಕಾರಣರಾದವರು ನಿರ್ಮಾಪಕ ರಾಮಮೂರ್ತಿ, ನಿರ್ದೇಶಕ ಪಿ.ಎನ್. ಸತ್ಯ ಮತ್ತು ರಮೇಶ್. ಇನ್ನು ಮುಂದೆ ನಾನು ಮತ್ತು ಸುದೀಪ್ ಏನಿದ್ದರೂ ಕನ್ನಡ ಚಿತ್ರರಂಗದ ಸ್ಟಾರ್‌ಗಳಷ್ಟೇ; ಸ್ನೇಹಿತರಲ್ಲ...!'

ಇದು ಮಾರ್ಚ್ ಐದರ ಭಾನುವಾರದಂದು ದರ್ಶನ್ ಮಾಡಿದ ಟ್ವೀಟ್. ಮರುದಿನದ ಹೊತ್ತಿಗಿದು ಕನ್ನಡದ ಬಹುತೇಕ ನ್ಯೂಸ್ ಚಾನಲ್ಲುಗಳಲ್ಲಿ ಬ್ರೇಕಿಂಗ್ ನ್ಯೂಸ್ ಎಂಬಂತೆ ಘಟಸ್ಫೋಟವಾಗಿತ್ತು, ದರ್ಶನ್ ಮತ್ತು ಸುದೀಪ್ ಯಾರೊಬ್ಬರ ಪ್ರತಿಕ್ರಿಯೆ ಹೇಳಿಕೆಗೂ ಕಾಯುವಷ್ಟು ತಾಳ್ಮೆ ಚಾನಲ್ಲುಗಳಿಗಿರಲಿಲ್ಲ, ಮೆಜೆಸ್ಟಿಕ್ ಚಿತ್ರದ ನಿರ್ಮಾಪಕ ತಾನೇ ಎಂದುಕೊಂಡು ರಾಮಮೂರ್ತಿ ತನ್ನದೇ ಧಾಟಿಯಲ್ಲಿ ದರ್ಶನ್ ಪರ ನಿಂತರೆ ತಾನು ಅಧಿಕೃತ ನಿರ್ಮಾಪಕನೆಂದು ಬಾಮಾ ಹರೀಶ್ ಅದಕ್ಕೆ ತದ್ವಿರುದ್ಧ ಮಾತಿಗಿಳಿದಿದ್ದ. 'ಇಲ್ಲಾ... ನಾವು 2002ರಲ್ಲಿ ಮೆಜೆಸ್ಟಿಕ್ ಚಿತ್ರದ ಕತೆ ಮಾಡಿದಾಗ ಸುದೀಪ್‌ಗಂತಲೇ ಮಾಡಿದ್ದು. ಸುದೀಪ್ ಬಳಿ ಈ ಬಗ್ಗೆ ಪ್ರಸ್ತಾಪ ಮಾಡಿದಾಗ ಈ ಕತೆಗೆ ನಾನು ಸೂಟ್ ಆಗಲ್ಲ, ಹೇಗೂ ತೂಗುದೀಪ ಶ್ರೀನಿವಾಸ್‌ರ ಮಗನಿದ್ದಾನಲ್ಲ ಆತನಿಗಿದು ಸೂಟ್ ಆಗುತ್ತೇ ನೋಡಿ...' ಎಂದು ಸುದೀಪ್‌ರೇ ಹೇಳಿದ ಮೇಲೆ ನಾವು ದರ್ಶನ್‌ನ ಹಾಕ್ಕೊಂಡಿದ್ದು.

ಮೆಜೆಸ್ಟಿಕ್!

ಇದು ಬಾಮಾ ಹರೀಶ್ ಮೊನ್ನೆ ಸುದೀಪ್-ದರ್ಶನ್ ಟ್ವಿಟ್ಟರ್ ಕಚ್ಚಾಟದ ಕುರಿತಂತೆ ಟೀವಿಗಳಿಗೆ ನೀಡಿದ ಸ್ಪಷ್ಟನೆ. ಅಷ್ಟಕ್ಕೂ ಸುದೀಪ್ ಈ ಮಾತನ್ನು ಹೇಳಿದ್ದು ನಿನ್ನೆಮೊನ್ನೆಯೇನಲ್ಲ, ನಾಲ್ಕು ವರ್ಷಗಳ ಹಿಂದೆ. ಟಿವಿ ನೈನ್‌ನ ವಿಶೇಷ ಸಂದರ್ಶನವೊಂದರಲ್ಲಿ ಶಿವಪ್ರಸಾದ್ ಎಂಬ ನಿರೂಪಕನ ಮುಂದೆ ಕೂತು ಸುದೀಪ್ ತನ್ನ ಬಗ್ಗೆ ದರ್ಶನ್ ಮಾಡಿದ ಪ್ರಶಂಸೆಯ ವೀಡಿಯೋ ನೋಡಿದ್ದೇ ದರ್ಶನ್‌ನ ಹೊಗಳಿಕೆ ಶುರುವಿಡುತ್ತಾರೆ. ದರ್ಶನ್ ತನಗಿಂತಲೂ ಜನಪ್ರಿಯ ಪ್ರತಿಭಾವಂತ, ತುಂಬಾ ಕಷ್ಟಪಟ್ಟು ಈ ಮಟ್ಟಕ್ಕೇರಿದ ದಿಟ್ಟ ಎಂದೆಲ್ಲಾ ಕೊಂಡಾಡುತ್ತಾನೆ. ದರ್ಶನ್‌ಗಿರುವಷ್ಟು ಅಭಿಮಾನಿಗಳು ತನಗಿಲ್ಲ ಎಂಬುದನ್ನು ಅಷ್ಟೇ ನಿರ್ಲಿಪ್ತನಾಗಿ ಹೇಳಿಕೊಳ್ಳುತ್ತಾನೆ. ತೂಗುದೀಪ್ ಶ್ರೀನಿವಾಸ್‌ರಂಥ ಹೆಸರಾಂತ ನಟನೊಬ್ಬನ ಮಗನಾಗಿ ದರ್ಶನ್ ಚಿತ್ರೀಕರಣದಲ್ಲಿ ಕ್ಲಾಪ್ ಬಾಯ್ ಆಗಿದ್ದು ಆ ಮೂಲಕವೇ ತನ್ನ ಗಮನ ಸೆಳೆದದ್ದು ಎಲ್ಲವನ್ನೂ ನೆನಪಿಸಿಕೊಂಡ ಸುದೀಪ್ ಗಾಂಧಿನಗರದ ಐರನಿಯನ್ನೂ ವಿಷಾದದಿಂದ ವಿವರಿಸಿದ್ದಾರೆ. ಹಾಗೇ ಮಾತು ಮುಗಿಸುವ ಮುನ್ನ ಏನೋ ನೆನಪಾದಂತೆ infact ಮೆಜೆಸ್ಟಿಕ್ ಚಿತ್ರದ ಅವಕಾಶ ನನಗೆ ಬಂದಿತ್ತು, ಕತೆ ಕೇಳಿದ ಮೇಲೆ ನಿರ್ಮಾಪಕ ಬಾಮಾ ಹರೀಶ್‌ಗೆ ಇದು ನನಗೆ ಹೊಂದದ ಕತೆ, ಬೇಕಿದ್ದರೆ ತೂಗುದೀಪ್ ಮಗನನ್ನು ಒಂದು ಮಾತು ಕೇಳಿ ನೋಡಿ, ಅವನಿಗಿದು ಚೆನ್ನಾಗಿ ಒಪ್ಪುತ್ತೆ ಅಂತಾನೂ ಹೇಳಿದ್ದೆ ಎನ್ನುತ್ತಾರೆ.

ಇದು ನಾಲ್ಕು ವರ್ಷದ ಹಿಂದೆ ಟಿವಿ ನೈನ್‌ನಲ್ಲಿ ಸುದೀಪ್ ಹೇಳಿದ ಮಾತು. ಎಲ್ಲೂ 'ನಾನೇ ಚಾನ್ಸ್ ಕೊಡಿಸಿದ್ದು' ಎಂಬ ಮಾತು ಸುದೀಪ್ ಬಾಯಿಂದ ಬಂದಿಲ್ಲ, ಹೀಗನ್ನುವಾಗಲೇ ದರ್ಶನ್ ತನಗಿಂತಲೂ ಪ್ರತಿಭಾವಂತ, ಜನಪ್ರಿಯ, ಶ್ರಮಜೀವಿ ಎಂದು ಸುದೀಪ್ ಹೇಳಿದ್ದು ಕೂಡ ದರ್ಶನ್‌ಗೆ ಮುಖ್ಯವಾಗುವುದಿಲ್ಲ, ದೊಡ್ಡತನವೆನಿಸುವುದಿಲ್ಲ, ನಾಲ್ಕು ವರ್ಷದಿಂದ ಸುಮ್ಮನಿದ್ದು






ದರ್ಶನ್ ಬಾವಿಕಪ್ಪೆಯಾದ ದುರಂತ...!

ಇಲ್ಲಿಗೆ ಆರು ತಿಂಗಳ ಹಿಂದೆ ರಿಯೀ ಕನ್ನಡ ವಾಹಿನಿಯವರು ಸಿನಿಮಾ ಸಂಬಂಧಿ ವಿಶೇಷ ಷೋ ಒಂದರಲ್ಲಿ ತನ್ನನ್ನು 'ನಂಬರ್ ಒನ್ ಎಂಟರ್‌ಟೈನರ್' ಪಟ್ಟಕ್ಕೇರಿಸಿದಾಗಲೂ ಸುದೀಪ್ ತನ್ನ ಔದಾರ್ಯವನ್ನು ಬಿಡಲಿಲ್ಲ, ಕನ್ನಡದಲ್ಲಿ ನಂಬರ್ ಒನ್‌ಗಳೆಂದರೆ ಅದು ದರ್ಶನ್ ಮತ್ತು ಪುನೀತ್ ಮಾತ್ರ. ಅವರಿಬ್ಬರ ಮುಂದೆ ನಾನು ಚಿಕ್ಕವನು ಎಂದಿದ್ದ, ಯಾವತ್ತಿಗೂ ನಾನೇ ದೊಡ್ಡವನು ಎಂದಾಗಲಿ ನಾನೇ ನಂಬರ್ ಒನ್ ಎಂದಾಗಲಿ ಸುದೀಪ್ ದುಬಾಲು ಮಾಡಲಿಲ್ಲ, ತನಗೆ ಅವಕಾಶ ಸಿಕ್ಕಾಗಲೆಲ್ಲ ನನ್ನ ಗೆಳೆಯ ದರ್ಶನ್‌ನೇ ಸದ್ಯ ಕನ್ನಡದ 'ಬಾಕ್ಸಾಫೀಸ್ ಬಾದಶಾಹ' ಎಂದೂ ದರ್ಶನ್‌ಗಿರುವ ಅಭಿಮಾನಿಗಳು ತನಗಿಲ್ಲ ಎಂದೂ ಹೇಳುತ್ತಲೇ ಬಂದಿದ್ದ. ಅದು ಸುದೀಪ್‌ನ ಸಜ್ಜನಿಕೆ ಮತ್ತು ಬೆಳೆದುಬಂದ ವಾತಾವರಣದ ಪ್ರತೀಕದಂತಿತ್ತು,

ಆದರೆ ದರ್ಶನ್ ತನ್ನ ದರ್ಪ ದುರಹಂಕಾರದ ಮುಂಗೋಪದಿಂದಾಗಿ ಯಡವಟ್ಟಿನ ಮೇಲೆ ಯಡವಟ್ಟು ಮಾಡಿಕೊಳ್ಳುತ್ತಲೇ ಬಂದ. ಹೆಂಡತಿಯ ವಿಷಯದಲ್ಲಿ ಜೈಲು ಕಂಡ ನಂತರವೂ ಮತ್ತೆ ಪತ್ನಿಯನ್ನು ಮನೆಯಿಂದ ಹೊರದಬ್ಬಿದ. ಬನಶಂಕರಿಯ ಪ್ರೆಸ್ಟೀಜ್ ಅಪಾರ್ಟ್‌ಮೆಂಟಿನಲ್ಲಿ ಮಗನ ಪಾಲನೆ ಮಾಡಿಕೊಂಡೇ ತನ್ನ ಪಾಡಿಗಿದ್ದ ಪತ್ನಿ ವಿಜಯಲಕ್ಷ್ಮಿಗೆ ಇನ್ಯಾರೋ ಪರಪುರುಷನ ಜೊತೆ 'ಅಫೇರ್' ಇದೆ ಎಂದು ಭಾವಿಸಿ ಅಪಾರ್ಟ್‌ಮೆಂಟಿಗೇ ನುಗ್ಗಿ ಆಕೆ ಬಳಸುತ್ತಿದ್ದ ಕಾರನ್ನು ಚಿಂದಿಯೆಬ್ಬಿಸಿದ. ತಡೆಯಲು ಬಂದ ವಾಚ್‌ಮನ್‌ನನ್ನೇ ಹಿಡಿದು ಬಡಿದ. ತನ್ನ ವಿರುದ್ಧ ಮತ್ತೆ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುವಂತೆ ಮಾಡಿಕೊಂಡ.

ಇದು ದರ್ಶನ್‌ನ ಖಾಸಗಿ ಬದುಕಿನ ಅವನತಿಯ ಪ್ರತಿಫಲ. ತಾನೊಂದು ಮನೆ ಪತ್ನಿ ಮತ್ತೊಂದು ಮನೆ. ಪತಿಪತ್ನಿ ಕಲಹದಲ್ಲಿ ಬಡವಾದ ಕೂಸು. ಮಾಡಿಟ್ಟ ಆಸ್ತಿ ಕುರಿತ ಜಂಜಾಟಗಳು. ಇದರ ಫಲವೆಂಬಂತೆ ಹೊತ್ತಲ್ಲದ ಹೊತ್ತಲ್ಲಿ ಕುಡಿತ. ಶೂಟಿಂಗ್‌ಗೆ ನಿಯಮಿತವಾಗಿ ಹೋಗಲಾಗದ ಪಜೀತಿ ಬೇರೆ. ಯಾವುದರಲ್ಲೂ ಶಿಸ್ತಿಲ್ಲ, ತಿಳಿ ಹೇಳಲು ಪತ್ನಿಯಿಲ್ಲ, ಹಿರಿಯರ ಅಂಕೆಯಂತೂ ಮೊದಲೇ ಇಲ್ಲ, ಇನ್ನು ಆಪ್ತರು ಪರಮಾಪ್ತರೆಂದು ದರ್ಶನ್ ಸುತ್ತಮುತ್ತ ಠಳಾಯಿಸಿಕೊಂಡಿರುವವರಾದರೂ ಎಂಥವರು? ಕಾಮಿಡಿ ಷೋಗೇ ತಲೆ ನಿಲ್ಲದ ಸೃಜನ್ ಲೋಕೇಶ್, ಯಾವುದೋ ಕಾಲಕ್ಕೆ ಹೀರೋ ಆಗಿದ್ದನೆಂದು ಕನಸು ಕಂಡೇ ಹುಚ್ಚನಂತಾದ ಸೌರವ್, ತಲೆತಿರುಕ ಮ್ಯಾನೇಜರ್ ಮಲ್ಲಿ, ಹುಸಿದು ಕೂತ ಹದ್ದುಗಳಂತೆ ಸುತ್ತುವರಿದ ಸೌಂದರ್ಯ ಜಗದೀಶ್ ಮತ್ತು ನಾಗಕಿರಣ್. ಇಂಥ ಎಡವಟ್ಟರನ್ನು ಕಟ್ಟಿಕೊಂಡು ತನ್ನ ತೋಟದಲ್ಲಿ ಬಿರಿಯಾನಿ ಬೇಯಿಸುವುದು, ವಿಸ್ಕಿ ಏರಿಸುವುದು, ಕುದುರೆ ಶೋಕಿ ಇತ್ಯಾದಿಯಲ್ಲೇ ಕಾಲ ಕಳೆಯುವ ದರ್ಶನ್ ಬರುಬರುತ್ತ ಬಾವಿಕಪ್ಪೆಯಾದ. ಹೊರಜಗತ್ತಿನಲ್ಲೇನಾಗುತ್ತಿದೆಯೆಂದು ಈ ಚೇಲಾಗಳು ಹೇಳಿದ್ದನ್ನೇ ನಂಬಿಬಿಟ್ಟ. ತನ್ನ ಅಭಿಮಾನಿಗಳು ಸುದೀಪ್ ಸಿನಿಮಾ ನೋಡುವ ಕಾರಣಕ್ಕೆ ಒಂದರ ಮೇಲೊಂದಾಗಿ ಸುದೀಪ್ ಚಿತ್ರಗಳು ಹಿಟ್ಟಾಗುತ್ತಿವೆಯೆಂದು ಭ್ರಮಿಸಿದ. ಅದೀಗ ಟ್ವಿಟ್ಟರ್ ರೂಪತಾಳಿ ದರ್ಶನ್‌ನನ್ನು ಮತ್ತಷ್ಟು ಒಂಟಿಯಾಗಿಸಿದೆ, ಇನ್ನಷ್ಟು ಆಳದ ಬಾವಿಗಿಳಿಸಿದೆ.




ಸುದೀಪ್‌ಗೆ ಸಾಟಿಯುಂಟೆ?

ಹೆಬ್ಬುಲಿ ತೆರೆಕಂಡು ಸುದೀಪ್ ಅಬ್ಬರ ವಿಜೃಂಭಿಸುವುದಕ್ಕೂ ಇತ್ತ ದರ್ಶನ್ ಟ್ವೀಟ್ ಮೂಲಕ ಕಾಲೆಳೆದದ್ದಕ್ಕೂ ಏನೋ ನಿಗೂಢ ಸಂಬಂಧವಿದೆಯೆ?

ಹೌದು ಅನ್ನುತ್ತದೆ ಗಾಂಧಿನಗರ. ಹೆಬ್ಬುಲಿ ಸುದೀಪ್‌ನ ಮಹತ್ವಾಕಾಂಕ್ಷೆಯ, ಹಿಂದಿನ ಎಲ್ಲ ಚಿತ್ರಗಳಿಗಿಂತಲೂ ಅದ್ದೂರಿಯ ಚಿತ್ರವೆಂಬ ಬಗ್ಗೆ ಯಾರಿಗೂ ತಕರಾರಿಲ್ಲ.







ಇದೇ ಹೊತ್ತಿಗೆ ಸರಿಯಾಗಿ ಆಂಧ್ರ ಸರ್ಕಾರ ಬೇರೆ ನಂದಿ ಪ್ರಶಸ್ತಿ ಘೋಷಿಸಿತು. ಕನ್ನಡದ ಮಟ್ಟಿಗೆ ದೇವರಾಜ್ ಬಿಟ್ಟರೆ ಪ್ರತಿಷ್ಠಿತ ನಂದಿ ಪ್ರಶಸ್ತಿಯನ್ನು ದಕ್ಕಿಸಿಕೊಂಡಿದ್ದು ಸುದೀಪ್ ಮಾತ್ರ. ರಾಜಮೌಳಿಯ 'ಈಗ' ಚಿತ್ರದ ಸ್ಯಾಡಿಸ್ಟ್ ಪಾತ್ರಕ್ಕೆ ಜೀವ ಕೊಟ್ಟಂತೆ ನಟಿಸಿದ ಸುದೀಪ್ ಗರಿಮೆಗೆ ನಂದಿ ಅವಾರ್ಡ್ ನಿಜಕ್ಕೂ ಮೆರುಗು ತಂದಿತ್ತು. ಇದಕ್ಕೂ ಮೊದಲೇ ರಾಕ್‌ಲೈನ್ ನಿರ್ಮಾಣದ ರಜನಿಕಾಂತ್‌ರ 'ಲಿಂಗಾ' ಚಿತ್ರಕ್ಕೊಂದು ವಿಶೇಷ ಪಾತ್ರವೊಂದಕ್ಕೆ ಖುದ್ದು ರಜನಿಯಿಂದಲೇ ಸುದೀಪ್‌ಗೆ ಆಹ್ವಾನ ಬಂದಿತ್ತು.

ಆದರೆ ಪಾತ್ರದ ವಿಷಯದಲ್ಲಿ ಸುದೀಪ್ ಎಂಥಾ ಚೂಸಿ ಮತ್ತು ಕಟ್ಟುನಿಟ್ಟು ಎಂಬಂತೆ 'ಲಿಂಗಾ'ದ ವಿಶಿಷ್ಟ ಪಾತ್ರವನ್ನೇ ತಿರಸ್ಕರಿಸಿಬಿಟ್ಟಿದ್ದ. ಇದು ಸುದೀಪ್ ಪ್ರತಿಷ್ಠೆಯನ್ನು ಮತ್ತಷ್ಟು ಹೆಚ್ಚಿಸಿತು. ಅತ್ತ ಹಿಂದಿ, ಇತ್ತ ತೆಲುಗು, ತಮಿಳು ಚಿತ್ರರಂಗಗಳಲ್ಲೂ ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಲೇ ಬಂದ ಸುದೀಪ್‌ಗೆ ದಕ್ಷಿಣ ಭಾರತದುದ್ದಕ್ಕೂ ವಿಶಿಷ್ಟ ಇಮೇಜಿದೆ. ಖ್ಯಾತಿಯಿದೆ, ಬೇಡಿಕೆಯಿದೆ. ಇದೆಲ್ಲಕ್ಕೂ ಮಿಗಿಲಾಗಿ ಬಿಗ್‌ಬಾಸ್‌ನ ಇಮೇಜ್ ಮತ್ತು ಜನಪ್ರಿಯತೆ ಸುದೀಪ್‌ಗೊಂದು ವಿನೂತನ ವ್ಯಕ್ತಿತ್ವವನ್ನೇ ಕಟ್ಟಿಕೊಟ್ಟಿದೆ.

ತಾನು ಕರ್ನಾಟಕದ ಪಟ್ಟಿಗೆ ಏನೇ ಸೂಪರ್‌ಸ್ಟಾರ್, ಬಾಕ್ಸ್‌ಆಫೀಸ್ ಭಾದ್‌ಶಾ ಎನಿಸಿಕೊಂಡರೂ ಸುದೀಪ್‌ನ ವ್ಯಕ್ತಿತ್ವ ಮತ್ತು ಇಮೇಜ್ ಕರ್ನಾಟಕದಿಂದಾಚೆಗೆ ದಿನೇದಿನೇ ವ್ಯಾಪಿಸುತ್ತಲೇ ಇದೆ. ಅಂಥಾದ್ದರಲ್ಲಿ ಹೆಬ್ಬುಲಿ ಅಬ್ಬರಿಸುತ್ತಿದ್ದರೆ ತನ್ನ ಗತಿಯೇನು? ಸಾಲದ್ದಕ್ಕೆ ಶಿವಣ್ಣನ ಜೊತೆ ರಾಜಿ ಮಾಡಿಕೊಂಡು ರಾಜ್‌ಕುಮಾರ್ ಕುಟುಂಬಕ್ಕೆ ಮತ್ತಷ್ಟು ಹತ್ತಿರವಾಗಿಬಿಟ್ಟರೆ ಸುದೀಪ್‌ನನ್ನು ಹಿಡಿಯುವವರುಂಟೆ? ಅಂಥಾದ್ದರಲ್ಲಿ ಕನಿಷ್ಠ ತನ್ನ ಅಭಿಮಾನಿಗಳಾದರೂ ಹೆಬ್ಬುಲಿಗೆ ನುಗ್ಗುವುದನ್ನು ತಡೆಯಬೇಕಲ್ಲ? ಅದಕ್ಕೊಂದು ಪಿಳ್ಳೇನೆಪವೂ ಬೇಕಲ್ಲ?

ಎಂದೋ ಆಡಿದ ಯಾವುದೋ ಮಾತು ನೆಪವಾಯಿತು. ಅದೇ ಟ್ವಿಟ್ಟರ್ ರಾದ್ಧಾಂತಕ್ಕೆ ಕಾರಣವಾಯಿತು. ಇದು ದರ್ಶನ್‌ನ ಪಜೀತಿ. ಆದರೆ ಸುದೀಪ್ ತನ್ನ ದೊಡ್ಡಗುಣ ಬಿಡಲಿಲ್ಲ. ಅದೇ ಕಾರಣಕ್ಕೆ ದರ್ಶನ್ ಚಡಪಡಿಕೆಯೂ ನಿಂತಿಲ್ಲ.

...ನಾವಿಕಿ ಅದ್ಯಾವತ್ತೋ ಆಡಿದ ಮಾತನ್ನೇ ನೆಪ ...ಂಡು ಅದೇ ಕಾರಣಕ್ಕೆ ತಾವಿನ್ನು ಗೆಳೆಯರಲ್ಲ ...ೕ ಎಂದು ಬಾಣಬಿಟ್ಟ ದರ್ಶನ್‌ನ ...ೕನೆಂಬುದೇ ನಿಗೂಢ ಮತ್ತು ವಿಚಿತ್ರ!

ವಿಷ್ಣು ಅಂಬಿ!

...ಕ್ಕೆ ಯಾವುದೇ ಕಾರಣವಿಲ್ಲ. ಇದೇ ಸಮಯ ...ೕಳಬೇಕಾದ ಸನ್ನಿವೇಶವೂ ಇರಲಿಲ್ಲ. ಆದರೆ ...ಲ್ಲಕ ಕಾರಣಕ್ಕೆ ದೋಸ್ತಿ ಮುರಿದುಕೊಳ್ಳುವಂಥ ...ಂತೂ ಇದಲ್ಲವೆಂಬುದು ಗಾಂಧಿನಗರದ ...ರಿಗೂ ಗೊತ್ತಿಲ್ಲದ್ದೇನಲ್ಲ. ಹಕೀಕತ್ತೇನೆಂದರೆ ಇಬ್ಬರ ...ಂಬಂಧ ಹಳಸಿದ್ದು ಈಗೇನಲ್ಲ. ಇಲ್ಲಿಗೆ ವರ್ಷದ ...ೕ ಸುದೀಪ್ ಮತ್ತು ದರ್ಶನ್ ಒಬ್ಬರ ...ಬ್ಬರು ನೋಡಲಾಗದಷ್ಟು ದೂರವಾಗಿದ್ದರು. ಅದಕ್ಕೆ ...ಗಿದ್ದು ಅಂಬರೀಶ್ ಮತ್ತು ಸುಮಲತಾ ...ದು ದರ್ಶನ್‌ನನ್ನು ಶಿವಣ್ಣನ ಮನೆಗೊಯ್ದು ... ಮರಮ್ಮತ್ತು. ರಾಜ್‌ಕುಮಾರ್ ಸ್ಮಾರಕದ ...ಣೆಗೆ ಸುದೀಪ್ ಮತ್ತು ದರ್ಶನ್ ಜೊತೆಯಾಗಿ ...ಪ್ರತ್ಯೇಕವಾಗಿ ಬಂದದ್ದು ಹಳಸಿದ ಸಂಬಂಧದ ...ಲಕ್ಷಣದಂತಿತ್ತು. ಇದನ್ನು ಸೂಕ್ಷ್ಮವಾಗಿ ಗ್ರಹಿಸಿದ ...ರ್ಶನ್‌ನನ್ನು ಶಿವಣ್ಣನ ಮನೆಗೊಯ್ದು ಹಳೆಯ ...ಕ್ಕೆ ತ್ಯಾಪೆ ಹಾಕಿದರೆಂಬ ಗಾಳಿ ಸುದ್ದಿಯೊಂದು ...ಲೋ ಹುಟ್ಟಿಕೊಂಡಿತ್ತು.

... ದರ್ಶನ್ ಪತ್ನಿ ವಿಜಯಲಕ್ಷ್ಮಿಯ ಕಾರಣಕ್ಕಾಗಿ ...ಡ ಮನಸ್ತಾಪ. ದರ್ಶನ್ ಹಿಂಸೆಗೆ ರೋಸತ್ತು ... ಸಮೇತ ನಾಪತ್ತೆಯಾದ ವಿಜಯಲಕ್ಷ್ಮಿ ...ದ್ದು ಶಿವಣ್ಣನ ಮನೆಯಲ್ಲಿ. ಈ ಬಗ್ಗೆ ಕೇಳಲು ...ರ್ಶನ್‌ಗೆ ಶಿವಣ್ಣ ಬುದ್ಧಿ ಹೇಳಿದ್ದೇ ತಪ್ಪಾಯಿತು. ... ನೀವು ನೆಟ್ಟಗಿದ್ದೀರಾ ಅಂತ ನೋಡಿಕೊಳ್ಳಿ....' ...ರ್ಶನ್ ಶಿವಣ್ಣನ ಮುಖಕ್ಕೆ ಹೊಡೆದಂತೆ ಹೇಳಿ ... ತನ್ನ ಪತ್ನಿ ಪೊಲೀಸ್ ಠಾಣೆಯ ಮೆಟ್ಟಿಲು ... ಶಿವಣ್ಣನ ಕುಮ್ಮಕ್ಕೇ ಕಾರಣವೆಂದು ಭ್ರಮಿಸಿದ್ದ ... ಸುದೀಪ್ ಆಪ್ತನೆನಿಸಿದ್ದು ಇದೇ ಕಾರಣಕ್ಕೆ. ... ಅದೇ ಹೊತ್ತಿಗೆ ಸುದೀಪ್ ಕೂಡ ರಾಜ್ ...ದ ವಿರುದ್ಧ ತೊಡೆ ತಟ್ಟಿದ್ದ. ಹುಬ್ಬಳ್ಳಿಯಲ್ಲಿ ...ಜ್ ಕಪ್' ಕ್ರಿಕೆಟ್ ಪಂದ್ಯಾವಳಿಯಲ್ಲಿ 'ನಮಗೂ ...ನಾನೇನು ಕೈಕಟ್ಟಿ ಕೂರುವಂತಹ ಹೇಡಿಗಳಲ್ಲ' ...ದಲ್ಲಿ ಶಿವಣ್ಣನನ್ನು ತಡವಿಕೊಂಡಿದ್ದ ಸುದೀಪ್‌ಗೆ ...ಜೊತೆಯಾಗುವುದು ಅನಿವಾರ್ಯವಾಗಿತ್ತು.

... ದೋಸ್ತಿ ಜೋರಾಗಿಯೇ ಮೆರೆದಿತ್ತು, ಅದಕ್ಕೆ ...ಪ್ ಮತ್ತು ಅಂಬರೀಶ್ ಜೋಡಿಯ ದೋಸ್ತಿಯ ...ತ್ತು, ಮಾರುಕಟ್ಟೆ ಗಿಮ್ಮಿಕ್ಕೋ ಸ್ಟಾರ್‌ವ್ಯಾಲ್ಯೂ ... ಸುದೀಪ್ ತನ್ನ ಮೇಲೆ ವಿಷ್ಣುವರ್ಧನ ಎಂಬ ...ಿಸಿಕೊಂಡರೆ ಇನ್ನು ತಾನೇನು ಕಮ್ಮಿ ಎಂಬಂತೆ ... 'ಅಂಬರೀಶ' ಹೆಸರಿನ ತನ್ನದೊಂದು ಚಿತ್ರಕ್ಕೆ ಜನ್ಮ ಕೊಟ್ಟ. ದರ್ಶನ್ ಅಭಿನವ ಅಂಬಿಯಾದರೆ ಸುದೀಪ್ ವಿಷ್ಣುವಿನ ಪುನರವತಾರ!

ಮೆಜೆಸ್ಟಿಕ್





ಇನ್ನು ಇಮೇಜ್ ಕೂಡ ಹಾಗೆಯೇ ಬಿಲ್ಡಪ್ ಮಾಡಿಕೊಳ್ಳಬೇಕಲ್ಲ. ಅದಕ್ಕೆ ಸುದೀಪ್ ಆಕ್ಷನ್ ಹೊರತಾದ ಕತೆಗೆ ಒತ್ತುಕೊಟ್ಟ ಸಾಫ್ಟ್ ಕ್ಯಾರೆಕ್ಟರ್‌ಗಳ ಮೊರೆ ಹೊಕ್ಕರೆ ದರ್ಶನ್ ಅಂಬಿಯನ್ನೇ ಆವಾಹಿಸಿಕೊಂಡಂತೆ ಮಚ್ಚು ಕೊಡಲಿ ಕೊಚ್ಚು ಟೈಪಿನ ಆ್ಯಕ್ಷನ್ ಪಾತ್ರಗಳನ್ನೇ ಆಯ್ದುಕೊಂಡ. ವಿಷ್ಣುವರ್ಧನ್ ಅಭಿಮಾನಿಗಳೆಲ್ಲ ತನ್ನನ್ನು ಬೆಂಬಲಿಸುತ್ತಾರೆಂದು ಸುದೀಪ್ ಲೆಕ್ಕ ಹಾಕಿದರೆ ಅಂಬಿ ಭಕ್ತರಿಗೆಲ್ಲ ತಾನೇ ಗತಿಯೆಂಬುದು ದರ್ಶನ್ ಭ್ರಮೆಯಾಗಿತ್ತು. ಆದರೆ ವಾಸ್ತವ ಹಾಗಿರುವುದಿಲ್ಲವಲ್ಲ-

ಈಗೋ ಪ್ರತಿಷ್ಠೆ

ಬರುಬರುತ್ತ ದರ್ಶನ್‌ನ ಒಂದೊಂದೇ ಚಿತ್ರಗಳು ತೋಪಾದವು. ಸಾರಥಿ ನಂತರ ಚಿಂಗಾರಿ, ಬುಲ್‌ಬುಲ್‌ಗಳು ಅಷ್ಟಿಷ್ಟು ಸದ್ದು ಮಾಡಿದರೆ ಆನಂತರದ ಐರಾವತ, ಅಂಬರೀಶ, ಜಗ್ಗುದಾದ ಇತ್ಯಾದಿಗಳು ಸುಸ್ತು ಬಿದ್ದವು. ಇದನ್ನು ಸೂಕ್ಷ್ಮವಾಗಿ ಗ್ರಹಿಸಿದ ಸುದೀಪ್ ತನ್ನ ವಿಷ್ಣು ಇಮೇಜ್‌ಗೆ ಹೊರತಾದ ದರ್ಶನ್‌ಗೆ ಮೀಸಲಿದ್ದ ಆ್ಯಕ್ಷನ್ ಪಾತ್ರಗಳಿಗೆ ಟ್ರ್ಯಾಕ್ ಬದಲಾಯಿಸಿಬಿಟ್ಟ. ಮರೆಯದ ಮಾಣಿಕ್ಯ ರನ್ನ, ಕೋಟಿಗೊಬ್ಬ ಒಂದರಮೇಲೊಂದರಂತೆ ಆ್ಯಕ್ಷನ್ ಧಾಟಿಯಲ್ಲಿ ತೆರೆಕಂಡವು. ಗಲ್ಲಾ ಪೆಟ್ಟಿಗೆಯಲ್ಲೂ ಜಯಭೇರಿ ಬಾರಿಸಿದವು. ಇದೆಲ್ಲಕ್ಕೂ ಮೊದಲೇ ಸುದೀಪ್‌ನ ಬಚ್ಚನ್ ತೆರೆಕಂಡ ವಾರಕ್ಕೇ ಹಾಕಿದ ಬಂಡವಾಳ ದುಡಿದಿತ್ತಲ್ಲ ಆಗ ದರ್ಶನ್ ಸದ್ದಿಲ್ಲದೇ ಬಾಣವೊಂದನ್ನು ಬಿಟ್ಟ. ತನ್ನ ಜೊತೆ 'ದೋಸ್ತಿ ಕಾ ಹಾತ್' ಮಿಲಾಯಿಸಿದ್ದರಿಂದಾಗಿಯೇ ತನ್ನ ಅಭಿಮಾನಿಗಳೆಲ್ಲ ಸುದೀಪ್ ಚಿತ್ರ ನೋಡುತ್ತಿದ್ದಾರೆಂದೂ ಆ ಕಾರಣಕ್ಕೇ ಬಚ್ಚನ್ ಹಿಟ್ಟಾಯಿತೆಂದು ದರ್ಶನ್ ಡೈಲಾಗ್ ಹೊಡೆದದ್ದು ಸುದೀಪ್ ಕಿವಿ ಮುಟ್ಟಲು ಎಷ್ಟು ಹೊತ್ತು?


ಅಲ್ಲಿಗೆ ದೋಸ್ತಿಯೂ ಒಂದು ಹಂತಕ್ಕೆ ಬಂದಾಗಿತ್ತು. ಈಗೋ ಇಬ್ಬರ ಪ್ರತಿಷ್ಠೆಯನ್ನೂ ದುಪ್ಪಟ್ಟಾಗಿಸಿತ್ತು. ಅದೇಹೊತ್ತಿಗೆ ಸರಿಯಾಗಿ ಶಿವಣ್ಣನ ಮಗಳ ಮದುವೆ ಬಂತು. ಸಹಜವಾಗೇ ಶಿವಣ್ಣ ಸುದೀಪ್ ಮನೆಗೇ ಬಂದು ಆಮಂತ್ರಣ ಕೊಟ್ಟರು. ಸುದೀಪ್‌ಗೂ ಅದೇ ಬೇಕಿತ್ತು. ಏಕೆಂದರೆ ದರ್ಶನ್‌ನ ಪ್ರತಿಷ್ಠೆ, ದರ್ಪ, ದುರಹಂಕಾರಗಳ್ಯಾವುದೂ ಸುಲಭಕ್ಕೆ ಜೀರ್ಣವಾಗುತ್ತಿರಲಿಲ್ಲ. ಸಹನೀಯವೂ ಆಗಿರಲಿಲ್ಲ. ಶಿವಣ್ಣನ ಮಗಳ ಮದುವೆಗೂ ದರ್ಶನ್ ಹೊರತಾಗಿ ಸುದೀಪ್ ಒಬ್ಬನೇ ಬಂದಿದ್ದ. ದರ್ಶನ್ ಕೂಡ ಒಬ್ಬಂಟಿಯಾಗಿ ಬಂದಿದ್ದ. 2015ರ ಡಿಸೆಂಬರ್ ಹೊತ್ತಿಗೆ ದರ್ಶನ್ ಮತ್ತು ಸುದೀಪ್ ಸಂಬಂಧ ಹಳಸಿತ್ತು.


ಅಷ್ಟೇ ಆಗಿದ್ದರೆ ಈ ವಿಷ್ಣು-ಅಂಬಿ ಅವತಾರಗಳು ಈ ಮಟ್ಟಕ್ಕೆ ಕೆಸರೆರಚಿಕೊಳ್ಳುತ್ತಿರಲಿಲ್ಲವೇನೊ. 2016ರ ಆಗಸ್ಟ್ ಹೊತ್ತಿಗೆ ಸುದೀಪ್ ಮತ್ತು ಶಿವಣ್ಣ ಮತ್ತಷ್ಟು ಹತ್ತಿರವಾದರು. ಟಿವಿ ಕಾರ್ಯಕ್ರಮವೊಂದರಲ್ಲಿ ಸುದೀಪ್ ವಿನಾಕಾರಣ ಶಿವಣ್ಣನನ್ನು ಹೊಗಳುವುದು, ಅವರ ಪತ್ನಿ ಮತ್ತು ತಮ್ಮ ಕುಟುಂಬ ಶಿವಮೊಗ್ಗದ ಮೂಲದವರೆಂದಿದ್ದು ಗೀತಕ್ಕ ಮಾಡುವ ಅಕ್ಕಿ ರೊಟ್ಟಿ ತನಗೆ ಬಲು ಪ್ರೀತಿಯೆಂದದ್ದು ಮನೆ ಹೊಕ್ಕಿ ಕೂತಿದ್ದ ದರ್ಶನ್ ಹೊಟ್ಟೆಯಲ್ಲಿ ಖಾರ ಕಿವುಚಿದಂತಾಗುತ್ತಿತ್ತು.

ಇದೆಲ್ಲಕ್ಕೂ ಕಿಚ್ಚಿಟ್ಟಂತೆ ನಡೆದದ್ದು 'ಟಗರು' ಮುಹೂರ್ತ. ಸುದೀಪ್ ಖುದ್ದು ಹೋಗಿ ಶಿವಣ್ಣನ ಚಿತ್ರಕ್ಕೆ ಕ್ಲಾಪ್ ಮಾಡಿದ್ದು, ಅಕ್ಕಪಕ್ಕ ನಿಂತು ಶಿವಣ್ಣ ಸುದೀಪ್ ಪೋಸು ಕೊಟ್ಟಿದ್ದು ದರ್ಶನ್ ಹತಾಶೆಯನ್ನು ಮತ್ತಷ್ಟು ಉಲ್ಬಣಿಸಿತು. ಇದರ ಬೆನ್ನಲ್ಲೇ ಪ್ರೇಮ್‌ನ 'ಕಲಿ' ಬೇರೆ ಘೋಷಣೆಯಾಯಿತಲ್ಲ; ಶಿವಣ್ಣ ಸುದೀಪ್ ಜೊತೆಯಾಗಿ ನಟಿಸುವುದೆಂದರೆ ಸಣ್ಣ ಮಾತೆ? ತದನಂತರ ಕಲಿಗೆ ಬದಲಾಗಿ 'ವಿಲನ್' ಎಂಬ ಹೊಸ ಹೆಸರಲ್ಲಿ ಸುದೀಪ್ ಮತ್ತು ಶಿವಣ್ಣ ಜೊತೆಜೊತೆಯಾಗಿ ನಟಿಸುತ್ತಾರೆಂಬ ಸುದ್ದಿ ದರ್ಶನ್ ಪಾಲಿಗೆ ಅರಗಿಸಿಕೊಳ್ಳದ ಸಂಗತಿಯಾಗಿತ್ತು. ದರ್ಶನ್‌ನ ಹತಾಶೆ, ಸಿಟ್ಟು, ಹೊಟ್ಟೆಕಿಚ್ಚು ಈಗ ಟ್ವಿಟ್ಟರ್‌ನ ರೂಪ ತಾಳಿದೆ.


ದರ್ಶನ್‌ನ ಹತಾಶೆಯ ಮುಂದೆ ಸುದೀಪ್‌ನ ತಾಳ್ಮೆ ಆತನ ದೊಡ್ಡಸ್ತಿಕೆಯ ಪ್ರತೀಕದಂತಿದೆ.

■ ರಾ. ಸೋಮನಾಥ್





ಕಥೆಗಳ ಕಥೆ-ವ್ಯಥೆ



ಒಂದಾನೊಂದು ಕಾಲದಲ್ಲಿ ಸಾವಿರಾರು ಕಥೆಗಳಿದ್ದವು. ದೊಡ್ಡವು, ಚಿಕ್ಕವು; ಹಳೆದು, ಹೊಸದು; ಹತ್ತಿರದವು, ದೂರದವು. ಹೀಗೆ ಎಲ್ಲಾ ತರದ ಕಥೆಗಳು ಇದ್ದವು. ಜೊತೆಯಲ್ಲಿ ಒಂದಾಗಿ ಇದ್ದವು. ಆದರೆ ಕಾಲಕಳೆದಂತೆ, ಕ್ರಮೇಣ ಅವುಗಳಲ್ಲಿ ಎರಡು ಗುಂಪುಗಳಾದವು. ಮೊದಲಿಗೆ ಪಕ (ಪಂಡಿತರ ಕಥೆಗಳು) ಹುಟ್ಟಿಕೊಂಡ. ಅವನ ಅಟ್ಟಹಾಸವನ್ನು ತಡೆಹಿಡಿಯಲು ನಂತರ ಜಕ (ಜನರ ಕಥೆಗಳು) ಹುಟ್ಟಿಕೊಂಡ. ಇವರಿಬ್ಬರು ಹುಟ್ಟಿಕೊಳ್ಳುತ್ತಿದ್ದ ಹಾಗೆ ಇವರ ನಡುವೆ ಜಗಳಗಳು ಶುರುವಾದವು. ಚಿಕ್ಕ ದೂರದ ಮತ್ತು ಹಳೆಯ ಕಥೆಗಳು ಇವರಿಬ್ಬರಿಗೆ ಹೆದರಿ ಕಣ್ಮರೆಯಾದವು. ಪಕ "ನಾನೇ ಶ್ರೇಷ್ಠ" ಎಂದು ಜಂಭ ಕೊಚ್ಚಿಕೊಂಡರೆ, ಜಕ "ನಿನಗಿಂತ ನಾನೇನು ಕಡಿಮೆ ಇಲ್ಲ" ಎಂದು ಸೆಡ್ಡು ಹೊಡೆಯುತ್ತಿದ್ದ. ಇವರಿಬ್ಬರ ಜಗಳ ಬಗೆಹರಿಯುವ ಲಕ್ಷಣಗಳು ಕಾಣಲೇ ಇಲ್ಲ. ಪರಿಸ್ಥಿತಿ ವಿಕೋಪಕ್ಕೆ ಹೋಗಿ ಇವರಿಬ್ಬರ ನಡುವೆ ಯುದ್ಧಗಳಾದವು. ಯುದ್ಧದಲ್ಲಿ ಅನೇಕ ಜಕ ಮತ್ತು ಪಕಗಳು ಕೊಲ್ಲಲ್ಪಟ್ಟವು. ರಕ್ತ-ಪಾತಗಳಾದವು.

ಇಷ್ಟೆಲ್ಲಾ ಆದಾಗ್ಯು ಇವರಿಬ್ಬರ ಜಗಳ ಪರಿಹಾರವಾಗಲೇ ಇಲ್ಲ. ಇವರಿಬ್ಬರು ಹೀಗೆ ಯುದ್ಧ ಮಾಡುತ್ತಾ ಇದ್ದರೆ ಮುಂದೆ ಜಗತ್ತಿನಲ್ಲಿ ಕಥೆಗಳೇ ಇರುವುದಿಲ್ಲವೆಂದು ಜನ ಅಂದುಕೊಂಡರು. ಇಬ್ಬರಲ್ಲಿ ಯಾರು ಶ್ರೇಷ್ಠರು ಎಂದು ಅವರು ನಿರ್ಧರಿಸಲಾಗದೆ ಕಂಗಾಲಾದರು. "ಜಗಳ, ಯುದ್ಧ ಶುರು ಮಾಡಿದ್ದು ಜಕ. ಅವನೇ ಮೊದಲು ರಾಜಿಯಾಗಬೇಕು" ಎಂದು ಪಕ ಹೇಳಿದರೆ, "ಜಗಳ ಆಡಲು ಮೊದಲು ಕಾಲು ಕೆದರಿಕೊಂಡು ಬಂದದ್ದು ಪಕ. ಅವನೇ ಮೊದಲು ಈ ಜಗಳವನ್ನು ನಿಲ್ಲಿಸಬೇಕು. ನಾನಲ್ಲ" ಎಂದು ಜಕ ಮೂಗು ಮುರಿದ. ಒಟ್ಟಾರೆ ಜನರಿಗೆ ಇವರ ಯುದ್ಧವನ್ನು ನಿಲ್ಲಿಸಲು ಆಗಲೇ ಇಲ್ಲ. ಜಕ-ಪಕರು ಅವರನ್ನು ಮೀರಿ ಬೆಳೆದಿದ್ದರು. ಹೇಗಾದರು ಮಾಡಿ ಇವರಿಬ್ಬರ ಜಗಳವನ್ನು ನಿಲ್ಲಿಸಿ, ಕಥೆಗಳನ್ನು ಬದುಕಿಸಬೇಕೆಂದು ಜನ ನಿರ್ಧರಿಸಿದರು. ಮೊದಲಿನ ಹಾಗೆ ಕಥಾ ಜಗತ್ತನ್ನು ಸೃಷ್ಟಿಸಬೇಕು ಎಂದು ಅವರು ಅಂದುಕೊಂಡರು. ಇವರ ಜಗಳವನ್ನು ನಿಲ್ಲಿಸುವುದಕ್ಕೆ ಯಾರಿಗೆ ಸಾಧ್ಯ ಎಂದು ಎಲ್ಲರೂ ಯೋಚಿಸುತ್ತಿರಬೇಕಾದರೆ, ಎಲ್ಲರ ಮನಸ್ಸಿಗೆ ತೋಚಿದ್ದು ದನಕಾಯುವ ಒಬ್ಬ ಹುಡುಗ.

ಆ ದನ ಕಾಯುವವನು ಬೆಟ್ಟದ ಮೇಲೆ ಕೊಳಲನ್ನು ಊದುತ್ತಾ ದನಗಳನ್ನು ಮೇಯಿಸುತ್ತಿದ್ದ ಒಬ್ಬ ತಿರುಪೋಕಿ. ಅವನು ಹೆಂಗಸರನ್ನು ಕಾಡಿಸುತ್ತಾ, ಅವರಿವರ ಮನೆಯಿಂದ ಊಟ ಕದ್ದು ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ಆದರೆ ಅವನ ಬಗ್ಗೆ ಒಂದು ವಿಶೇಷ ವದಂತಿ ಎಲ್ಲಾ ಕಡೆ ಹರಡಿತ್ತು, ಏನಪ್ಪಾ ಅಂದರೆ, ಅವನ ಹಿರಿಕರು ಉತ್ತರ ದೇಶದಿಂದ ಬಂದವರಂತೆ. ಅಲ್ಲಿ ಅದ್ಯಾರೊ ಕೌರವರಿಗು, ಪಾಂಡವರಿಗು ಯುದ್ಧವಾದಾಗ ಈ ದನಕಾಯುವವನ ಪೂರ್ವಜನೊಬ್ಬ ಪಾಂಡವರಿಗೆ ಸಹಾಯ ಮಾಡಿ ಯುದ್ಧ ಗೆಲ್ಲಿಸಿಕೊಟ್ಟನೆಂದು ಪ್ರತೀತಿ ಇದೆಯಂತೆ. ಯುದ್ಧ ಮಾಡಿಸೋದು ಹೇಗೆ, ನಿಲ್ಲಿಸೋದು ಹೇಗೆ ಅಂತ ನಂಗೆ ಗೊತ್ತು ಎಂದು ಈ ದನಕಾಯುವವನು ಜನರ ಮುಂದೆ ಅನೇಕ ಸಾರಿ ಜಂಭ ಕೊಚ್ಚಿಕೊಂಡಿದ್ದ. ಹೀಗಾಗಿ ಈಗ ಜನರು ಇವನ ಬಳಿ ಹೋಗಿ ಜಕ-ಪಕರ ಯುದ್ಧವನ್ನು ನಿಲ್ಲಿಸಲು ಕೇಳಿಕೊಂಡರು.

ದೊಡ್ಡವರಿಗಾಗಿ ಮಕ್ಕಳ ಕಥೆ

ಆ ದನಕಾಯುವವನು ಮುಗುಳ್ನಗುತ್ತಾ, "ಇದೇನು, ಮಹಾ! ಕ್ಷಣಮಾತ್ರದಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ. ಆದರೆ ಒಂದು ಷರತ್ತು. ಯುದ್ಧ ನಿಲ್ಲಿಸಿದ ಮೇಲೆ ನೀವೆಲ್ಲರೂ ನನ್ನನ್ನು ಪೂಜಿಸಬೇಕು" ಎಂದು ಹೇಳಿದ. ಜಕ-ಪಕರ ಯುದ್ಧ ನಿಂತರೆ ಸಾಕೆಂದು ಸುಸ್ತಾಗಿದ್ದ ಜನರೆಲ್ಲರೂ ದನಕಾಯೋನು ಹಾಕಿದ ಷರತ್ತಿಗೆ ಹಿಂದೆ-ಮುಂದೆ ನೋಡದೆ ಒಪ್ಪಿಕೊಂಡರು.

ದನಕಾಯುವವನು ಜಕ-ಪಕರ ಹತ್ತಿರ ಬಂದಾಗ ಅವರಿಬ್ಬರು ತಮ್ಮ ಕಥೆಗಳೊಂದಿಗೆ ಮತ್ತೊಂದು ಘೋರ-ಯುದ್ಧಕ್ಕೆ ತಯಾರಾಗುತ್ತಿದ್ದರು. ಅವರಿಬ್ಬರ ಹತ್ತಿರ ಹೋಗಿ ದನಕಾಯುವವನು ಹೇಳಿದ, "ಇಲ್ಲಿ ನೋಡಿ. ನಿಮ್ಮಿಬ್ಬರ ಯುದ್ಧದಿಂದ ಸಾವಿರಾರು ಕಥೆಗಳು ಸಾಯುತ್ತಿವೆ. ನಿಮ್ಮ ಹಠದಿಂದ ಜನರಿಗೆ ಹೊಸ ಕಥೆಗಳೇ ಸಿಗುತ್ತಿಲ್ಲ. ಹೀಗೆ ಆದರೆ ಮುಂದೆ ಕಥೆಗಳೆ ಇರುವುದಿಲ್ಲ. ಜನರಿಗೆ ಉಸಿರು ಎಷ್ಟು ಮುಖ್ಯವೋ, ಅಷ್ಟೆ ಮುಖ್ಯ ಕಥೆಗಳು. ಆದ್ದರಿಂದ ನೀವಿಬ್ಬರು ಯುದ್ಧವನ್ನು ನಿಲ್ಲಿಸಲೇಬೇಕು" ಎಂದು ಉಪದೇಶ ನೀಡಿದ. ಜಕ-ಪಕರು ಮೊದಮೊದಲು ಇದಕ್ಕೆ ಒಪ್ಪಲೇ ಇಲ್ಲ.

ದನಕಾಯುವವನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಸ್ವಲ್ಪ ಸಮಯದ ನಂತರ ಅವನು ಮತ್ತೆ ಹೇಳಿದ, "ನೋಡಿ ನಿಮ್ಮಿಬ್ಬರ ಹಠದಿಂದ ಬೇರೆ ಕಥೆಗಳು ಹೊಸದಾಗಿ ಹುಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಇರೋ ಕಥೆಗಳು ಯಾಕೆ ಸಾಯಬೇಕು? ನಿಮ್ಮಿಬ್ಬರ ನಡುವೆ ಒಂದು ಪಂದ್ಯವಾಗಲಿ. ಅದರಲ್ಲಿ ಯಾರು ಗೆಲ್ಲುತ್ತಾರೋ ಅವರೇ ಶ್ರೇಷ್ಠರು. ಗೆದ್ದಾದ ಮೇಲೆ ಮತ್ತೆ ಯಾವತ್ತೂ ನಿಮ್ಮಿಬ್ಬರ ನಡುವೆ ಯುದ್ಧವಾಗಬಾರದು. ಒಪ್ಪಿಗೇನಾ?" ಎಂದು ಜಕ-ಪಕರನ್ನು ಕೇಳಿದ. ಇಬ್ಬರು ಬಹಳ ಯೋಚಿಸಿದ ನಂತರ ದನಕಾಯೋನ ಸೂಚನೆಗೆ ಒಪ್ಪಿಕೊಂಡರು. "ಏನದು ಪಂದ್ಯ?" ಎಂದು ಕೇಳಿ[...] ದನಕಾಯುವವನು ಪಂದ್ಯದ ಬಗ್ಗೆ ವಿವರಿಸಿದ. "[...] ಕೊಡುವ ದೊಡ್ಡ ಹಂಡೆಯಲ್ಲಿ ಹಾಲಿನ ಕೆನೆ ತುಂಬಿರು[...] ನೀವಿಬ್ಬರು ಅದರಿಂದ ಬೆಣ್ಣೆಯನ್ನು ಕಡಿಯಬೇಕು. ಯ[...] ಹೆಚ್ಚು ಬೆಣ್ಣೆಯನ್ನು ಕದಿಯುತ್ತಾರೊ ಅವರು ಪಂದ್ಯ[...] ಗೆದ್ದ ಹಾಗೆ." ಜಕ ಈ ಪಂದ್ಯ ಸುಲಭವೆಂದು, [...] ಬಹಳ ಬಲಶಾಲಿಯಾಗಿ ರುವುದರಿಂದ ಪಂದ್ಯ[...] ಸುಲಭವಾಗಿ ಗೆಲ್ಲಬಹುದೆಂದು ತಕ್ಷಣ ಒಪ್ಪಿಕೊಂಡ. [...] ಕೂಡ ಒಪ್ಪಿಕೊಳ್ಳಲೇಬೇಕಾಯಿತು.

ಪಂದ್ಯ ಶುರುವಾಯಿತು. ಜಕ-ಪಕರು ಹಾ[...] ಕೆನೆಯಿಂದ ಬೆಣ್ಣೆಯನ್ನು ಕಡಿಯಲು ಶುರು ಮಾಡಿದ[...] ಸ್ವಲ್ಪ ಸಮಯದ ನಂತರ ಜಕ ಅಧಿಕ ಪ್ರಮಾಣ[...] ಬೆಣ್ಣೆ ಕಡಿದ. ಪಕನಿಗೆ ಬೆಣ್ಣೆ ಕಡೆಯಲು ಬಾ[...] ಸುಸ್ತಾಗತೊಡಗಿದ. ತಾನು ಸೋಲುತ್ತೇನೆ ಎಂದು ಅವ[...] ಖಾತ್ರಿಯಾಯಿತು. ಏನು ಮಾಡೋದು ಎಂದು ತೋ[...] ಬಸವಳಿದ. ಕೊನೆಗೆ ದನಕಾಯುವವನ ಕಡೆಗೆ ದೈನ್ಯದಿ[...] ನೋಡಿ "ನನ್ನನ್ನು ಗೆಲ್ಲಿಸು" ಎಂದು ಸಪ್ಪೆ ಮೊ[...] ಹಾಕಿಕೊಂಡು ಕೇಳಿದ. ದನಕಾಯುವವನು ಮುಗು[...]

******

ದನಕಾಯೋನು ರುಚಿಗುಂತ ಜಕನ ಬೆಣ್ಣೆಯನ್ನು ಅವ[...] ಗೊತ್ತಿಲ್ಲದ ಹಾಗೆ ಕದ್ದು ಸವಿಯತೊಡಗಿದ. ಜೊ[...] ಸ್ವಲ್ಪ, ಸ್ವಲ್ಪ ಬೆಣ್ಣೆಯನ್ನು ಪಕನ ಮಡಿಲಿಗೆ ಹಾಕು[...] ಇದರಿಂದ ಜಕನ ಬೆಣ್ಣೆ ಕರಗುತ್ತಾ ಹೋಯಿತು. [...] ಕಡಿದರು ಬೆಣ್ಣೆಯ ಪ್ರಮಾಣ ಹೆಚ್ಚಾಗಲೇ ಇಲ್ಲ. [...] ಕಡೆ ಪಕನ ಬೆಣ್ಣೆ ಈಗ ಹೆಚ್ಚುತ್ತಾ ಹೋಯಿತು. [...] ಕೆನೆಯನ್ನು ಕಡೆದು, ಕಡೆದು ಸುಸ್ತಾಗಿ ಹೋದ. ಕೊ[...] ದಣಿವಾಗಿ ಕೆಳಗೆ ಬಿದ್ದ. ಪಕನ ಬೆಣ್ಣೆ ಅಧಿಕವಾಗಿದ್ದರಿ[...] ಪಂದ್ಯದಲ್ಲಿ ಅವನೇ ಗೆದ್ದ. ಪಂದ್ಯ ಸೋತಿದ್ದರಿಂದ ಜ[...] ಅನೇಕ ಸೈನಿಕರು ಪಕನ ಆಸರೆ ಹೋದರು. ಪಕ[...] ಶ್ರೇಷ್ಠ ಎಂದು ದನಕಾಯೋನು ಘೋಷಿಸಿದ. ಜನರೆಲ್ಲ[...] ದನಕಾಯೋನ ನಿರ್ಣಯಕ್ಕೆ ತಲೆ ಬಾಗಿದರು. ಜಕ[...] ದನಕಾಯೋನಿಂದ ಆದ ಮೋಸದ ಬಗ್ಗೆ ತಿಳಿಯ[...] ಹೊತ್ತಿಗೆ ಪಕನ ಪ್ರಾಬಲ್ಯ ಅತಿಯಾಗಿತ್ತು. ಜನರು ಪ[...] ಪ್ರಾಬಲ್ಯಕ್ಕೆ ಮರುಳಾಗಿದ್ದರು. ಅವನ ಎಲ್ಲಾ ಕಥೆಗಳ[...] ಜನರು ಕುರುಡಾಗಿ ನಂಬತೊಡಗಿದರು.

******

ಈಗಲೂ ಕೂಡ ಪಕ ತಾನು ಬರೆದ ಕಥೆಗ[...] ಜಕನ ಅನೇಕರನ್ನು ಅವನಿಗೆ ಗೊತ್ತಿಲ್ಲದ ಹ[...] ಸೇರಿಸಿಕೊಳ್ಳುತ್ತಿದ್ದಾನೆ. ಆಗಾಗ ಜಕನ ಪ್ರಾಬಲ್ಯ ಹೆಚ್ಚಾಗ[...] ಲಕ್ಷಣ ಕಂಡರೆ, ದನಕಾಯೋನು ಪಕನ ರಕ್ಷಣೆಗೆ ಬರುತ[...] ಜನರೆಲ್ಲಾ ದನಕಾಯೋನು 'ಕಥೆಗಳ ರಕ್ಷಕ' ಎಂದು [...] ಮೇಲೆ ಕುರಿಸಿಕೊಂಡು ಮೆರವಣಿಗೆ ಮಾಡುತ್ತಿದ್ದಾರೆ.

■ ಡಾ.ವಿಜಯಕುಮಾರ ಎಂ ಬೋರ[...]

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427

1. ನೀಲು ಕಾವ್ಯ -ಸಂಗ್ರಹ 1	150.00
2. ನೀಲು ಕಾವ್ಯ -ಸಂಗ್ರಹ 2	150.00
3. ನೀಲು ಕಾವ್ಯ -ಸಂಗ್ರಹ 3	200.00
4. ಚಿತ್ರ ಸಮೂಹ	90.00
5. ಅಕ್ಷರ ಹೊಸ ಕಾವ್ಯ	300.00
6. ಮರೆಯುವ ಮುನ್ನ-1	150.00
7. ಮರೆಯುವ ಮುನ್ನ-2	150.00
8. ಮರೆಯುವ ಮುನ್ನ-3	150.00
9. ಮರೆಯುವ ಮುನ್ನ-4	150.00
10. ಮರೆಯುವ ಮುನ್ನ-5	150.00
11. ಪಾಂಚಾಲಿ	150.00
12. ಮನಕೆ ಕಾರಂಜಿಯ ಸ್ಪರ್ಶ	200.00
13. ಸಾಹಿತಿ, ಸಾಹಿತ್ಯ ವಿಮರ್ಶೆ	300.00
14. ಈ ನರಕ ಈ ಪುಲಕ	125.00
15. ಆಟ-ಜೂಜು-ಮೋಜು!	175.00
16. ಟೀಕೆ-ಟಿಪ್ಪಣಿ 1	200.00
17. ಟೀಕೆ-ಟಿಪ್ಪಣಿ 2	200.00
18. ಟೀಕೆ-ಟಿಪ್ಪಣಿ 3	200.00
19. ರೂಪಕ ಲೇಖಕರು	70.00
20. ಕಂಡದ್ದು ಕಂಡಹಾಗೆ	100.00
21. ಪ್ರಸ್ತುತ	80.00
22. ಹುಳಿಮಾವಿನ ಮರ	275.00
23. ಮುಸ್ಸಂಜೆಯ ಕಥಾ ಪ್ರಸಂಗ	250.00
24. ಬಿರುಕು	60.00
25. ಅಕ್ಕ	80.00
26. ಮಂಜು ಕವಿದ ಸಂಜೆ	70.00
27. ಅಜಾತಶತ್ರು ಸ್ಕಾಲರ್‌ಶಿಪ್ ಜಾತ್ರೆ	70.00
28. ಕಲ್ಲು ಕರಗುವ ಸಮಯ	125.00
29. ನಾನಲ್ಲ	60.00
30. ಕೆರೆಯ ನೀರನು ಕೆರೆಗೆ ಚೆಲ್ಲಿ	50.00
31. ಉಲ್ಲಂಘನೆ	80.00
32. ಪಾಪದ ಹೂಗಳು	60.00
33. ಬಿರುಕು	40.00
34. ಸಂಕ್ರಾಂತಿ	50.00
35. ತೆರೆಗಳು	50.00
36. ಈಡಿಪಸ್ ಮತ್ತು ಅಂತಿಗೊನೆ	80.00
37. ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00
38. ಗುಣಮುಖ	30.00
39. ಕ್ರಾಂತಿ ಬಂತು ಕ್ರಾಂತಿ	40.00
40. ಬಿಟ್ಟುಹೋದ ಪುಟಗಳು-1	250.00
41. ಬಿಟ್ಟುಹೋದ ಪುಟಗಳು-2	250.00
42. ಬಿಟ್ಟುಹೋದ ಪುಟಗಳು-3	250.00
43. ಕಪ್ಪು ಮಲ್ಲಿಗೆ	75.00
44. ಕಂಡಹಾಗೆ ಭಾಗ-1	125.00
45. ಕಂಡಹಾಗೆ ಭಾಗ-2	150.00
46. ಕಂಡಹಾಗೆ ಭಾಗ-3	150.00
47. ದರವೇಶಿ ಕತೆಗಳು	90.00
48. ಬಸವರಾಜಮಾರ್ಗ	40.00
49. ಬೆನಜೀರ್	25.00
50. ಆವರಣ ಎಂಬ ವಿ-ಕೃತಿ	100.00
51. ಜೈಲೆಂಬ ಲೋಕದಲ್ಲಿ	75.00
52. ವೇದಾಂತ ರೆಜಿಮೆಂಟ್	60.00
53. ಕಳೆದುಕೊಂಡವಳು	45.00
54. ಟ್ರೇನ್ ಟು ಪಾಕಿಸ್ತಾನ್	125.00
55. ಮಿಡತೆಗಳ ಬರವಿಗೆ....	100.00
56. ಡಿಸೆಂಬರ್ 13	150.00
57. ಮನುಸ್ಮೃತಿ	20.00
58. ಆರೋಗ್ಯ ಮತ್ತು ಜೀವನ	125.00
59. ಜಬೀವುಲ್ಲಾ ಕೊಟ್ಟ ಕೋಳಿ	100.00
60. ವಿಷ್ಣು ನೂರೊಂದು ನೆನಪು	150.00
61. ಓ ಈಳಂ	250.00
62. ಖೈರ್ಲಾಂಜಿ	200.00
63. ಕಮಲಾ ದಾಸ್ ಕಥೆಗಳು	60.00
64. ಮಾಂಟೊ ಕಥೆಗಳು	80.00
65. ಕೋಮುವಾದ	60.00
66. ಜಾತಿ ಪದ್ಧತಿ	150.00
67. ರಾಮಾಯಣ ವಿಷವೃಕ್ಷ	75.00
68. ಅರೇಬಿಯನ್ ನೈಟ್ಸ್	150.00
69. ಜಿಮ್ ಕಾರ್ಬೆಟ್	80.00
70. ಗೋವು ಪವಿತ್ರ ಎಂಬ ಮಿಥ್ಯೆ	80.00
71. ಅಸ್ಪೃಶ್ಯ ವಸಂತ	200.00
72. ಬಾಲಗೋಪಾಲ್ ಬರಹಗಳು	150.00
73. ಬದುಕು-ಬಯಲು	200.
74. ಚಾರ್ವಾಕ	250.
75. ತಾಜುಮಾ ಕವಿತೆಗಳು	75.
76. ಪ್ರೀತಿ ಮತ್ತು ಕ್ರಾಂತಿ	125.
77. ಲೋಕಾಯುಕ್ತ ತನಿಖಾ ವರದಿ	100.
78. ಕೇಸರಿ ಭಯೋತ್ಪಾದನೆ	150.
79. ಹೇಳುತ್ತೇನೆ ಕೇಳು	175.
80. ಮಂಗನ ಬ್ಯಾಟೆ	250.
81. ಹುಳಿಮಾವು ಮತ್ತು ನಾನು	150.
82. ಮೋದಿ ಮಂಕುಬೂದಿ	80.
83. ಆರ್‌ಸ್ಸೆಸ್ ಅಂತರಂಗ	80.
84. ಆರ್‌ಸ್ಸೆಸ್ ಅಂತರಂಗ(ಇಂಗ್ಲಿಷ್)	80.
85. ಜೇಡರ ಕಣಿವೆ ಮತ್ತು ಇತರ ಕತೆಗಳು	50.
86. ಕಾಡಿನ ಕತೆಗಳು	40.
87. ಮನೆ ಇಲ್ಲದ ಬಾಗಿಲು	80.
88. ನೇತು ಬಿದ್ದ ನವಿಲು	225.
89. SSLC ನಂತರ ಮುಂದೇನು?	100.
90. ಟರ್ನಿಂಗ್ ಪಾಯಿಂಟ್	100.
91. ನೆನಪಿನ ಸುರುಳಿ ತೆರೆದಾಗ	125.
92. ಅನಂತಮೂರ್ತಿ ಅನಂತರೀತಿ	130.
93. ಬ್ರೆಕ್ಟನ ಸಮಾಜವಾದ	150.
94. ದೇಶ ಅಂದರೆ ಮನುಷ್ಯರು	150.
95. ನನ್ನನುಭವದ ಸೂಫಿ	200.
96. ಕಗ್ಗತ್ತಲ ಜಗತ್ತಲ್ಲಿ ತೊಂಬತ್ತು ದಿನ	60.
97. ಕಾಡುವ ಕತೆಗಳು	80.
98. ಅರ್ಧನಾರೀಶ್ವರ	150.
99. ಹತ್ತು ತಮಿಳು ಕತೆಗಳು	80.
100. ಹುಲಿಯ ಜಾಡು ಹಿಡಿದು	80.

EPW
ಸಂಪಾದಕೀಯ

ಕೃಪೆ: *Economic and Political Weekly (March 4, 2017. Vol. 52. No. 9)*

■ ಅನು: ಶಿವಸುಂದರ್

ದ್ವೇಷವು ಸಹಿಷ್ಣುತೆಯನ್ನು ಸೋಲಿಸಿದಾಗ

ಅಮೆರಿಕ ಮತ್ತು ಭಾರತ ದೇಶಗಳ ಎರಡೂ ಸರ್ಕಾರಗಳು ದ್ವೇಷದ ಫಸಲಿಗೆ ಗೊಬ್ಬರ ಸುರಿಯುತ್ತಿವೆ

ಇದೊಂದು ನಿಜಕ್ಕೂ ವಿಚಿತ್ರ ಸಂಗತಿ. ತನ್ನ ...ೊಳಗೆ ನಡೆಯುತ್ತಿರುವ ದ್ವೇಷಾಧಾರಿತ ಅಪರಾಧಗಳ ...ಕುರುಡಾಗಿರುವ ಭಾರತ ಸರ್ಕಾರ, ಅಮೆರಿಕದಲ್ಲಿ ಭಾರತೀಯ ಇದೇ ರೀತಿಯ ದ್ವೇಷಕ್ಕೆ ಬಲಿಯಾದ ...ೇ ಆ ದೇಶದ ಅಧ್ಯಕ್ಷ ಇಂಥಾ ಅಪರಾಧಗಳನ್ನು ...ಸಬೇಕೆಂದು ಒತ್ತಾಯಿಸುತ್ತಿದೆ. ಕಳೆದ ಫೆಬ್ರವರಿ 22 ... ಅಮೆರಿಕದ ಕಾನ್ಸಾಸ್ ಪ್ರಾಂತ್ಯದ ಒಲಾಥೆಯಲ್ಲಿ ...ವಾಸ್ ಕುಚ್ಚಿಭೋತ್ಲಾ ಎಂಬ ಭಾರತೀಯನನ್ನು ಒಬ್ಬ ...ಕನ್ ಬಿಳಿಯ ಗುಂಡಿಟ್ಟು ಕೊಂದುಹಾಕಿದ. ಕೊಲ್ಲುವ ...ಲು ಆತನನ್ನು ಮತ್ತು ಇನ್ನೊಬ್ಬ ಭಾರತೀಯನನ್ನು ...ಶಿಸಿ 'ನಮ್ಮ ದೇಶಬಿಟ್ಟು ತೊಲಗಿ' ಎಂದು ಅರಚಿದ್ದ. ...ಇಬ್ಬರೂ ಭಾರತೀಯರೂ ಕಾನೂನುಬದ್ಧವಾಗಿ ...ರಿಕಕ್ಕೆ ವಲಸೆ ಬಂದಿದ್ದವರು. ಆದರೆ ಆ ಸತ್ಯವೇನೂ ...ಗಾರನ ಧೋರಣೆಯಲ್ಲಿ ವ್ಯತ್ಯಾಸ ಉಂಟುಮಾಡು...ಲ್ಲ. ನಿಸ್ಸಂದೇಹವಾಗಿ ದ್ವೇಷಾಧಾರಿತ ಅಪರಾಧವೇ ... ಈ ಕೊಲೆಯ ಬಗ್ಗೆ ಅಮೆರಿಕದ ಸರ್ಕಾರ ಒಂದು ...ೆ ಕಾಲ ಯಾವ ಪ್ರತಿಕ್ರಿಯೆಯನ್ನೂ ಕೊಡದೇ ...ವಾಗಿತ್ತು. ಅಮೆರಿಕದ ಅಧ್ಯಕ್ಷೀಯ ಕಾರ್ಯಾಲಯ-...ಹೌಸಿನ- ಪತ್ರಿಕಾ ಕಾರ್ಯದರ್ಶಿ ಸೀನ್ ಸ್ಪೈಸರ್ ... ಇದೊಂದು ಮನ ಕಲಕುವ ಸಂಗತಿಯೆಂದು ... ಇತ್ತು ಕೈತೊಳೆದುಕೊಂಡರು. ನಂತರ ಅಧ್ಯಕ್ಷ ... ಅವರು ಫೆಬ್ರವರಿ 28ರಂದು ಅಮೆರಿಕದ ...ನ್ನುದ್ದೇಶಿಸಿ ಮಾಡಿದ ಜಂಟಿ ಭಾಷಣದಲ್ಲಿ ಈ ...ಯ ಬಗ್ಗೆ ಒಂದು ಸಣ್ಣ ಉಲ್ಲೇಖ ಮಾಡಿದರು. ಆ ಅಮಾನುಷ ಕೊಲೆಯ ಬಗೆಗೆ ಅಧ್ಯಕ್ಷರ ... ಮೃದು ಟಿಪ್ಪಣಿಯನ್ನೇ ಭಾರತೀಯ ಮಾಧ್ಯಮಗಳು ...ನೆ, ತೀಕ್ಷ್ಣ ಟೀಕೆ ಎಂದೆಲ್ಲಾ ಗುಣವಾಚಕಗಳನ್ನು ... ಬಣ್ಣಿಸಿದವು. ಆದರೆ ಟ್ರಂಪ್ ಹೇಳಿದ್ದೆಲ್ಲಾ ಇಷ್ಟೇ: ... ಸಮುದಾಯ ಕೇಂದ್ರಗಳ ಮೇಲಿನ ಬೆದರಿಕೆಗಳು ...ರ ಮಸಣದ ಮೇಲಿನ ಪುಂಡಾಟಿಕೆಗಳು ಹಾಗೂ ...ಸ್‌ನಲ್ಲಿ ನಡೆದ ಗುಂಡಿನ ದಾಳಿಗಳು ...ವುದೇನೆಂದರೆ ನಾವು ಕಾರ್ಯನೀತಿಗಳ ವಿಷಯಗಳಲ್ಲಿ ...ನ್ನ ಅಭಿಪ್ರಾಯ ಹೊಂದಿರುವ ದೇಶವಾದರೂ, ದ್ವೇಷ ... ದುಷ್ಟಶಕ್ತಿಗಳನ್ನು ಮತ್ತವುಗಳ ಎಲ್ಲಾ ಕುರೂಪಗಳನ್ನು ಮಾತ್ರ ಒಂದೇ ಧ್ವನಿಯಲ್ಲಿ ಖಂಡಿಸುವ ದೇಶವಾಗಿದ್ದೇವೆ."

ಆದರೆ ಇಲ್ಲಿ ಅಮೆರಿಕದ ಅಧ್ಯಕ್ಷರು ಹೇಳದ ಒಂದು ವಿಷಯವಿದೆ. ತನ್ನ ಆಡಳಿತದ ಏಳು ಮುಸ್ಲಿಮ್ ಬಹುಸಂಖ್ಯಾತ ದೇಶಗಳಿಂದ ವಲಸೆಯನ್ನು ನಿಷೇಧಿಸುವಂಥಾ (ಕಾನೂನು ಮಧ್ಯಪ್ರವೇಶದಿಂದ ಇದನ್ನು ಈ ಸದ್ಯಕ್ಕೆ ಹಿಂತೆಗೆದುಕೊಳ್ಳಲಾಗಿದೆ) ನೀತಿಗಳು ಮತ್ತು ಘೋಷಣೆಗಳೇ ಇಂಥಾ ದ್ವೇಷಾಪರಾಧಗಳಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿದೆ ಎಂಬ ಮಾತು ಅಧ್ಯಕ್ಷರ ಹೇಳಿಕೆಯಲ್ಲಿರಲಿಲ್ಲ. ಹಾಗೆ ನೋಡಿದರೆ ಅಮೆರಿಕವನ್ನೂ ಒಳಗೊಂಡಂತೆ ಎಲ್ಲಾ ದೇಶಗಳ ಸಮಾಜಗಳಲ್ಲೂ ವಿಭಿನ್ನ ಗುಂಪುಗಳ ನಡುವೆ ಪೂರ್ವಗ್ರಹಗಳು ಮತ್ತು ಅಸಹನೆಗಳೂ ಇದ್ದಿವೆ. ಆದರೆ ತಮ್ಮ ಕೆಲವು ನೀತಿಗಳೇ ಭಿನ್ನ ಸಾಮಾಜಿಕ ಗುಂಪುಗಳ ನಡುವಿನ ಒಡಕುಗಳನ್ನು ಮತ್ತಷ್ಟು ಹೆಚ್ಚಿಸುತ್ತವೆಂಬುದನ್ನು ಮಾತ್ರ ಯಾವ ದೇಶವೂ ಒಪ್ಪಿಕೊಳ್ಳುವುದಿಲ್ಲ.

ಇಂದು ಅಮೆರಿಕದಲ್ಲಿ ನಡೆಯುತ್ತಿರುವ ಸಂಗತಿಗಳು ಕಳೆದ ಎರಡೂವರೆ ವರ್ಷಗಳಿಂದ ಭಾರತದಲ್ಲಿ ನಡೆಯುತ್ತಿರುವ ಘಟನಾವಳಿಗಳ ಪ್ರತಿಫಲನದಂತಿದೆ. 2014ರ ಮೇ ತಿಂಗಳ ಸಾರ್ವತ್ರಿಕ ಚುನಾವಣೆಯಲ್ಲಿ ನರೇಂದ್ರ ಮೋದಿ ಮತ್ತು ಭಾರತೀಯ ಜನತಾ ಪಕ್ಷ ಗೆಲುವು ಸಾಧಿಸಿದ ನಂತರದಲ್ಲಿ, ವ್ಯಕ್ತಿಗಳನ್ನು ಗುರಿಯಾಗಿರಿಸಿ ಕೊಂದು ನಡೆಯುತ್ತಿರುವ ದ್ವೇಷಾಧಾರಿತ ಅಪರಾಧಗಳಲ್ಲಿ ಹೆಚ್ಚಳವಾಗಿರುವುದನ್ನು ಮತ್ತು ದುರುದ್ದೇಶಪೂರಿತವಾಗಿ ಮತ್ತು ಅತ್ಯಂತ ಅಮಾನುಷವಾಗಿ ಮುಸ್ಲಿಮ್ ಸಮುದಾಯವನ್ನು ಪರಕೀಯಗೊಳಿಸುತ್ತಿರುವುದನ್ನೂ ನೋಡುತ್ತಿದ್ದೇವೆ. ಗುಂಪುದಾಳಿ ಮಾಡಿ ಚಿತ್ರಹಿಂಸೆ ಕೊಟ್ಟು ಕೊಲ್ಲುವುದು ಮತ್ತು ಲವ್ ಜೆಹಾದ್ ಆರೋಪ ಹೊರಿಸು ವುದರಿಂದ ಹಿಡಿದು ಹಾಲಿ ಉತ್ತರಪ್ರದೇಶ ಚುನಾವಣೆಗಳಲ್ಲಿ ಮೋದಿಯವರು ಮುಸುಕುಹೊದಿಸಿ ಬಳಸಿದ ಕೋಮು ವಾದಿ ಪರಿಭಾಷೆಗಳ ತನಕ, ಕಳೆದೆರಡು ವರ್ಷಗಳಿಂದ ಮುಸ್ಲಿಮರ ಮೇಲೆ ನಡೆಸಲಾಗುತ್ತಿರುವ ಬಗೆಬಗೆಯ ದಾಳಿಗಳು ಭಾರತೀಯ ಸಮಾಜದಲ್ಲಿ ತಮ್ಮ ಸ್ಥಾನವೇನೆಂಬ ಅಭದ್ರತೆಯನ್ನು ಮುಸ್ಲಿಮರಲ್ಲಿ ನಿಚ್ಚಳವಾಗಿ ಹೆಚ್ಚಿಸುತ್ತಿದೆ. ಇದನ್ನು ಮೈತುಂಬಾ ದ್ವೇಷವನ್ನೇ ತುಂಬಿಕೊಂಡಿರುವ ಕೆಲವೇ ಕೆಲವು ವ್ಯಕ್ತಿಗಳ ದಾಳಿಗಳು ಅಥವಾ ಆಳುವ ಪಕ್ಷದ ರೀತಿಯಲ್ಲೇ ಹಿಂದೂತ್ವ ಸಿದ್ಧಾಂತವನ್ನು ನೆಚ್ಚಿಕೊಂಡಿರುವ ಸಣ್ಣಸಣ್ಣ ಗುಂಪುಗಳ ದಾಳಿಕೋರ ಚಟುವಟಿಕೆಗಳಿಂದ ಮಾತ್ರವೇ ಉಂಟು ಮಾಡಲು ಸಾಧ್ಯವಿಲ್ಲ. ಅಲ್ಪಸಂಖ್ಯಾತರ ಮೇಲೆ ನಡೆಸುವ ಇಂಥಾ ದಾಳಿಗಳನ್ನು ತಾವು ವಿರೋಧಿಸುವುದಿಲ್ಲ ಅಥವಾ ಖಂಡಿಸುವುದಿಲ್ಲ ಅಥವಾ ಅದಕ್ಕೂ ತಮಗೂ ಸಂಬಂಧವಿಲ್ಲವೆಂದು ದೂರತಳ್ಳುವುದಿಲ್ಲವೆಂಬ ಸಂದೇಶವು ಮೇಲಿನಿಂದ ಬಂದಿದ್ದರೆ ಮಾತ್ರ ಇವೆಲ್ಲಾ ಸಾಧ್ಯವಾಗುತ್ತದೆ. ಉತ್ತರಪ್ರದೇಶದ ಅಖ್ಲಾಕ್‌ನನ್ನು ಗುಂಪುಗೂಡಿ ಕೊಂದುಹಾಕಿದಂಥಾ ಪ್ರತಿಯೊಂದು ದ್ವೇಷಾಧಾರಿತ ಘಟನೆ ನಡೆದಾಗಲೂ ಮೇಲಿನವರು ರೌರವ ಮೌನವನ್ನು ಪರಿಪಾಲಿಸಿದ್ದಾರೆ. ಹಾಗೆ ನೋಡಿದರೆ ಇಂಥಾ ದ್ವೇಷಾಧಾರಿತ ಅಪರಾಧಗಳು ಸಂಭವಿಸಿದ ನಂತರದಲ್ಲಿ ಮೋದಿ ಹೇಳಿದ್ದಕ್ಕಿಂತ ಹೆಚ್ಚನ್ನದನ್ನು ಟ್ರಂಪ್ ಅವರೇ ಹೇಳಿದ್ದಾರೆನ್ನಬ ಹುದು.

ಭಾರತ ಮತ್ತು ಅಮೆರಿಕದಲ್ಲಿ ನಡೆಯುತ್ತಿರುವ ಘಟನೆಗಳ ಸಾಮ್ಯತೆಯು ಇಲ್ಲಿಗೇ ನಿಲ್ಲುವುದಿಲ್ಲ. ರಾಷ್ಟ್ರದ



ನಿರ್ವಚನದ ಬಗ್ಗೆಯೂ ಈ ಸಾಮ್ಯತೆ ಮುಂದುವರೆಯುತ್ತದೆ. ಅಮೆರಿಕವನ್ನು ಮತ್ತೆ ಮಹಾನ್ ರಾಷ್ಟ್ರವನ್ನಾಗಿ ಮಾಡುವುದಾಗಿ ಟ್ರಂಪ್ ಪದೇಪದೇ ಹೇಳುತ್ತಾರೆ. ಆದರೆ ಈ ಮಹಾನ್ ಅಮೆರಿಕ ಎಂದರೇನು? ಮುಸ್ಲಿಮರನ್ನೂ ಒಳಗೊಂಡಂತೆ ಜಗತ್ತಿನ ಬೇರೆಬೇರೆ ದೇಶಗಳ ಜನರಿಗೆ ಆ ಅಮೆರಿಕದಲ್ಲಿ ಜಾಗವಿರುತ್ತದೆಯೇ? ಅಥವಾ ಅವರೆಲ್ಲರನ್ನೂ ಅಮೆರಿಕದ ಗತವೈಭವವನ್ನು ಪುನರ್‌ಸ್ಥಾಪಿಸಬೇಕೆಂಬ ಬೃಹತ್ ಯೋಜನೆಗೆ ಗಂಡಾಂತರ ಉಂಟುಮಾಡುವವರೆಂದು ಪರಿಗಣಿಸಲಾಗುವುದೇ? ಟ್ರಂಪ್ ಅವರು ಕಾನ್ಸಾಸ್ ಗುಂಡಿನ ದಾಳಿಯ ಬಗ್ಗೆ ಪ್ರಸ್ತಾಪ ಮಾಡಿದ ಭಾಷಣದಲ್ಲೇ ವಲಸಿಗರ ಅಪರಾಧಗಳಿಗೆ ಬಲಿಯಾದ ಅಮೆರಿಕನ್ನರಿಗೆ ಸೇವೆ ಮಾಡಲು ವಾಯ್ಸ್ (ವಿಕ್ಟಿಮ್ಸ್ ಆಫ್ ಇಮಿಗ್ರೆಷನ್ ಕ್ರೈಮ್ ಎಂಗೇಜ್ಮೆಂಟ್) ಎಂಬ ಸಂಸ್ಥೆಯ ಸ್ಥಾಪನೆಯ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ವಲಸಿಗರ ಅಪರಾಧಗಳಿಂದ ಕೊಲ್ಲಲ್ಪಟ್ಟವರೆಂದು ಹೇಳಲಾದ ಪೊಲೀಸ್ ಅಧಿಕಾರಿಗಳ ಗುಣ ವಿಶೇಷಗಳನ್ನು ಟ್ರಂಪ್ ಕೊಂಡಾಡುತ್ತಾರೆ. ಆದರೆ ವಲಸಿಗರು ಎಸಗಿದರೆನ್ನಲಾದ ಅಪರಾಧವು ಅಮೆರಿಕನ್ನರೆಂದು ಕರೆಸಿಕೊಳ್ಳಲ್ಪಡುವವರು ಎಸಗಿದ ಅಪರಾಧಗಳಿಗಿಂತ ಹೆಚ್ಚಾಗಿದೆಯೇ ಎಂಬ ಬಗ್ಗೆ ಮಾತ್ರ ಅವರು ತುಟಿ ಬಿಚ್ಚುವುದಿಲ್ಲ. ಟ್ರಂಪ್ ಅವರು ಯಾವುದೇ ಗುಣವಾಚಕ ಅಥವಾ ವಿವರಣೆಗಳಿಲ್ಲದೆ ಕೇವಲ ವಲಸಿಗ ಎಂಬ ಪದವನ್ನೇ ಆಯ್ಕೆ ಮಾಡಿಕೊಳ್ಳುವ ಮೂಲಕ ಕುಚ್ಚಿಭೋತ್ಲಾ ಅವರನ್ನು ಕೊಂದ ಕೊಲೆಗಾರನಂಥವರ ಕೈದಾಳವೂ ಆಗಿದ್ದಾರೆ. ಅಂಥವರಿಗೆ ಭಿನ್ನವಾಗಿ ಕಾಣುವ, ಭಿನ್ನವಾದ ಮೈಬಣ್ಣ ಹೊಂದಿರುವ, ಭಿನ್ನವಾದ ಭಾಷೆಯನ್ನು ಮಾತನಾಡುವ, ಭಿನ್ನವಾದ ದಿರಿಸನ್ನು ಧರಿಸುವ ಪ್ರತಿಯೊಬ್ಬರೂ ಅಮೆರಿಕಕ್ಕೆ ಗಂಡಾಂತರ ಉಂಟುಮಾಡುವ ಅಕ್ರಮ ವಲಸಿಗರೇ, ಹೊರಗಿನವರೇ ಆಗಿರುತ್ತಾರೆ.

ಭಾರತದಲ್ಲಿ, ಹಾಲಿ ಸರ್ಕಾರವು ತಾನು ಯಾವುದನ್ನು ರಾಷ್ಟ್ರ ಮತ್ತು ರಾಷ್ಟ್ರೀಯತೆ ಎಂದು ಪರಿಗಣಿಸುತ್ತದೋ ಅದರ ಸುತ್ತಾ ಒಂದು ಕಾರ್ಯಸೂಚಿಯನ್ನು ಜಾರಿಮಾಡಿದೆ. ಎಲ್ಲಿಯವರೆಗೆ ದ್ರೋಹಿಗಳೆಂದು ಸಾಬೀತಾಗುವುದಿಲ್ಲವೋ ಅಲ್ಲಿಯವರೆಗೆ ಭಾರತದ ಎಲ್ಲಾ ಹಿಂದೂಗಳು ಸಹಜ ರಾಷ್ಟ್ರೀಯವಾದಿಗಳೇ. ಆದರೆ ಮುಸ್ಲಿಮರು ಮಾತ್ರ ತಮ್ಮ ರಾಷ್ಟ್ರೀಯವಾದಿ ಗುಣಲಕ್ಷಣಗಳನ್ನು ಸಾಬೀತುಪಡಿಸಬೇಕು. ಇದರ ಜೊತೆಜೊತೆಗೆ ಯಾರು ಸರ್ಕಾರವನ್ನು ಮತ್ತು ಅದರ ನೀತಿಗಳನ್ನು ವಿರೋಧಿಸುತ್ತಾರೋ, ಯಾರು ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಿಕೊಳ್ಳುವ ಕಾಶ್ಮೀರಿಗಳ ಹಕ್ಕನ್ನು ಸಮರ್ಥಿಸುತ್ತಾರೋ, ಕಾಶ್ಮೀರ, ಬಸ್ತರ್ ಮತ್ತು ಈಶಾನ್ಯ ಭಾರತಗಳಲ್ಲಿ ಭದ್ರತಾಪಡೆಗಳ ದೌರ್ಜನ್ಯವನ್ನು ಖಂಡಿಸುತ್ತಾರೋ, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಎಲ್ಲಾ ಭಾರತೀಯರಿಗೂ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಹಕ್ಕನ್ನು ಕೊಡುತ್ತದೆಂದು ಗಟ್ಟಿಸಿ ಹೇಳುತ್ತಾರೋ ಅವರೆಲ್ಲರೂ ರಾಷ್ಟ್ರ ವಿರೋಧಿಗಳೇ. ಕೇಂದ್ರ ಗೃಹಖಾತೆಯ ರಾಜ್ಯ ಮಂತ್ರಿ ಕಿರೆಣ್ ರಿಜಿಜು ಅವರ ಪ್ರಕಾರ, ಇತ್ತೀಚೆಗೆ ದೆಹಲಿ ವಿಶ್ವವಿದ್ಯಾಲಯದ ರಾಮ್ಜಾಸ್ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ 'ಪ್ರತಿರೋಧದ ಸಂಸ್ಕೃತಿಗಳು' ಎಂಬ ವಿಚಾರ ಸಂಕಿರಣದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಬಿಜೆಪಿಯ ವಿದ್ಯಾರ್ಥಿ ವಿಭಾಗವಾದ ಎಬಿವಿಪಿ ಸದಸ್ಯರು ಮಾಡಿದ ಮಾರಣಾಂತಿಕ ದಾಳಿಯು, ಉಗ್ರ ಎಡಪಂಥೀಯರು ಮತ್ತು ರಾಷ್ಟ್ರೀಯವಾದಿಗಳ ನಡುವೆ ನಡೆದ ತಾತ್ವಿಕ ಸಂಘರ್ಷವಾಗಿತ್ತು. ಎಬಿವಿಪಿ ಮಾತ್ರ ಇಲ್ಲಿ ರಾಷ್ಟ್ರೀಯವಾದಿ ಎಂಬ ಪಟ್ಟಕ್ಕೆ ಅರ್ಹವೆಂಬುದು ಸ್ಪಷ್ಟವಾಗಿದೆ.

ಇದು ಭಾರತ ಮತ್ತು ಅಮೆರಿಕ ಸರ್ಕಾರಗಳು ಸಮರ್ಥಿಸುತ್ತಿರುವ ಅಪಾಯಕಾರಿ ಧ್ರುವೀಕೃತ ಪರಿಕಲ್ಪನೆಗಳು. ಭಾರತದಲ್ಲಿ ಎಬಿವಿಪಿಯಂಥ ಗುಂಪುಗಳಿಗೆ ತಮ್ಮ ರೀತಿಯ ರಾಷ್ಟ್ರೀಯವಾದವನ್ನು ಹೇರಲು ಪರವಾನಗಿ ಕೊಡಲಾಗಿದೆ. ಅಮೆರಿಕದಲ್ಲಿ ಈಗ ಶಸ್ತ್ರಧಾರಿ ವ್ಯಕ್ತಿಗಳು ಮತ್ತು ಸರ್ಕಾರದ ಪ್ರತಿನಿಧಿಗಳು ಅಕ್ರಮ ವಲಸಿಗರು ಮತ್ತು ರಾಷ್ಟ್ರಕ್ಕೆ ಗಂಡಾಂತರ ಎಂದು ಪರಿಗಣಿಸಿದವರನ್ನು ಬೆನ್ನು ಹತ್ತಬಹುದು ಮತ್ತು ಕೊಲ್ಲಲೂಬಹುದು. ಅಂತಿಮವಾಗಿ ಇಂಥಾ ಸರ್ಕಾರಗಳೇ ನಮ್ಮ ಸಮಾಜದಲ್ಲಿ ಸಹನೆ ಮತ್ತು ಸಂವಾದಗಳಿಗಿದ್ದ ಅವಕಾಶವನ್ನು ನಾಶಗೊಳಿಸಿ ದ್ವೇಷದ ಫಸಲು ಹುಲುಸಾಗಿ ಬೆಳೆಯಲು ಕಾರಣವಾಗಿವೆ. ■

ಗಡಿ ನುಸುಳಿದ ಸಾಲುಗಳು!

...ಡಿಯಾಚೆಯವನು ಗಾಯಗೊಂಡರೂ
...ಖಪಡುವೆ
...ನೆಯ ಸಮವಸ್ತ್ರ
...ಚೆದಲ್ಲಿ
...ಬ್ಬರೂ ಮನುಷ್ಯರೇ!
* *
...ಮಗೂ ಒಂದವಕಾಶಬೇಕು
...ಯುದ್ಧದ ವಿರುದ್ಧವೇ ಯುದ್ಧ ಸಾರಲು
...ಂದೂಕುಗಳನ್ನು ಕಿತ್ತೆಸೆದು
...ೂಗಳೂ ಗಾಯಗೊಳ್ಳದಂತೆ
...ಡಿಯಾಚೆಯವರೊಡನೆ ಆಟವಾಡಲು!
* *
...ತ್ತರಷ್ಟೇ ಅಲ್ಲ
... ದೇಹದಿಂದ
...ಹಜವಾಗಿ ಕೊಟ್ಟಿಕ್ಕುತ್ತಿರುವುದು-
...ಮ್ಮ ಸಿಟ್ಟು ತುತ್ತೂ..
...ಡದಿ ಮಕ್ಕಳ ಮುತ್ತೂ...
* *
...ಡಿಯೊಳಗಿನವರು ಇದುವರೆಗೂ ಕಂಡದ್ದು
...ಗು-
...ಡಿಯಾಚೆಯವರಷ್ಟೇ ನೋಡಿದ್ದು
...ದ ಎದೆಯನ್ನು!

ನಿಮಗೆ ಗೊತ್ತಿರಲಿಕ್ಕಿಲ್ಲ-
ಯೋಧನ ನೆತ್ತರನ್ನು
ಸಲೀಸಾಗಿ ಜೀರ್ಣಿಸಿಕೊಳ್ಳುವ ಈ ಮಣ್ಣು
ಅವನ ಕಂಬನಿ ಉದುರಿದಾಗ
ಕಂಪಿಸುತ್ತದೆ!
* * *
ಹಕ್ಕಿಯ ನೆರಳನ್ನೂ
ಹೊರಲಾರದಷ್ಟು
ಬಲಹೀನ ಈ ಬದುಕು..
ತೋಳು, ಸೊಂಟಗಳಲ್ಲಿ
ಇಳಿಯಬಿಟ್ಟಿದ್ದಾರೆ
ಹೆಣಭಾರ ಬಂದೂಕು!
* * *
ಯೋಧರನ್ನು ಪರಸ್ಪರ
ಹೊಡೆದಾಡಿಸಿ ಕೊಲ್ಲಿಸುವ
ನಾಯಕರು
ಎದುರುಬದುರಾದಾಗ
ಕೈಕುಲುಕಿ, ಆಲಂಗಿಸುವುದರ ಹಿಂದೆ
ಅದೆಷ್ಟು ಆತ್ಮವಂಚನೆ ಇರಬಹುದು!
* * *



ಎಚ್ಚರವಿರಬೇಕು ಮಾತನಾಡುವಾಗ
ಯುದ್ಧದ ವಿಚಾರದಲಿ...
ಹೆಚ್ಚೇನೂ ವ್ಯತ್ಯಾಸವಿಲ್ಲ
'ಬಂದೂಕು', 'ಬದುಕು'- ಉಚ್ಚಾರದಲಿ!
* * *
ಯೋಧ-
ಬೆನ್ನುಕೊಟ್ಟು ಹೋರಾಡಿದರೆ ಯುದ್ಧ
ತಿರುಗಿ ನಿಂತರೆ- ಬಂಡಾಯ!
* * *
ಈಗಂತೂ ತಿರುಗಿ ನಿಲ್ಲಲೇ ಬೇಕಾಗಿದೆ-
ಗಡಿಯಾಚೆಯವರಿಗೆ ಕಾಣಲು-
ಬೆನ್ನಹಿಂದಿರುವ
ಮಡದಿ ಮಕ್ಕಳ ಕಣ್ಣೀರು
ಗಡಿಯೊಳಗಿನವರಿಗೆ ಕಾಣಲು-
ನನ್ನೆದೆಯಿಂದ
ತೊಟ್ಟಿಕ್ಕುವ ನೆತ್ತರು!
* * *
ಗಡಿ ನುಸುಳಿದೆ
ಕವಿತೆ ಸಾಲು
ಶಾಂತಿಯುಸಿರುಸಿ...
[illegible]
[illegible]

■ [illegible]

ನೋಟು ರದ್ದತಿ, ಚುನಾವಣೆಗಳು ಮತ್ತು ಜಿಡಿ…



ಸುರೇಶ್ ಭಟ್ ಬಾಕ್ರಬೈಲ್

"ನಮಗೆ ದೇಶದ ರಾಜಕೀಯ ನಾಯಕನ ಸ್ಥಾನದಲ್ಲಿ ಒಬ್ಬ ಭಗವಂತ ಬೇಕಿಲ್ಲ... ಇನ್ನು ಮುಂದೆ ಇಂತಹ ದೇವರುಗಳು ಇರಬಾರದು. ಅಷ್ಟು ಮಾತ್ರವಲ್ಲ ಪ್ರಧಾನಿ ಹುದ್ದೆಗೆ ನಾವು ಕೊಟ್ಟಿರುವ ಅತಿಯಾದ ಮಹತ್ವವನ್ನು ಅಪಮೌಲ್ಯಗೊಳಿಸಲೇಬೇಕು."

- ವಾಜಪೇಯಿ ಸರ್ಕಾರದಲ್ಲಿ ಮಂತ್ರಿ ಆಗಿದ್ದ ಜಸ್ವಂತ್ ಸಿಂಗ್

ಇಂದಿರಾ ಗಾಂಧಿ, ವಾಜಪೇಯಿಗಳ ಅಧಿಕಾರಾವಧಿಯಲ್ಲಿ ನಡೆದಿರುವ ಪ್ರಮಾದಗಳಿಂದ ನಾವು ಪಾಠ ಕಲಿಯಲಿಲ್ಲ; ಭಾರತದಂತಹ ಮಹಾನ್ ರಾಷ್ಟ್ರವೊಂದನ್ನು ಅಗತ್ಯಕ್ಕಿಂತಲೂ ಹೆಚ್ಚು ಪ್ರಭಾವಶಾಲಿಯಾಗಿರುವ ಒಬ್ಬ ವ್ಯಕ್ತಿ ಮತ್ತು ಅವನ ಬುದ್ಧಿಯ ವಶಕ್ಕೆ ಒಪ್ಪಿಸಿದಲ್ಲಿ ಅದು ಸರ್ವಾಧಿಕಾರಕ್ಕೆ ತಿರುಗುವ ಸಾಧ್ಯತೆಗಳೆ ಹೆಚ್ಚು ಎಂಬುದನ್ನು ಅರಿತು ಕೊಳ್ಳಲಿಲ್ಲ, ಪರಿಣಾಮವಾಗಿ ಇತಿಹಾಸ ಮರುಕಳಿಸುತ್ತಿದೆ. ದೇಶದಲ್ಲಿ ಈಗಾಗಲೆ ಕಾಣಿಸಿಕೊಳ್ಳುತ್ತಿರುವ ಏಕವ್ಯಕ್ತಿ ಆಡಳಿತ, ವ್ಯಕ್ತಿಪೂಜೆ, ಅಸಹಿಷ್ಣುತೆ, ವಾಕ್‌ಸ್ವಾತಂತ್ರ್ಯದ ದಮನ ಮುಂತಾದವು ಸರ್ವಾಧಿಕಾರದ ಲಕ್ಷಣಗಳಲ್ಲದೆ ಬೇರೇನೂ ಅಲ್ಲ, 'ನಾಯಕ'ನ ನಡೆ, ನುಡಿ, ನೀತಿಗಳನ್ನು ಸರ್ಕಾರದ ಕ್ರಮಗಳನ್ನು ಟೀಕಿಸುವವರ ವಿರುದ್ಧ ಅಕ್ಷರ ದಾಳಿ ಅಥವಾ ದೈಹಿಕ ದಾಳಿ ನಡೆಸುವುದಕ್ಕಾಗಿ ಬ್ರಿಗೇಡುಗಳನ್ನು ಹುಟ್ಟುಹಾಕಲಾಗಿದೆ. ಇಂದು ಬೀದಿಬೀದಿಗಳಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ಬ್ರಿಗೇಡುಗಳ ಪುಂಡಾಟಿಕೆ ಮಿತಿಮೀರಿದೆ.

ನೋಟು ರದ್ದತಿ ಎಂಬ ಏಕವ್ಯಕ್ತಿ ನಿರ್ಧಾರ

ನೋಟು ರದ್ದತಿಯನ್ನು ಘೋಷಿಸಿದ ಮೋದಿ ಮುಂದಿನ ಒಳಿತಿಗಾಗಿ ಇಂದಿನ ಕಷ್ಟಗಳನ್ನು ಸಹಿಸಿಕೊಳ್ಳಬೇಕೆಂದು ಹೇಳಿದ್ದೇ ತಡ ಹೆಚ್ಚಿನ ಜನರೆಲ್ಲ ಗೋಣು ಹಾಕಿದರು! ಕಳೆದ ಶತಮಾನದಲ್ಲಿ ಜರ್ಮನಿ, ಇಟಲಿ, ರಷ್ಯಾಗಳ ಸರ್ವಾಧಿಕಾರಿಗಳು 'ಕೈಗಾರಿಕೀಕರಣಕ್ಕಾಗಿ, ಪಿತೃ ಅಥವಾ ಮಾತೃಭೂಮಿಯ ಹಿರಿಮೆಗಾಗಿ' ಶ್ರಮದಾನ ಮಾಡಿ ಎಂದು ಕರೆಕೊಟ್ಟಾಗ ಇದೇ ರೀತಿ ತಲೆಬಾಗಿಸಿದ್ದ ಜನ ನಂತರ ಬಲವಂತದ ಶ್ರಮದಾನಕ್ಕೆ ಒಳಗಾದ ಹಾಗೆ! ಜಿಹ್ವಾಪಟುತ್ವ ಎಂದರೆ ಇದು! ಇರಲಿ, ನವಂಬರ್ 8, 2016ರಂದು ಶುರುವಾದ ನೋಟು ರದ್ದತಿ ಕಾರ್ಯಕ್ರಮಕ್ಕೆ ನಾಲ್ಕು ತಿಂಗಳಾಯಿತು. "ಭ್ರಷ್ಟಾಚಾರ, ಭಯೋತ್ಪಾದನೆ, ಖೋಟಾನೋಟು" ಎಂಬ ಮೂರು ಆಪತ್ತುಗಳನ್ನು ಎದುರಿಸಲೆನ್ನಲಾದ ನೋಟು ರದ್ದತಿಯ ಪರಿಣಾಮವಾಗಿ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡ ದೇಶದ ಆರ್ಥಿಕ ವ್ಯವಸ್ಥೆ ಇನ್ನೂ ಯಥಾಸ್ಥಿತಿಗೆ ಮರಳಿಲ್ಲ, ಆರ್ಥಿಕತಜ್ಞರ ಅಭಿಪ್ರಾಯದಲ್ಲಿ ಅದಕ್ಕೆ ಕನಿಷ್ಠ ಇನ್ನೂ ಒಂದು ವರ್ಷವೇ ಬೇಕಾಗಬಹುದು. ಈ ಸಂದರ್ಭದಲ್ಲಿ ಅಂದು ಮೋದಿ ಏನೆಲ್ಲ ಹೇಳಿದ್ದ ಮತ್ತು ಇಂದು ಪರಿಸ್ಥಿತಿ ಹೇಗಿದೆ ಎಂದು ನೋಡಬೇಡವೆ?

(1) "ದೇಶವನ್ನು ಶುದ್ಧೀಕರಿಸುವ ಈ ಮಹಾನ್ ತ್ಯಾಗಕ್ಕೆ ನಿಮ್ಮ ಕೊಡುಗೆಯನ್ನೂ ನೀಡುವಂತೆ ನಿಮ್ಮನ್ನೆಲ್ಲ ಆಹ್ವಾನಿಸುತ್ತಿದ್ದೇನೆ. ದೀಪಾವಳಿ ಸಮಯದಲ್ಲಿ ನೀವು ನಿಮ್ಮ ಮನೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಲಿಲ್ಲವೇ, ಹಾಗೆ"

ಈ ಆಮಂತ್ರಣ ಬರೀ ಜನರನ್ನು ಮರುಳುಗೊಳಿಸುವ ಮಾತುಗಾರಿಕೆಯ ಭಾಗವಾಗಿತ್ತು, ಕಾರ್ಯತಃ "ಮಹಾನ್ ತ್ಯಾಗ"ಕ್ಕೆ ಜನರ ಕೊಡುಗೆ ಕಡ್ಡಾಯವಾಗಿತ್ತು! ಈ ವಿವೇಚನಾರಹಿತ, ಹುಚ್ಚು ನಿರ್ಧಾರಕ್ಕೆ ಜನ ಬಲವಂತದ ವಿಧೇಯತೆಯನ್ನು ತೋರಬೇಕಾಯಿತು.

(2) "ಈ ತಾತ್ಕಾಲಿಕ ಸಂಕಷ್ಟವನ್ನು ಮರೆಯೋಣ.... ಭವಿಷ್ಯದ ಪೀಳಿಗೆಗಳು ಘನತೆಯ ಬದುಕನ್ನು ಸಾಗಿಸುವಂತೆ ಮಾಡೋಣ."

ಪ್ರಾಣಗಳು, ನೌಕರಿಗಳು, ಜೀವನೋಪಾಯಗಳು ಕಳೆದುಹೋಗಿರುವುದು ತಾತ್ಕಾಲಿಕ ಸಂಕಷ್ಟವೆ? ನಾಲ್ಕು ತಿಂಗಳು ಕಳೆದರೂ ಈಗಲೂ ಎಲ್ಲಾ ಜನರಿಗೆ ಬೇಕಷ್ಟು ದುಡ್ಡು ಸಿಗುತ್ತಾ ಇಲ್ಲ, ಕೆಲವೆಡೆ ಈಗಲೂ ಎಟಿಎಂಗಳಲ್ಲಿ ನಗದು ಸಿಗುತ್ತಿಲ್ಲ, ಸರ್ಕಾರ ಇದಕ್ಕೀಗ ಓವರ್‌ಡ್ರಾ ಎಂಬ ವಿನೂತನ ಹಾಗೂ ಅತ್ಯದ್ಭುತ ನೆಪವೊಂದನ್ನು ಮುಂದಿಡುತ್ತಿದೆ: ಏನೆಂದರೆ ಕೆಲವರು ಅಗತ್ಯಕ್ಕಿಂತ ಹೆಚ್ಚು ಹಣವನ್ನು ಬ್ಯಾಂಕುಗಳಿಂದ ತೆಗೆದು ಮನೆಯಲ್ಲಿ ಇಟ್ಟುಕೊಳ್ಳುತ್ತಿದ್ದಾರಂತೆ! ಇನ್ನು "ಭವಿಷ್ಯದ ಪೀಳಿಗೆ" ಎನ್ನುವುದು ಬಹುದೂರದ ಮಾತಾಯ್ತು, ಪ್ರಸಕ್ತ ಪೀಳಿಗೆಗೆ ಘನತೆಯ ಬಾಳ್ವೆ ಬೇಡವೆ?

(2) "ಈ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯ ಹಬ್ಬಕ್ಕೆ ಸೇರಿಕೊಳ್ಳೋಣ."



ಚಿತ್ರ ಕೃಪೆ: ಸತೀಶ್ ಆಚಾರ್ಯ

100ಕ್ಕೂ ಅಧಿಕ ಜನ ಸಾವನ್ನಪ್ಪಿರುವುದು ಯಾವ ಹಬ್ಬ? ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆ ಎನ್ನುವುದು ಎರಡೂ ಕಡೆಗಳಿಗೆ ಅನ್ವಯಿಸುವ ಮೌಲ್ಯಗಳಾಗಿವೆ. ಆದರೆ ಆಳುವವರಲ್ಲಿ, ಉಳ್ಳವರಲ್ಲಿ ಅವೆರಡರ ಗೈರುಹಾಜರಿ ಎದ್ದುಕಾಣುತ್ತಿದೆ.

(3) "ಕಪ್ಪುಹಣ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಡೋಣ."

ಅಮಾನ್ಯಗೊಳಿಸಿದ ದುಡ್ಡಿನ ಶೇಕಡಾ 97ರಷ್ಟು ಅಥವಾ ಅದಕ್ಕೂ ಜಾಸ್ತಿ ಮೊತ್ತ ಮರಳಿಬಂದಿದೆ. ಹಾಗಾದರೆ ಕಪ್ಪುಹಣ ಎಲ್ಲೋಯ್ತು? ಇನ್ನು ಭ್ರಷ್ಟಾಚಾರದ ಭೂತವೂ ಇಲ್ಲೇ ಇದೆ, ಅದೆಲ್ಲೂ ಓಡಿಹೋಗಿಲ್ಲ, ಐಟಿ ದಾಳಿಗಳು ಯಾರನ್ನು ಗುರಿಯಾಗಿಸಿವೆ ಎಂಬುದನ್ನು ಗಮನಿಸಿದರೆ ಈ "ಹೋರಾಟ" ಬಿಜೆಪಿಯೇತರ ಪಕ್ಷಗಳ ವಿರುದ್ಧವಿರುವಂತೆ ತೋರುತ್ತಿಲ್ಲವೆ?

(4) "ರಾಷ್ಟ್ರದ ಸಂಪತ್ತು ಬಡವರ ಫಾಯಿದೆಗಾಗಿ ಬಳಕೆಯಾಗುವುದನ್ನು ಖಚಿತಪಡಿಸೋಣ."

ಸಾವಿರಾರು ಸಣ್ಣ, ಮಧ್ಯಮ ಕೈಗಾರಿಕೆಗಳನ್ನು ಮುಚ್ಚಿಸಿ ಕಾರ್ಮಿಕರನ್ನು ಬೀದಿಗೆ ಬೀಳಿಸುವುದು ಫಾಯಿದೆಯೆ? ರೈತರು ತಮ್ಮ ಉತ್ಪನ್ನಗಳನ್ನು ಅತಿ ಅಗ್ಗ ಬೆಲೆಗೆ ಮಾರುವಂತೆ ಮಾಡಿ ಅವರ ಪ್ರಾಣ ಹಿಂಡುತ್ತಿರುವುದು ಫಾಯಿದೆಯೆ? ಕಾರ್ಪೊರೇಟು ಕುಳಗಳಿಗೆ ನೀಡುವ ನಾನಾ ವಿನಾಯಿತಿ, ರಿಯಾಯಿತಿಗಳನ್ನು ನಿಲ್ಲಿಸಿ ಸಾಲ ಮರುಪಾವತಿಯನ್ನು ಖಚಿತಪಡಿಸಿದಾಗ, ಬಡವರ ದಮನಿತರ ಕಲ್ಯಾಣ ಯೋಜನೆಗಳಲ್ಲಿ ಕಡಿತ ಮಾಡದಾಗ ರಾಷ್ಟ್ರದ ಸಂಪತ್ತು ಬಡವರ ಫಾಯಿದೆಗಾಗಿ ಬಳಕೆಯಾಗುವ ದಿಕ್ಕಿನಲ್ಲಿದೆ ಎನ್ನಬಹುದು.

(5) "ನನಗೆ ಭಾರತದ 125 ಕೋಟಿ ಜನರಲ್ಲಿ ನಂಬಿಕೆ ಇದೆ. ದೇಶ ಯಶಸ್ವಿಯಾಗುವ ಬಗ್ಗೆ ವಿಶ್ವಾಸ ಇದೆ."

ಸಿನಿಮಾ ಹೀರೋಗಳನ್ನು ದೈವತ್ವಕ್ಕೇರಿಸುವುದು ಭಾರತೀಯರ ದೌರ್ಬಲ್ಯ ಎನ್ನುವುದನ್ನು ಅರಿತ ಇಂಥಾ ಕೆಲವು ಮಹಾಚತುರ ರಾಜಕಾರಣಿಗಳು ಅದೇ ಹೀರೋ ಶೈಲಿಯಲ್ಲಿ ಡಯಲಾಗ್ ಹೊಡೆಯುವಾಗ ಜನ ಕಣ್ಣುಬಾಯಿ ಬಿಟ್ಟು ಕೇಳುತ್ತಾ ಅವರ ಹೇಳಿಕೆಗಳೆಲ್ಲ ಸತ್ಯವೆಂದು ನಂಬುತ್ತಿರುವುದನ್ನು ನಂಬಲಾಗುತ್ತಿಲ್ಲ, ನಟಸಾರ್ವಭೌಮ ಹೇಳುವ ಹಾಗೆ ದೇಶ ಯಶಸ್ವಿಯಾಗಲಿದೆ, ಆದರೆ ಯಾವುದರಲ್ಲಿ? ಆರ್ಥಿಕ ಹಿಂಜರಿಕೆಯಲ್ಲಿ, ಹಣದುಬ್ಬರದಲ್ಲಿ, ಬೆಲೆ ಏರಿಕೆಯಲ್ಲಿ, ಭಾರತವನ್ನು ಧರ್ಮಾಧರಿತ ರಾಷ್ಟ್ರವಾಗಿ ಪರಿವರ್ತಿಸುವುದರಲ್ಲಿ.

ನೋಟು ರದ್ದತಿ ಮತ್ತು ಜಿಡಿಪಿ

ನೋಟು ರದ್ದತಿಯ ದುಷ್ಪರಿಣಾಮಗಳಿಂದಾಗಿ ಚುನಾವಣೆಗಳಲ್ಲಿ ಸೋಲಿನ ಭೀತಿ ಎದುರಿಸುತ್ತಿರುವವರು ಈಗ ಅಂಕಿಅಂಶಗಳನ್ನು ತಿದ್ದುವ ಕೆಲಸಕ್ಕೂ ಕೈಹಾಕಿರುವಂತಿದೆ. ಇದೇ ಫೆಬ್ರವರಿ 28ರಂದು ಕೇಂದ್ರ ಅಂಕಿಅಂಶಗಳ ಸಂಸ್ಥೆ (ಸಿಎಸ್‌ಒ) ದೇಶದ ಆರ್ಥಿಕ ಪರಿಸ್ಥಿತಿ ಕುರಿತು ಪ್ರಕಟಿಸಿರುವ ಮಾಹಿತಿಗಳು ಹುಬ್ಬೇರಿಸುವಂತಿವೆ. 2016-17ರ ತೃತೀಯ ಪಾದದಲ್ಲಿ (2016ರ ಅಕ್ಟೋಬರ್‌ನಿಂದ ಡಿಸೆಂಬರ್ ತನಕ) ಖಾಸಗಿ ಉಪಭೋಗದ (private consumption) ವೆಚ್ಚ ದ್ವಿತೀಯ ಪಾದಕ್ಕಿಂತ ಎರಡು ಪಟ್ಟು ಹೆಚ್ಚಾಗಿ ಶೇಕಡಾ 10.1 ಆಗಿದೆಯಂತೆ. ಅದರ ಪೂರ್ವಭಾವಿ ಅಂದಾಜಿನಂತೆ ತೃತೀಯ ಪಾದದಲ್ಲಿ ಜಿಡಿಪಿ 7% ಆಗಲಿದೆಯಂತೆ. 2016-17ರ ಇಡೀ ವರ್ಷದಲ್ಲಿ ಅದು 7.1% ಆಗಲಿದೆಯಂತೆ. ಪ್ರಶ್ನೆ ಏನೆಂದರೆ ಬಿಜೆಪಿಯ ಅಳಿವುಉಳಿವುಗಳನ್ನು ನಿರ್ಧರಿಸಲಿರುವ ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಲ್ಲಿನ ಚುನಾವಣೆಗಳ ಸಂದರ್ಭದಲ್ಲೆ ಈ ಅಂಕಿಅಂಶಗಳು ಹೊರಬಿದ್ದಿರುವುದು ಕಾಕತಾಳೀಯವೆ? ಇದು ರೋಗಿ ಆದೇಶಿಸಿದ್ದೂ ಹಾಲು, ವೈದ್ಯ ಕೊಟ್ಟಿದ್ದೂ ಹಾಲು ಎಂಬಂತಿದೆಯೆ? ಸಿಎಸ್‌ಒ ಅಂದಾಜು ಸಾರಾಂಶದಲ್ಲಿ ಹೇಳುವುದೇನೆಂದರೆ ನೋಟುರದ್ದತಿಯಿಂದ ಜಿಡಿಪಿ ಮೇಲೆ ಹೆಚ್ಚುಕಡಿಮೆ ಶೂನ್ಯ ಪರಿಣಾಮ ಆಗಿದೆ. ಇದೀಗ ಮೋದಿ ಕೈಲಿ ದೊಡ್ಡ ಅಸ್ತ್ರವಾಗಿ ಪರಿಣಮಿಸಿದೆ. ತನ್ನ ಚುನಾವಣಾ ಪ್ರಚಾರದಲ್ಲಿ ಇದುವರೆಗೆ ನೋಟು ರದ್ದತಿ ಬಗ್ಗೆ ಚಕಾರವೆತ್ತದ ಮೋದಿ ಈಗ ನೋಟು ರದ್ದತಿಯಿಂದ ದೇಶದ ಪ್ರಗತಿಯ ಮೇಲೆ ಯಾವುದೇ ದುಷ್ಪರಿಣಾಮ ಆಗಿಲ್ಲ, ಆರ್ಥಿಕ ವ್ಯವಸ್ಥೆ ಸದೃಢವಾಗಿದೆ ಎಂದು ಟಾಂಟಾಂ ಮಾಡಲಾರಂಭಿಸಿದ್ದಾನೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಕಲಿತ ಅರ್ಥಶಾಸ್ತ್ರಜ್ಞರನ್ನು ಮೂದಲಿಸುವ ಮಟ್ಟಕ್ಕೂ ಹೋಗಿದ್ದಾನೆ. ಪಕ್ಷಾಧ್ಯಕ್ಷ ಅಮಿತ್ ಶಾ, ವಿತ್ತಸಚಿವ ಜೇಟ್ಲಿ, ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಮುಂತಾದವರೂ ದೇಶದ ಆರ್ಥಿಕ ಪರಿಸ್ಥಿತಿ ಸರಿಹೋಗಿದೆ ಎಂದು ಹೇಳುತ್ತಿದ್ದಾರೆ. ಇವರ ಮಾತುಗಳನ್ನು ಕೇಳಿದರೆ ನೋಟು ರದ್ದತಿಯ ಸಂಕಷ್ಟಗಳೆಲ್ಲ ಜನರ ಕಲ್ಪನಾವಿಹಾರವೆಂದು ಭಾವಿಸಬೇಕು!

ಸಿಎಸ್‌ಒ ಅಂಕಿಅಂಶಗಳ ಒಳಗುಟ್ಟೇನಿರಬಹುದು?

ನೋಟುರದ್ದತಿಯಿಂದ ಆರ್ಥಿಕ ಬೆಳವಣಿಗೆಗೆ ಏನೂ ತೊಂದರೆ ಯಾಗಿಲ್ಲ ಎಂಬರ್ಥ ನೀಡುವ ಈ ಅಂಕಿಅಂಶಗಳನ್ನು ನಂಬಬಹುದೇ? ಇಲ್ಲಿ ಕೆಲವೊಂದು ವಿಷಯಗಳನ್ನು ಗಮನಿಸಬೇಕಾಗಿದೆ.

1) ಅಂದಾಜುಗಳನ್ನು ತಯಾರಿಸುವಾಗ ನಗದು ವಹಿವಾಟೇ ಜಾಸ್ತಿ ಇರುವ ಅನೌಪಚಾರಿಕ ಮತ್ತಿತರ ವಲಯಗಳ ದತ್ತಾಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿಲ್ಲ, ಭಾರತದಲ್ಲಿರುವ ಒಟ್ಟು ಕಾರ್ಮಿಕರ ಪೈಕಿ ಸುಮಾರು ಶೇಕಡಾ 75ರಷ್ಟು ಅನೌಪಚಾರಿಕ ವಲಯದಲ್ಲಿ ದುಡಿಯುತ್ತಾರೆ. ಜಿಡಿಪಿಯ ಸುಮಾರು ಶೇಕಡಾ 40ರಷ್ಟು ಅನೌಪಚಾರಿಕ ಕ್ಷೇತ್ರದಿಂದ ಬರುತ್ತದೆ.

2) ಜಿಡಿಪಿ ದರ ನಿರ್ಣಯಿಸಲು ಎರಡು ವಿಧಾ… ಉಪಭೋಗದ ವಿಧಾನದಲ್ಲಿ ಖಾಸಗಿ ಉಪಭೋಗ… ಉಪಭೋಗ, ಹೂಡಿಕೆ ಮತ್ತು ನಿವ್ವಳ ರಫ್ತುಗಳನ್ನು (… – ರಫ್ತು) ಒಟ್ಟು ಸೇರಿಸಿ ಜಿಡಿಪಿಯನ್ನು ಲೆಕ್ಕ ಹಾಕಲಾ… ಈ ವಿಧಾನದಲ್ಲಿ ಖಾಸಗಿ ಉಪಭೋಗದ ಪ್ರಮ… ಹೆಚ್ಚಿರುತ್ತದೆ. ಸಿಎಸ್‌ಒ ಪ್ರಕಾರ ತೃತೀಯ ಪಾ… ಖಾಸಗಿ ಉಪಭೋಗದ ವೆಚ್ಚ ಏರಿಕೆಯಾಗಿ … 10.1ಕ್ಕೆ ತಲುಪಿದೆ. ನೆನಪಿರಲಿ, ಇದು ಆಗಿರುವುದು … ರದ್ದತಿಯ ಕಾಲದಲ್ಲಿ, ಅಂದರೆ ಶೇಕಡಾ 86ರಷ್ಟು … ಚಲಾವಣೆಯಿಂದ ಹಿಂತೆಗೆದ ಕಾಲದಲ್ಲಿ, ಗಮನಿಸಬೇ… ಅಂಶ ಏನೆಂದರೆ ಇಂತಹ ಅಂದಾಜುಗಳನ್ನು ತಯಾರಿ… ಉಪಭೋಗದ ಅಂಕಿಅಂಶ ಲಭ್ಯವಿರುವುದಿಲ್ಲ, … ಗೃಹಬಳಕೆ ವಸ್ತುಗಳ ಉತ್ಪಾದನೆ ಮೇರೆಗೆ ಅಂ… ಲಾಗುತ್ತದೆ. ಸರಕು ಉತ್ಪಾದನಾ ಸಂಸ್ಥೆಗಳು ಕೊ… ವರದಿಗಳ ಪ್ರಕಾರ ತೃತೀಯ ಪಾದದಲ್ಲಿ ಸರಕುಗಳ ಮ… ಕಡಿಮೆಯಾಗಿದೆ; ಜನ ಜಾಗರೂಕತೆಯಿಂದ … ಮಾಡುತ್ತಿದ್ದಾರೆ. ಇದಕ್ಕೆ ಪೂರಕವಾಗಿ ನವಂಬರ್ … ಡಿಸೆಂಬರ್ ಕೊನೆಯ ವಾರದತನಕ ಆಹಾರೇತರ ವ… ಗಾಗಿ ಬ್ಯಾಂಕು ಸಾಲಗಳ ಪ್ರಮಾಣವೂ ಕಡಿಮೆಯ… ಇಂಥಾ ಪರಿಸ್ಥಿತಿಯಲ್ಲಿ ಖಾಸಗಿ ಉಪಭೋಗ ಹೆ… ವುದು ತುಂಬಾ ತುಂಬಾ ಕುತೂಹಲಕಾರಿಯಾಗಿದೆ. … 2011ರ ನಂತರದಲ್ಲಿ ಖಾಸಗಿ ಉಪಭೋಗ ಇಷ್ಟು… ವೇಗವಾಗಿ ಬೆಳೆದಿರುವುದು ಇದೇ ಮೊದಲ… ಚಲಾವಣೆಯಲ್ಲಿರುವ ನಗದಿನ ಪ್ರಮಾಣದಲ್ಲಿ ಭಾರಿ … ಆಗಿದ್ದ ಕಾಲದಲ್ಲಿ ಹೀಗಾಗಿರುವುದು ನಂಬಲಸಾಧ್ಯ… ಏಕೆಂದರೆ ಭಾರತದಲ್ಲಿ ಶೇಕಡಾ 78ರಿಂದ 9… ವಹಿವಾಟುಗಳು ನಗದು ರೂಪದಲ್ಲಿ ನಡೆಯ… ಉಪಭೋಗದಲ್ಲಿ ಹೆಚ್ಚಳಕ್ಕೆ ವಿವಿಧ ಸಾಧ್ಯತೆ… ಅವುಗಳನ್ನು ಒಂದೊಂದಾಗಿ ಪರಿಶೀಲಿಸೋಣ.

ಸರಕುಗಳನ್ನು ಕೇವಲ ಕಂಪೆನಿ ಗೋದಾಮು… ವಿತರಕರ ಗೋದಾಮುಗಳಿಗೆ ವರ್ಗಾಯಿಸಲಾಗಿದ… ಬಳಕೆದಾರರು ಖರೀದಿಸಿಲ್ಲವಾದರೂ ಇದನ್ನೇ ಉಪ… ವೆಂದು ಪರಿಗಣಿಸಲಾಗಿದೆ.

ಜನ ಸಾಲ ಎತ್ತಿರಬಹುದೇ? ಆದರೆ ಬ್ಯಾಂ… ವಿತರಿಸಿದ ಚಿಲ್ಲರೆ ಸಾಲಗಳ ಪ್ರಮಾಣ ಏಕಪ್ರಕಾರ… (0.5%). ಅಷ್ಟು ಮಾತ್ರವಲ್ಲ ಕಳೆದ 5 ವರ್ಷಗಳ… ಯಲ್ಲಿ ಆಗಿರುವ ಅತ್ಯಂತ ನಿಧಾನ ಬೆಳವಣಿಗೆ ಇದ…

ಜನ ಚಿನ್ನ ಖರೀದಿಸಿರಬಹುದೇ? ಆದ… ಪಾದದಲ್ಲಿ ಚಿನ್ನದ ಆಮದು ಹೆಚ್ಚಾಗುವ ಬದಲು … ವರ್ಷಕ್ಕಿಂತ ಕಡಿಮೆಯಾಗಿದೆ.

ಐಫೋನ್ ಮಾರಾಟದಲ್ಲೂ ಹೆಚ್ಚಳವಾಗಿಲ್ಲ…

ಗೃಹಬಳಕೆಯ ವಸ್ತುಗಳನ್ನು ಉತ್ಪಾದಿಸುವ ಸ… ಮಾರಾಟವೂ ಕಡಿಮೆ ಆಗಿದೆ.

ಉತ್ಪಾದನೆಯ ಅಂದಾಜುಗಳು ಪ್ರಶ್ನಾರ್ಹವಿ… ಅದನ್ನು ಆಧರಿಸಿ ತಯಾರಿಸಲಾಗುವ ಉಪಭೋ… ಅಂದಾಜುಗಳೂ ಪ್ರಶ್ನಾರ್ಹವಾಗುತ್ತವೆ. ಇ… ಪರಿಗಣಿಸಿದಾಗ ಖಾಸಗಿ ಉಪಭೋಗದಲ್ಲಿ ಹ… ಸಿದ್ಧಾಂತವನ್ನು ನಂಬಲು ಕಷ್ಟವಿದೆ. ಖಾಸಗಿ ಉಪಭೋ… ಹೆಚ್ಚಳ ಆಗದಿರುವಾಗ ಜಿಡಿಪಿ ದರ ಹೆಚ್ಚಾಗುವುದ… ಹೇಗೆ? ಆದುದರಿಂದಲೆ ವಾಸ್ತವಕ್ಕೆ ದೂರವಾಗಿರು… ಸಿಎಸ್‌ಒ ಅಂಕಿಅಂಶಗಳು ನಂಬಲರ್ಹವಲ್ಲ.

ಕೈಗಾರಿಕಾ ಉತ್ಪಾದನೆ

ಕೈಗಾರಿಕಾ ಉತ್ಪಾದನೆ ಶೇಕಡಾ 10.3ರ… (ಪ್ರಚಲಿತ ಬೆಲೆಗಳಲ್ಲಿ) ಬೆಳೆದಿದೆ ಎಂದು … ಹೇಳುತ್ತಿದೆ. ಅದು ಈ ಅಂದಾಜಿಗೆ ಬಂದಿರುವುದು … ವಾಸ್ತವವಾಗಿ ಸಿಎಸ್‌ಒ ಇಂದು ಉತ್ಪಾದನೆಯ ಜಿಡಿ… ಅಳೆಯಲು ಹೊಸ ವಿಧಾನವೊಂದನ್ನು ಬಳಸುತ್ತ… ಜಿಡಿಪಿಯನ್ನು ಹಿಂದೆ ಕೈಗಾರಿಕಾ ಉತ್ಪಾದನೆಯ ಸೂ… (Index of Industrial Production, … ಆಧಾರದ ಮೇಲೆ ಲೆಕ್ಕ ಹಾಕುತ್ತಿದ್ದರೆ ಈಗ … ಲೆಕ್ಕಾಚಾರಗಳು ಕಂಪೆನಿ ವ್ಯವಹಾರಗಳ ಸಚಿ… ನೀಡುವ ದತ್ತಾಂಶಗಳನ್ನು ಆಧರಿಸಿವೆ. ಈ ದತ್ತಾ… ಕೇವಲ ಶೇರು ಮಾರುಕಟ್ಟೆಯಲ್ಲಿ ದಾಖಲಿ… ಸಂಸ್ಥೆಗಳಿಗಷ್ಟೆ ಸೀಮಿತವಾಗಿವೆ. ಇದರರ್ಥ … ಲೆಕ್ಕಾಚಾರದಲ್ಲಿ ಶೇರು ಮಾರುಕಟ್ಟೆಯ ಪಟ್ಟಿ… ಸಂಸ್ಥೆಗಳು, ಅನೌಪಚಾರಿಕ ವಲಯದ ಸಂಸ್ಥೆಗಳು … ನೋಂದಾಯಿತವಾಗದ ಸಂಸ್ಥೆಗಳ ದತ್ತಾಂಶ… ಪರಿಗಣಿಸಲಾಗಿಲ್ಲ, ನೋಟು ರದ್ದತಿಯ ನೇರ ಫ… ವಾಗಿ ಈ ವಲಯಗಳಲ್ಲಿರುವ ಅನೇಕ ಸಂಸ್ಥೆಗಳು … ಹಾಕಿವೆ. ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊ… ಸಾಲದುದಕ್ಕೆ ಕಂಪೆನಿಗಳ ತೃತೀಯ ಪಾದದ ಫಲಿತ…

ಸರ್ಕಾರಿ ಅಂಕಿಅಂಶಗಳಿಗೆ ವಿರುದ್ಧವಿರುವಂತೆ . ಶೇರು ಮಾರುಕಟ್ಟೆಯ ದತ್ತಾಂಶಗಳ ಪ್ರಕಾರ ಪಾದದಲ್ಲಿ 4220 ಸಂಸ್ಥೆಗಳ ಮಾರಾಟದಲ್ಲಿ 5.74 ಪ್ರತಿಶತ ಏರಿಕೆಯಾಗಿದೆ. 2016ರ ಕೊನೆಯಲ್ಲಿ ಕೈಗಾರಿಕಾ ವಲಯಕ್ಕೆ ಬ್ಯಾಂಕುಗಳು ನ ಸಾಲದ ಪ್ರಮಾಣ ಶೇಕಡಾ 4.3ರಷ್ಟು ಯಾಗಿದೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಸೆಂಬರ್‌ಗಿಂತ ಶೇಕಡಾ 0.4ರಷ್ಟು ಕಡಿಮೆಯಾಗಿದೆ. ಉತ್ಪಾದನೆಯ ಸೂಚ್ಯಂಕದ ಆಧಾರದಲ್ಲಿ ಾಗ ಈ ಬಾರಿಯ ತೃತೀಯ ಪಾದದಲ್ಲಿ ಉತ್ಪಾದನೆ ಆಗಿರುವ 0.2% ಹೆಚ್ಚಳ ತೀರ ನಗಣ್ಯವಿದೆ. ಿ ಸಿಎಸ್‌ಒ ಹೇಳುತ್ತಿರುವ ಶೇಕಡಾ 10.3ರ ಲ್ಲಿಂದ ಬಂದಿದೆ, ಹೇಗೆ ಬಂದಿದೆ??!!

ಕೃಷಿ ಉತ್ಪಾದನೆ

ಡಾ 4.4ರ ಪ್ರಗತಿ ಕಂಡಿರುವ ಕೃಷಿ ಉತ್ಪಾದನೆ ರಷ್ಟು ಪ್ರಮಾಣದಲ್ಲಿ ಹೆಚ್ಚಾಗಿಲ್ಲ.

ಹೂಡಿಕೆ

ಸ್‌ಒ ನೀಡಿರುವ ಹೂಡಿಕೆ ಅಂಕಿಅಂಶಗಳು ವಿಸ್ಮಯ ಮೂಡಿಸುತ್ತವೆ. ಅದು ಹೇಳುವಂತೆ ರ್ಷದ ಮಧ್ಯಭಾಗದಿಂದ ಇಳಿಮುಖವಾಗಿದ್ದ ರ ಬಂಡವಾಳ ರಚನೆ ತೃತೀಯ ಪಾದದ ಹೊತ್ತಿಗೆ ೀಲ್ಮುಖವಾಗಿ ಶೇಕಡಾ 3.5 ಆಗಿದೆಯಂತೆ! ೈಗಾರಿಕಾ ಉತ್ಪಾದನೆಯ ಸೂಚ್ಯಂಕದ ಪ್ರಕಾರ ಾ ವಸ್ತುಗಳ ಉತ್ಪಾದನೆಯಲ್ಲಿ ಶೇಕಡಾ 7.8 ಾಗಿದೆ. ಇಂಥಾ ಸನ್ನಿವೇಶದಲ್ಲಿ ಹೂಡಿಕೆ ವುದು ಹೇಗೆ?

ಮವಾಗಿ ಸಿಎಸ್‌ಒ ಕೊಟ್ಟಿರುವ ಉತ್ಪ್ರೇಕ್ಷಿತ ದೋಷಪೂರಿತ ಅಂಕಿಅಂಶಗಳ ಹಿಂದೆ ಈ ಾರಣಗಳಿರುವಂತಿದೆ.

ಪೂರ್ವಭಾವಿ ಅಂದಾಜಿನ ನಂತರ ಬರುವ ಅಂದಾಜಿನ ಆಧಾರದಲ್ಲಿ ಮುಂದಿನ ಪೂರ್ವಭಾವಿ ನ್ನು ತಯಾರಿಸಲಾಗುತ್ತದೆ. ಹೀಗಾಗಿ ಈ ಪರಿಷ್ಕೃತ ಂಗಳನ್ನು ಕಡಿಮೆ ಮಾಡಿದಷ್ಟೂ ಅನುಕೂಲ ಆಗ ಮುಂದಿನ ಪೂರ್ವಭಾವಿ ಅಂದಾಜುಗಳಲ್ಲಿ ಗತಿ ತೋರಿಸಲು ಸಾಧ್ಯವಾಗುತ್ತದಲ್ಲವೆ! ಸದ್ಯ ದೂ ಇದೇ: ಅತ್ತ 2015-16ರ ತೃತೀಯ ರಿಷತ ಜಿಡಿಪಿ ಅಂದಾಜನ್ನು ರೂ. 28,30,760 ಇಳಿಸಲಾಗಿದೆ. ಇತ್ತ 2016-17ರ ಜಿಡಿಪಿ 27,893 ಕೋಟಿ ಎಂದು ಅಂದಾಜಿಸಲಾಗಿದೆ. 6ರ ಈ ಹೊಸಾ ಅಂಕಿಅಂಶವನ್ನು ಆಧರಿಸಿ 7ರ ತೃತೀಯ ಪಾದದ ಜಿಡಿಪಿಯಲ್ಲಿ ಶೇಕಡಾ ಳವಾಗಿದೆ ಎಂದು ಲೆಕ್ಕ ಹಾಕಲಾಗಿದೆ! 893 – 28,30,760]/28,30,760)

ಉತ್ಪಾದಕರು ಸರಕುಗಳನ್ನು ವಿತರಕರಿಗೆ, ಸಗಟು ಳಿಗೆ ಮಾರಿ ಅವರಿಂದ ರದ್ದಾದ ನೋಟುಗಳನ್ನು ಂದಿಗಿಂತ ಹೆಚ್ಚು ತೆರಿಗೆ ಕಟ್ಟಿದ್ದಾರೆ. ಈ ಮೂಲಕ ತೆರಿಗೆ ಪ್ರಮಾಣದಲ್ಲಿ ಹೆಚ್ಚಳವಾಗಿರಬಹುದು.


ಡಿ, ನೋಟುರದ್ದತಿಯಿಂದ ಅತ್ಯಧಿಕ ಸಂಕಷ್ಟಕ್ಕೀ ನೌಪಚಾರಿಕ ಕ್ಷೇತ್ರ, ಶೇರು ಮಾರುಕಟ್ಟೆಯ ೊರದ ಸಂಸ್ಥೆಗಳು, ದಾಖಲಿತವಾಗದ ಸಂಸ್ಥೆಗಳು, ಮತ್ತು ಸಣ್ಣ ಸಂಸ್ಥೆಗಳ ಅಂಕಿಅಂಶಗಳು ಇನ್ನು ಬೇಕಷ್ಟೆ. ವಾಸ್ತವದಲ್ಲಿ ಇವೆಲ್ಲವನ್ನು ಪರಿಗಣಿಸಿ ಿ ಜಿಡಿಪಿ ಕೇವಲ ಶೇಕಡಾ 2 ಆಗಬಹುದಷ್ಟೆ!

ದಿ ಸರ್ಕಾರ ಅಧಿಕಾರದಲ್ಲಿ ಉಳಿಯುವುದಕ್ಕಾಗಿ ಡಲೂ ಹೇಸದು ಎಂಬುದಕ್ಕೆ ಬೇರೆ ನಿದರ್ಶನ ■

ಲಂಕೇಶರಿಗೆ ಅಭಿಮಾನಿಯೊಬ್ಬರ ಪತ್ರ

ದೀಪಕ್ ಕಲ್ಕೆರೆ ಪಿ.ಲಂಕೇಶರ ಅಪ್ಪಟ ಅಭಿಮಾನಿ. ಲಂಕೇಶರ 82ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ಲಂಕೇಶರ ಬಗೆಗಿನ ತಮ್ಮ ಅಭಿಪ್ರಾಯಗಳನ್ನು ಮತ್ತು ನೆನಪುಗಳನ್ನು, ಅದರ ಜೊತೆಜೊತೆಗೆ ಲಂಕೇಶರಿಗೆ ಒಂದು ಪತ್ರವನ್ನೂ ಬರೆದು ಫೇಸ್‌ಬುಕ್‌ನಲ್ಲಿ ಹಾಕಿದ್ದಾರೆ. ಅವೆರಡನ್ನು ಇಲ್ಲಿ ನಮ್ಮ ಓದುಗರಿಗಾಗಿ ನೀಡುತ್ತಿದ್ದೇವೆ.

"ಪಿ.ಲಂಕೇಶ್ ನಾಡು ಕಂಡ ಬಹುಮುಖಿ ದೈತ್ಯ ಪ್ರತಿಭೆ. ಅವರು ಎಲ್ಲವನ್ನೂ ಅನುಮಾನದ ಚಿಕಿತ್ಸಕ ದೃಷ್ಟಿಯಿಂದ ನೋಡುತ್ತಿದ್ದರು. ತಾನು ಬರೆಯುವುದು ಕೂಡ ಹೊಟ್ಟೆಪಾಡಿಗಾಗಿ; ಆದರ್ಶಗಳಿಗಾಗಿ ಅಂದರೆ ಆತ್ಮವಂಚನೆ ಆಗುತ್ತದೆ ಎನ್ನುವುದು ಅವರ ನಿಲುವಾಗಿತ್ತು.



ಆದ್ದರಿಂದ ಯಾವುದೇ ಹೋರಾಟಗಳನ್ನು ಅನುಮಾನಿಸುತ್ತಿದ್ದರು. ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ವಿಷಯಗಳಲ್ಲಿ ಸ್ಪಷ್ಟತೆ, ನಿಖರತೆ ಇತ್ತು ಮತ್ತು ತಮ್ಮ ತಾತ್ವಿಕ, ಸೈದ್ಧಾಂತಿಕ ನಿಲುವುಗಳಿಗೆ ಬದ್ಧರಾಗಿದ್ದರು. ಎಂದಿಗೂ ರಾಜಿಯಾದವರಲ್ಲ.

ಲಂಕೇಶ್ ಅಂಕಲ್ (ನಾನು ಅವರನ್ನು ಸಂಬೋಧಿಸುತ್ತಿದ್ದದ್ದು ಹಾಗೆ) ಕುರಿತು ಅದೆಷ್ಟೋ ಜನ ಬರೆದಿದ್ದಾರೆ. ನಾನು ಅವರ ಬಗ್ಗೆ ಬರೆಯುವಷ್ಟು ಶಕ್ತನಲ್ಲ.

25 ಜನವರಿ 2000 ಕೆಟ್ಟ ದಿನ... ಲಂಕೇಶ್ ಅಂಕಲ್ ವಿದಾಯದ ಸುದ್ದಿ ರೇಡಿಯೊದಲ್ಲಿ ಪ್ರಸಾರವಾಗುತ್ತಿತ್ತು. ಮಾರನೆದಿನ ಅಂದರೆ ತಾರೀಖು 26 ರಂದು ಬೆಂಗಳೂರು ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಸಮೀಪದ ಪಿಳ್ಳಗಾನಹಳ್ಳಿಯ ಅವರ ತೋಟದಲ್ಲಿ ಅವರಿಗೆ ಅಂತಿಮ ವಿದಾಯ ಹೇಳಬೇಕಾಗಿದೆ ಎಂದು ತಿಳಿದು ಕುಸಿದುಹೋದೆ. ಇಡೀ ರಾತ್ರಿ ಅಳುತ್ತ ಕೂತೆ. ಬೆಳಗಾಗುವುದನ್ನು ಕಾದು ಪಿಳ್ಳಗಾನಹಳ್ಳಿಗೆ ಹೋದೆ. ಆ ದುಃಖದ ದಿನವನ್ನು ಎಂದಿಗೂ ಮರೆಯಲಾಗಲ್ಲ. (ಆಗಾಗ ಪತ್ರಿಕೆಯಲ್ಲಿ ತಮ್ಮ ಸಾವಿನ ಕುರಿತು ಬರೆಯುತ್ತ ನಮ್ಮನ್ನು ಹೆದರಿಸುತ್ತಲೇ ಇದ್ದರು.)

ನಾನು ಅಕಾಡೆಮಿಕ್ ಆಗಿ ಓದಿಕೊಂಡವನಲ್ಲ. ನನಗೇನಾದರೂ ಸ್ವಲ್ಪ ತಿಳಿವಳಿಕೆ (ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ), ಓದಿನ ಹವ್ಯಾಸ ಇದ್ದರೆ ಅದಕ್ಕೆ ಕಾರಣ ಲಂಕೇಶರ ಬರಹಗಳು... ಅಂದಿನ ಲಂಕೇಶ್ ಪತ್ರಿಕೆ... ನಾನು ಋಣಿ.

ನಾವು (ನಾನು, ನನ್ನ ತಾಯಿ ಎಚ್.ಪ್ರೇಮಲೀಲ (ಲೇಖಕಿ) ಮತ್ತು ಇಬ್ಬರು ತಂಗಿಯರಾದ ರೇಖಾ ಹಾಗು ರೂಪ) ಯಾವಾಗಲಾದರೂ ಪತ್ರಿಕೆ ಆಫೀಸ್‌ಗೆ ಹೋದರೆ ಮೊದಲು ಲಂಕೇಶರು ಕೇಳುತ್ತಿದ್ದ ಪ್ರಶ್ನೆ "ಊಟ ಆಯಿತಾ?" ಹೊರಡುವಾಗ ಕೇಳುತ್ತಿದ್ದ ಪ್ರಶ್ನೆ "ಬಸ್ ಚಾರ್ಜ್‌ಗೆ ದುಡ್ಡು ಇದೆಯಾ?" ಇಂಥ ಸಣ್ಣ ಸಣ್ಣ ಕಾಳಜಿಗಳಲ್ಲಿ ಅವರ ತಾಯ್ತನ ವ್ಯಕ್ತವಾಗುತ್ತಿತ್ತು.

ನಾವು ಹೋದಾಗ ಎಂದಿಗೂ ಸಿಟ್ಟಿನ ಮುಖ ಕಂಡಿಲ್ಲ. ಹೆಚ್ಚು ಮಾತನಾಡದೆ ನಮ್ಮ ಮಾತುಗಳನ್ನು ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದರು. ಅವರೊಂದಿಗಿನ ನೆನಪು ಯಾವತ್ತಿಗೂ ಕಾಡುತ್ತಿರುತ್ತದೆ. ಪ್ರಗತಿರಂಗದ ಸಮಯದಲ್ಲಿ ನನ್ನನ್ನು Smart ಅಂದದ್ದು ನಾಚಿಕೆ ತರಿಸಿತ್ತು.

ಲಂಕೇಶ್ ಅವರನ್ನು ಭೌತಿಕವಾಗಿ ಕಳೆದುಕೊಂಡು 16 ವರ್ಷಗಳಾದರೂ ಇವತ್ತಿನ ಸಂದರ್ಭದಲ್ಲೂ "ಲಂಕೇಶರು ಇದ್ದಿದ್ದರೆ?" ಎನ್ನುವ ಪ್ರಶ್ನೆ ಎಲ್ಲರನ್ನೂ ಕಾಡುತ್ತಲೇ ಇರುತ್ತದೆ... ಅವರು ಯುಗಪುರುಷ."

ಇನ್ನು ಲಂಕೇಶರಿಗೆ ದೀಪಕ್ ಮಾರ್ಚ್ 8, 2017ರಂದು ಬರೆದ ಪತ್ರ ಹೀಗಿದೆ:

"ಪ್ರೀತಿಯ ಲಂಕೇಶ್ ಅಂಕಲ್,

ನಿಮ್ಮ ನಿರ್ಗಮನದ ನಂತರ ನಾನು ನಿಮಗೆ ಬರೆಯುತ್ತಿರುವ ಮೊದಲ ಮತ್ತು ಗಾಢ ವಿಷಾದದ ಪತ್ರ.

ಮಾರ್ಚ್ 8 ನಿಮ್ಮ ಹುಟ್ಟಿದ ದಿನ. ಕೃತಕ ಆಚರಣೆಗಳನ್ನು ನಿರಾಕರಿಸುತ್ತಿದ್ದ ನಿಮಗೆ ಈ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂದರ್ಭದಲ್ಲಿ ಕೃತಕವಾಗಿ ಶುಭಾಶಯ ಹೇಳಲಾರೆ. ನೀವು ನಿಮ್ಮ ಮಕ್ಕಳು ಹುಟ್ಟಿದ ದಿನ 'ಹ್ಯಾಪಿ ಬರ್ತ್‌ಡೇ' ಎಂದು ಹೇಳದೆ ತಮಾಷೆಯಾಗಿ ನಸುನಕ್ಕು "ಮಿಯಾಂವ್" ಎಂದು ಹೇಳಿ ಸಹಜವಾಗಿರುತ್ತಿದ್ದಿರಿ. ಆಶ್ಚರ್ಯವೆಂದರೆ ಪ್ರಖರ ಸ್ತ್ರೀವಾದಿಯಾದ ನೀವು ಹುಟ್ಟಿದ ದಿನ 'ಅಂತಾರಾಷ್ಟ್ರೀಯ ಮಹಿಳಾ ದಿನ' ಆಗಿದೆ.

1935 ಮಾರ್ಚ್ 8, ಹೋಳಿ ಹುಣ್ಣಿಮೆ ದಿನ ಶಿವಮೊಗ್ಗ ಹತ್ತಿರದ ಕೊನಗವಳ್ಳಿಯ ನಂದಿಬಸಪ್ಪನವರು ಮತ್ತು ದೇವೀರಮ್ಮನವರ ಮಗನಾಗಿ ಹುಟ್ಟಿದ ನೀವು ತಂದೆಯ ಒಳ್ಳೆತನ, ಹೆಂಗರುಳು ಮತ್ತು ತಾಯಿಯ ಸಿಟ್ಟು, ಹಠಮಾರಿತನ, ವ್ಯಾವಹಾರಿಕ ಪ್ರಜ್ಞೆಗಳ ಮಿಶ್ರಣವಾಗಿದ್ದೀರಿ. ಇಂದಿಗೆ ನಿಮಗೆ 82 ವರ್ಷ ವಾಗಿರುತ್ತಿತ್ತು. ಆದರೆ 2000 ರಲ್ಲಿ, ಅಂದರೆ ನಿಮ್ಮ 65 ನೇ ವಯಸ್ಸಿನಲ್ಲಿ ನಮ್ಮಂಥವರನ್ನು ಇಂಥ ವಾತಾವರಣದಲ್ಲಿ ಬಿಟ್ಟುಹೋಗಿ ಅನಾಥಪ್ರಜ್ಞೆ ಹುಟ್ಟಿಸಿದಿರಿ.

ಅಂತಹ ಅವಸರವೇನಿತ್ತು? ನಿಮ್ಮ ಮೇಲಿನ ಪ್ರೀತಿಯಷ್ಟೇ ಸಿಟ್ಟೂ ಬರುತ್ತಿದೆ. ಇದಕ್ಕೆಲ್ಲ ಕಾರಣ, ತನ್ನ ಕಾವ್ಯ ಆಕರಗಳಿಗೆಲ್ಲ ತನ್ನನ್ನೇ ಅರ್ಪಿಸಿಕೊಂಡ ನಿಮ್ಮ ಆಪ್ತಸಖ ಚಾರ್ಲ್ಸ್ ಬೋದಿಲೇರ್!

ಫ್ರೆಂಚ್ ಕವಿ ಬೋದಿಲೇರ್ 19 ನೇ ಶತಮಾನದ ಅಭಿಜಾತ ಸಾಹಿತ್ಯವನ್ನು ತಿರಸ್ಕರಿಸಿ ಬರೆದು ಜಗತ್ತಿನ ಪ್ರಪ್ರಥಮ ನವ್ಯಕವಿ ಎನಿಸಿದ್ದ, ಮನುಷ್ಯನ ಕಪಟತನ, ಸಮಯಸಾಧಕತನ, ಹುಸಿ ನೈತಿಕತೆ, ದಿಕ್ಕೆಟ್ಟ ಕ್ರಾಂತಿಯ ಹೋರಾಟಗಳ ಪೊಳ್ಳುತನವನ್ನು ತನ್ನ ಕಾವ್ಯಗಳಲ್ಲಿ ಗೇಲಿ ಮಾಡಿದ್ದ ಜಗತ್ತು ಈತನ ಕಾವ್ಯ ಲಹರಿ ಕಂಡು ಬೆಚ್ಚಿಬಿದ್ದಿತ್ತು, ಅಭಿಜಾತ (ಪಂಡಿತ) ಸಾಹಿತಿಗಳು ಅವನದು ಕಾವ್ಯವೇ ಅಲ್ಲ ಎಂದು ಟೀಕಿಸಿ ವಿಮರ್ಶಿಸಿದರು. ಅವನು ಮಾತ್ರ ಸಮಾಜದ ಹುಣ್ಣುಗಳನ್ನು ಗ್ರಹಿಸಿದ್ದ, ಜ್ವಾಲಾಗ್ನಿಯ ಬೆಳಕಿನಲ್ಲಿನ ಸತ್ಯಶೋಧಕನಾಗಿದ್ದ. ಅವನ ಈ ಸ್ಫೋಟಕ ಗುಣಗಳೇ ನಿಮ್ಮನ್ನು ಕಾಡಿರಬಹುದು.

ಆದರೆ, 12ನೇ ಶತಮಾನದಲ್ಲಿ ಜಾತಿವಿನಾಶ, ವರ್ಗಸಂಕರ, ಲಿಂಗಸಮಾನತೆ, ವಿಧವಾವಿವಾಹ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ; ಕಾಯಕವೇ ಕೈಲಾಸ ಅನ್ನುವ ಮೂಲಕ ಆರ್ಥಿಕ ಸಬಲತೆಯ ಮಂತ್ರ ಮುಂತಾದ ಸಮಾಜವಾದಿ ಕ್ರಾಂತಿಕಾರಿ ಬಸವಣ್ಣ ಕೂಡ ನಿಮ್ಮನ್ನು ಆವರಿಸಿದ್ದ.

ಬಸವಣ್ಣನ ತತ್ವ, ಸಿದ್ಧಾಂತಗಳನ್ನು ನಿಮ್ಮ ಇಡೀ ಬದುಕಿನ ಕತೆ, ಕಾದಂಬರಿ, ನಾಟಕಗಳಲ್ಲಿ ಪ್ರಾಮಾಣಿಕವಾಗಿ ದಾಖಲಿಸುತ್ತಾ ಬಂದಿರಿ. ಮತ್ತು 'ಲಂಕೇಶ್ ಪತ್ರಿಕೆ'ಯ ಮೂಲಕ ಈ ಆಶಯಗಳನ್ನು ಸಾಕಷ್ಟು ಪರಿಣಾಮಗೊಳಿಸಿದಿರಿ. ಬೋದಿಲೇರ್, ಬಸವಣ್ಣ ಎರಡು ವಿಭಿನ್ನ ಕಾಲಘಟ್ಟಗಳ, ಆದರೆ ಸ್ಥಾಪಿತ ಹಿತಾಸಕ್ತಿಗಳನ್ನು ಪ್ರಶ್ನಿಸಿದ ಜಂಗಮ ಶಕ್ತಿಗಳನ್ನು ಏಕಕಾಲದಲ್ಲಿ ಹಿಡಿದಿಟ್ಟುಕೊಂಡದ್ದು ನಿಮ್ಮ ಗ್ರಹಿಕೆಯ ಮಜಲುಗಳನ್ನು ಗುರುತಿಸುವಂತಿವೆ.

ನಿಮ್ಮ ಸಾಂಪ್ರದಾಯಿಕ ಮತ್ತು ಮಾನಸಿಕ ಶಿಷ್ಯರು, ಅಭಿಮಾನಿಗಳು "ಈಗ ಲಂಕೇಶರು ಇದ್ದಿದ್ದರೆ?" ಎಂದು ಪ್ರಶ್ನಿಸಿಕೊಳ್ಳುವ ವಾತಾವರಣ ಉಂಟಾಗಿದೆ. ನಿಮ್ಮ ಕಾಲಘಟ್ಟದಲ್ಲಿ ಕೋಮುವಾದದ ವಿರಾಟ್ ಸ್ವರೂಪ ದರ್ಶನವಾಗಿರಲಿಲ್ಲ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಾತ್ರ ತೀವ್ರವಾಗಿದ್ದವು. ಆದರೆ ಈಗ ಸಾವನ್ನೂ ಸಂಭ್ರಮಿಸುವಂಥ ನೀಚ ವಾತಾವರಣ ಸೃಷ್ಟಿಯಾಗಿದೆ. ನಾನಿರುವತನಕ ಕೋಮುವಾದಿ ಸರ್ಕಾರ ಬರಲು ಬಿಡುವುದಿಲ್ಲ ಎಂದು ನಿಮ್ಮ ಮಾತಿನಂತೆ ನಡೆದುಕೊಂಡಿರಿ. (1984 ರಲ್ಲಿ ಕರ್ನಾಟಕದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರ್ಕಾರಕ್ಕೆ ಕಾರಣವಾದಂತೆ. ಆದರೆ ಆ ನಂತರ ನಿಮಗೆ ನಿರಾಸೆಗಳಾದವು ಅನ್ನುವುದು ಬೇರೆ ಮಾತು.)

ನೀವು ಸೃಷ್ಟಿಸಿದ ಜಾಣಜಾಣೆಯರ ಬಳಗ ನಿಮ್ಮ ತತ್ವ, ಸಿದ್ಧಾಂತಗಳಿಗೆ ಬದ್ಧರಾಗಿದ್ದಾರೆ. ಆದರೆ ನಿಮ್ಮ ಆಸ್ಥಾನದಲ್ಲಿದ್ದ ಕೆಲವರು ಆಶ್ಚರ್ಯವೆಂಬಂತೆ ಗಿಳಿ ಶಾಸ್ತ್ರ ಹೇಳುತ್ತಾರೆ! ನಾಚಿಕೆ ಇಲ್ಲದ ಹೊಗಳುಭಟ್ಟರಾಗಿದ್ದಾರೆ. ನಿಮ್ಮ ಸಿದ್ಧಾಂತಗಳ ಮೇಲೆ ದ್ವೇಷದ ದಾಳಿ ನಡೆಸುವವರಂತೆ ಕೋಮುವಾದಿಗಳ ವಂದಿಮಾಗಧರಾಗಿದ್ದಾರೆ.

ನಿಮ್ಮ ಮಗಳು, ನನ್ನ ಪ್ರೀತಿಯ ಗೌರಿ ಅಕ್ಕ ನಿಮ್ಮದೇ ಛಾಪಿನ ಪತ್ರಿಕೆ ರೂಪಿಸುತ್ತಿದ್ದಾರಾದರೂ ನಿಮ್ಮ ಮೇಲಿನ ಹಗೆ ತೀರಿಸಿಕೊಳ್ಳುವವರಂತೆ ಅವರ ಮೇಲೆ ಕುತ್ಸಿತ ಜನ ಮಾನಸಿಕ ದಾಳಿ ನಡೆಸುತ್ತಿದ್ದಾರೆ. ನಿಮ್ಮದೇ ಆಸ್ಥಾನದಲ್ಲಿದ್ದ ಹುಲಿ ವೇಷದ ನರಿಗಳು ಜಾಣಕುರುಡರಾಗಿದ್ದಾರೆ.

ನಿಮ್ಮ ಅಂದಿನ ಬರಹಗಳು ನನ್ನಂಥವರ ದಿವ್ಯ ಚೇತನವಾಗಿದೆ. ನೀವು ನಮ್ಮೊಂದಿಗಿದ್ದಾಗ ನಿಮ್ಮ ಬರಹಗಳನ್ನು ಓದಿದಷ್ಟು ಸಲೀಸಾಗಿ ಈಗ ಓದಲಾಗಲ್ಲ, ಮೂರನೇ ಸಾಲಿನಿಂದ ನಾಲ್ಕನೇ ಸಾಲಿಗೆ ಬರುವಷ್ಟರಲ್ಲಿ ಹೃದಯ ಭಾರವಾಗಿ ಕಣ್ಣು ಮಂಜಾಗುತ್ತವೆ.

ಪತ್ರ ದೀರ್ಘವಾಯಿತು. ಮತ್ತೆ ಬರೆಯುತ್ತೇನೆ.

ಪ್ರೀತಿಯಿಂದ

■ ದೀಪಕ್, ಕಲ್ಕೆರೆ

...ೊಡಗು: ಅರಣ್ಯ ಇಲಾಖೆ...

◀◀

...ರ್ಗಧಾಮದ ಒಳಗೆ ಸಾಕಷ್ಟು ಕಾಮಗಾರಿಗಳು ...ವೆ. ಎಲ್ಲವೂ ಕಬ್ಬಿಣ ಮತ್ತು ಸಿಮೆಂಟ್ ...ಂದಾಗಿ ಬಹುತೇಕ ಕಾಂಕ್ರೀಟ್ ಕಾಡನ್ನು ...ು ಅರಣ್ಯ ಇಲಾಖೆ ಉದ್ದೇಶಿಸಿದಂತಿದೆ. ... ಮರದ ಅಟ್ಟಣಿಗೆ ಇದೆ. ಇದು ಗಟ್ಟಿಯಾಗಿ ...ರ್ಷಕವಾಗಿ ಇದೆ. ಅದರ ಪಕ್ಕದಲ್ಲಿಯೇ ಒಂದು ... ಅಟ್ಟಣಿಗೆಯನ್ನು ನಿರ್ಮಿಸಲಾಗಿದೆ. ಅಂದರೆ ...ಇಲಾಖೆಗೆ ನೈಸರ್ಗಿಕವಾಗಿ ಇರುವಂತಹ ...ಿಂತಲೂ ಕಬ್ಬಿಣದ ಅಟ್ಟಣಿಗೆಯೇ ಆಗತ್ಯವಾಗಿದೆ. ...ಇದರ ಉದ್ದೇಶ ಕಾಮಗಾರಿಯ ಹೆಸರಿನಲ್ಲಿ ...ಡಿ ಹಣವನ್ನು ಲಪಟಾಯಿಸುವುದು. ಕಾವೇರಿ ...ಮದಲ್ಲಿ ಹಸಿರು ಎಂಬುದು ಕಾಣುವುದೇ ಇಲ್ಲ, ...ದಲೂ ಗಿಡಮರಗಳನ್ನು ಬೆಳೆಸುವ ಕಾಯಕಕ್ಕೆ ... ಇಷ್ಟೊತ್ತಿಗಾಗಲೇ ಬೃಹದಾಕಾರದ ಮರಗಳು ...ದಾಗ ಹಸಿರು ಸಿಗುತ್ತಿತ್ತು, ಅಂತಹ ಯಾವುದೇ ಕಾರ್ಯಕ್ರಮ ಅರಣ್ಯ ಇಲಾಖೆಯವರು ಮಾಡುವುದಿಲ್ಲ.

ಹಾರಂಗಿಯಲ್ಲಿ ಟ್ರೀ ಪಾರ್ಕ್

ನಿಸರ್ಗಧಾಮದಿಂದ ಸುಮಾರು 10ಕಿ.ಮೀ ದೂರದಲ್ಲಿ ಹಾರಂಗಿ ಜಲಾಶಯ ಇದೆ. ಇಲ್ಲಿ ಇತ್ತೀಚೆಗಷ್ಟೇ ಸಂಗೀತ ಕಾರಂಜಿಯನ್ನು ಆರಂಭಿಸಲಾಗಿದೆ. ಈ ಭಾಗದಲ್ಲಿ ಸುಂದರವಾದ ಒಂದು ಹೂದೋಟ ಮಾಡುವ ಮೂಲಕ ಜನಾಕರ್ಷಣೆಯ ಕೇಂದ್ರವಾಗಿಸಬೇಕು ಎಂಬುದು ದಿ. ಗುಂಡೂರಾವ್‌ರವರ ಕಲ್ಪನೆಯಾಗಿತ್ತು, ಅದು ಇಂದಿಗೂ ಸಾಕಾರಗೊಂಡಿಲ್ಲ.

ಇಲ್ಲಿ ತೋಟಗಾರಿಕೆ ಇಲಾಖೆಯವರು ಇತ್ತೀಚೆಗೆ ಗಾರ್ಡನ್ ಮಾಡುವ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದ್ದಾರೆ. ಅದರ ಜೊತೆಯಲ್ಲಿಯೇ ಸುಮಾರು 40 ಎಕ್ರೆ ಪ್ರದೇಶ ಅರಣ್ಯ ಇಲಾಖೆಗೆ ಸೇರಿದ್ದೂ ಇದೆ. ಅಲ್ಲಿ ಒಂದು ಕಟ್ಟಡ ಇದ್ದು, ಆ ಕಟ್ಟಡಕ್ಕೆ ಕಾಂಪೌಂಡ್ ಗೋಡೆಯನ್ನು ಹಾಕಲಾಗಿದೆ. ಅಲ್ಲಿ ಮರಗಳೇ ಕಾಣುತ್ತಿಲ್ಲ, ಈಗ ಅಲ್ಲಿಗೆ 30 ಲಕ್ಷ ರೂಪಾಯಿ ವೆಚ್ಚದಲ್ಲಿ ಟ್ರೀ ಪಾರ್ಕ್ ಆರಂಭಿಸಲು ಅರಣ್ಯ ಇಲಾಖೆ ಹೊರಟಿದ್ದು ಈಗಾಗಲೇ ಕಾಮಗಾರಿಗೆ ಟೆಂಡರ್ ಕೂಡಾ ಕರೆಯಲಾಗಿದೆ. ಎ.ಸಿ.ನವೀನ್ ಎಂಬಾತ ಗುತ್ತಿಗೆ ಪಡೆದಿದ್ದಾನೆ. ಸಾಮಾನ್ಯವಾಗಿ ಟೆಂಡರ್‌ನಲ್ಲಿ ಗುತ್ತಿಗೆ ಗಿಟ್ಟಿಸಿಕೊಂಡವರೇ ಕಾಮಗಾರಿಯನ್ನು ಮಾಡಬೇಕು. ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಗೂ ಗುತ್ತಿಗೆದಾರರ ಮತ್ತು ಇಲಾಖೆಯ ನಡುವೆ ಒಪ್ಪಂದ ಆಗಿಲ್ಲ. ಶೇ. 3ರ ಇ.ಎಂ.ಡಿ. ಮೊತ್ತವನ್ನು ಗುತ್ತಿಗೆದಾರ ಪಾವತಿಸಿದ್ದಾರೆ. ಆದರೆ ಇಲ್ಲಿ ಕೂಡ ಕಾಮಗಾರಿಯನ್ನು ಅರಣ್ಯ ಇಲಾಖೆಯವರೇ ಬೇನಾಮಿ ಹೆಸರಿನಲ್ಲಿ ಮಾಡುತ್ತಿದ್ದಾರೆ. ರಫೀಕ್ ಎಂಬ ವ್ಯಕ್ತಿ ಕಾಮಗಾರಿ ಮಾಡುತ್ತಿದ್ದಾನೆ. ಈತ ಮನೋಜ್ ಕುಮಾರ್‌ನ ಆಪ್ತ ಮೂಲ ಗುತ್ತಿಗೆ ಪಡೆದ ವ್ಯಕ್ತಿಯೊಬ್ಬನಾದರೆ, ಕಾಮಗಾರಿ ಮಾಡುತ್ತಿರುವ ವ್ಯಕ್ತಿಯೇ ಬೇರೆ. ಇದು ವ್ಯವಸ್ಥಿತವಾಗಿ ಹಣ ದೋಚುವ ಹುನ್ನಾರ ಎನ್ನುವುದರಲ್ಲಿ ಸಂಶಯವಿಲ್ಲ.

ಇಲ್ಲಿಯೂ ಮರಗಳಿಲ್ಲ, ಗಿಡನೆಟ್ಟು ಮರವಾದ ನಂತರ ಅಲ್ಲಿ ಪಾರ್ಕ್ ಮಾಡಿದ್ದರೆ ಸಾರ್ಥಕತೆ ಇತ್ತು, ಆದರೆ ತರಾತುರಿಯಲ್ಲಿ ಕಾಮಗಾರಿಯನ್ನು ಮಾಡಲಾಗುತ್ತಿದೆ. ಹಣ ನುಂಗುವುದೇ ಅರಣ್ಯಾಧಿಕಾರಿಗಳ ಉದ್ದೇಶವಾದಂತಾಗಿದೆ. ಇವೆಲ್ಲವೂ ತನಿಖೆಗೆ ಒಳಪಟ್ಟರೆ ಅರಣ್ಯ ಅಧಿಕಾರಿಗಳು ಶ್ರೀಕೃಷ್ಣ ಜನ್ಮಸ್ಥಾನ ಸೇರುವುದು ಗ್ಯಾರಂಟಿ. ಕಾಮಗಾರಿಯ ಜೊತೆ, ಕಚೇರಿಯಲ್ಲಿಯೂ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿವೆ. ಹಲವಾರು ವರ್ಷಗಳ ಹಿಂದೆ ಇಲಾಖೆಯಿಂದ ಪಾವತಿಸಲಾಗದೆ ಇರುವ ಮೊತ್ತವನ್ನು ಈಗ ಬಿಲ್ ಮಾಡುವ ಮತ್ತು ಮಂಜೂರು ಮಾಡುವ ಮೂಲಕ ಸರಕಾರದ ಬೊಕ್ಕಸಕ್ಕೆ ಕನ್ನ ಹಾಕಲಾಗುತ್ತಿದೆ. ಮೂಲಗಳ ಪ್ರಕಾರ ಈಗ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯನಿರ್ವಹಿಸುತ್ತಿರುವ ಮನೋಜ್ ಕುಮಾರ್ ಜಿಲ್ಲೆಯಿಂದ ವರ್ಗವಾಗಲಿದ್ದಾನೆ. ಆತನ ಸ್ಥಾನಕ್ಕೆ ಈ ಹಿಂದೆ ಕೊಡಗಿನಲ್ಲಿ ಎ.ಸಿ.ಎಫ್.ಓ. ಆಗಿದ್ದ ಗೀತಾಂಜಲಿ ಎಂಬ ಮಹಿಳಾ ಅಧಿಕಾರಿ ಬರಲಿದ್ದಾರೆ. ಈ ಅಧಿಕಾರ ವರ್ಗಾವಣೆಗೂ ಮುನ್ನ ತರಾತುರಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ, ತಮ್ಮ ಪಾಲು ಕಿಸೆಗಿಳಿಸಿಕೊಳ್ಳುವ ಉದ್ದೇಶ ಮನೋಜ್‌ಕುಮಾರ್‌ನದ್ದು. ಆದಕ್ಕಾಗೇ ಡಿ.ಸಿ.ಎಫ್. ಸೂರ್ಯಸೇನ್ ಎನ್ನದೆ ಕಾವೇರಿ ನಿಸರ್ಗಧಾಮದಲ್ಲೇ ತಳವೂರಿದ್ದಾನೆ.

■ ಬಿ.ಎನ್. ಮನುಶೇಖರ್





ಕನಕನ ಭಕ್ತಿ ಮತ್ತು ಅದಮಾರು ಸ್ವಾಮಿಯ ಬ್ರಾಹ್ಮಣ್ಯದ ಜಬು

ಉಡುಪಿಯ ಅಷ್ಟಮಠಗಳ ತಿಕ್ಕಲು ಪರಂಪರೆಯ ಮುಂಚೂಣಿಯಲ್ಲಿರುವ ಹೆಸರುಗಳಲ್ಲಿ ಅದಮಾರು ಮಠವೂ ಒಂದು. ಹಿಂದಿನ ಅಧಮ ಸ್ವಾಮಿಯೊಬ್ಬ ಸೋನಿಯಾ ಗಾಂಧಿ ಪ್ರಧಾನಿಯಾದರೆ ತಾನು ಊರು ಬಿಟ್ಟು ಸೌದಿಗೋ ಅಮೆರಿಕಾಕ್ಕೋ ಓಡುವೆ ಎಂದು ಬಳಿಕ ಆಕೆ ಇನ್ನೇನು ಕುರ್ಚಿಯೇರುವುದು ಖಚಿತ ಎನ್ನುವಂತಹ ಸನ್ನಿವೇಶ ಸೃಷ್ಟಿಯಾದಾಗ (ಆದರೆ ಸೋನಿಯಾ ಗಾಂಧಿಯೇ ಅದನ್ನು ತಿರಸ್ಕರಿಸಿ ಮನಮೋಹನ್ ಸಿಂಗರಿಗೆ ಅದನ್ನು ವರ್ಗಾಯಿಸಿದ್ದರು) ಈ ಅಸಾಮಿ ಪೆಕರನಂತೆ ಹಲ್ಲು ಗಿಂಜಿತ್ತು. ಈಗ ಆತನದ್ದೇ ಉತ್ತರಾಧಿಕಾರಿಯಾದ ವಿಶ್ವ ಪ್ರಿಯ ಎನ್ನೋ ಮತ್ತೋರ್ವ ಸ್ವಾಮಿ ಭಕ್ತಿಭಾವಗಳ ಮಹತ್ವದ ಬಗ್ಗೆ ಮಾತನಾಡಬೇಕಾದ ಕಾಪು ಬಳಿಯ ಉಳಿಯಾರ ಭಜನಾಮಂಡಳಿಯ ಸಭೆಯೊಂದರಲ್ಲಿ ಸಾವಿರಾರು ಭಕ್ತ ಜನರ ಮುಂದೆ ಕನಕದಾಸನ ಭಕ್ತಿಗೆ ಶ್ರೀ ಕೃಷ್ಣ ತಿರುಗಿದನೆಂಬ ಕಥೆಯೇ ಶುದ್ಧ ಸುಳ್ಳು ಎಂಬಂತಹ ಬಾಂಬ್ ಎಸೆದು ತನ್ನ ಹೊಟ್ಟೆಯುರಿಯನ್ನು ಹೊರಹಾಕಿ ಸುದ್ದಿ ಮಾಡಿದ್ದಾನೆ.

ಹೌದು, ಜನರ ಭಕ್ತಿ ನಂಬಿಕೆಗಳ ಫಲಾನುಭವಿಯಾದ ಈ ಆದಮಾರು ಸ್ವಾಮಿಯಲ್ಲದೇ ಯಾವುದೋ ವಿಚಾರವಾದಿಯೊಬ್ಬ ಇದನ್ನು ಹೇಳಿದ್ದರೆ ಅಥವ ಇದೇ ವಿಚಾರದ ಕುರಿತಾಗಿರುವ ಚರ್ಚೆಯ ವೇಳೆಯಲ್ಲಿ ಮೇಲಿನ ಮಾತು ಬಂದಿದ್ದರೆ ಈ ಮಾತುಗಳ ಬಗ್ಗೆ ಯಾವ ಆಕ್ಷೇಪಗಳೂ ಇಲ್ಲ. ಆದರೆ ಅದಮಾರು ಸ್ವಾಮಿ ಈ ಸಂದರ್ಭದಲ್ಲಿ ಆಡಿದ ಮಾತಿನ ಧಾಟಿ (ನಾನು ವೀಡಿಯೋ ಗಮನಿಸಿದಂತೆ) ಹಾಗು ಭಾವ ಕುರುಬ ಕನಕನ ಕುರಿತಾದ ಆತನ ಅಸಹನೆಯನ್ನು ಸ್ಪಷ್ಟವಾಗಿ ತೋರಿಸುವಂತಿದೆ. ಪಶ್ಚಿಮದ ತಾಳದ ಶಬ್ದಕ್ಕೆ ಆತ ತಿರುಗಿದನೆಂದರೂ ಕೂಡ ಪಶ್ಚಿಮಕ್ಕೆ (ಪಾಶ್ಚಿಮಾತ್ಯ ದೇಶಕ್ಕೆ) ತಾಳ ಕೊಟ್ಟವರೇ ನಾವು ಎಂಬ ಅಹಮ್ಮಿನ ಮಾತೂ ಕೂಡ ಆತನಿಂದ ಬಂದಿತ್ತು.

ಅಲ್ಲಾ ಸ್ವಾಮಿ, ಶ್ರೀ ಕೃಷ್ಣ ಇನ್ನೂ ಅಂಬೆಗಾಲಿಕ್ಕುವಾಗ ಆತನ ತಾಯಿಗೆ ತನ್ನ ಬಾಯೊಳಗೇ ಇಡೀ ಬ್ರಹ್ಮಾಂಡವನ್ನು ತೋರಿದಾತನೆಂದು ಉಪನ್ಯಾಸ ನೀಡೋ ನೀವುಗಳು ಈಗ ಮಾತ್ರ ಬ್ರಹ್ಮಾಂಡದ ಅತೀ ಸಣ್ಣ ಭಾಗವಾದ ಭೂಮಿಯ ಮೇಲೆ ಪೂರ್ವ-ಪಶ್ಚಿಮ ಎಂದು ಸಣ್ಣತನಕ್ಕಿಳಿದು ಕೃಷ್ಣನನ್ನೇ ಕುಬ್ಜಗೊಳಿಸುತ್ತಿದ್ದೀರಲ್ಲ ನಾಚಿಕೆಯಾಗುತ್ತಿಲ್ಲವೇ?

ಈ ನಂಬಿಕೆಗಳ ವಿಚಾರ ಬಂದಾಗ ಜನರಲ್ಲಿ ಮುಖ್ಯವಾಗಿ ಮೂರು ವರ್ಗಗಳನ್ನು ಗುರುತಿಸಬಹುದು. ಒಂದು ಇಂತಹ ಅಡಗೂಲಜ್ಜಿ ಕಥೆಗಳನ್ನು ಸಾರಾಸಗಟಾಗಿ ತಿರಸ್ಕರಿಸುವ ನಾಸ್ತಿಕ ವರ್ಗವಾದರೆ ಇನ್ನೊಂದು ಅಂತಹ ಯೋಚನೆಯನ್ನು ಮಾಡುವುದೇ ಮಹಾಪರಾಧವೆಂದು ಭಾವಿಸುವ ಪರಮ ಆಸ್ತಿಕ ವರ್ಗ- ಇದರಲ್ಲಿ ಮಹಿಳೆಯರ ಪಾಲೇ ಅಧಿಕ. ಇವಲ್ಲದೇ ಸನ್ನಿವೇಶಕ್ಕೆ ತಕ್ಕಂತೆ ಆಚೆಗೂ ಈಚೆಗೂ ಎರಡೂ ಕಡೆಗೂ ಸಾಂದರ್ಭಿಕವಾಗಿ ತನ್ನ ಇರವಿಕೆಯನ್ನು ತೋರ್ಪಡಿಸಿಕೊಳ್ಳುವ ಹೆಸರು ಹೇಳಲಾಗದಂತಹ (ಕೆಲವರ ಪ್ರಕಾರ ಇದು ಎಡಬಿಡಂಗಿತನ ಎನಿಸಿದರೆ ಕೆಲವರ ಪ್ರಕಾರ ಇದೇ ಸೂಕ್ತವಾದ ದಾರಿ. ಬುದ್ಧನೂ ಕೂಡ ದೇವರನ್ನು ಪುರಸ್ಕರಿಸಲೂ ಇಲ್ಲ ಅಲ್ಲಗಳೆಯಲೂ ಹೋಗಿಲ್ಲ; ಅದೇ ರೀತಿ ಕೋಟ ಶಿವರಾಮ ಕಾರಂತರು ತಮ್ಮನ್ನು ತಾವು 'ಅನಾಸ್ತಿಕ' ಎಂದು ಕರೆದು ಕೊಂಡಿದ್ದರು) ವರ್ಗ.

ಆದರೆ ಕನಕನ ಭಕ್ತಿಯ ಕುರಿತಾಗಿ ನಾವಿಲ್ಲಿ ಕೇವಲ ನಂಬಿಕೆಯನ್ನು ಉಸಿರಾಡುವ ಆಸ್ತಿಕ ವರ್ಗದ ತಳಹದಿಯ ಮೇಲೆಯೇ ಚರ್ಚಿಸಬೇಕಾಗಿದೆ. ಯಾಕೆಂದರೆ, 'ನೀನೊಲಿದರೆ ಕೊರಡು ಕೊನರುವುದಯ್ಯ ನೀನೊಲಿದರೆ ಬರಡು ಹಯನುವುದಯ್ಯ ನೀನೊಲಿದರೆ ವಿಷವು ಅಮೃತವಹುದಯ್ಯ' ಎನ್ನುವಂತಹ ಭಕ್ತ ಶರಣರುಗಳ ಮಾತನ್ನು ಹರಿದಾಸರೂ ಬೇಕಷ್ಟು ಹಾಡಿದ್ದಾರೆ. ಆಗರ್ಭ ಶ್ರೀಮಂತನಾದರೂ ಪರಮ ಜಿಪುಣ ಹಾಗು ಲೋಭಿಯಾದ ನವಕೋಟಿ ನಾರಾಯಣನನ್ನು ಪುರಂದರದಾಸರನ್ನಾಗಿಸಿದ ಮೂಗುತಿ ಪವಾಡದ ಕಥೆ (ಮನುಷ್ಯತ್ವದಿಂದ ಯಾರದ್ದೋ ಕೈಸೇರಿದ್ದ ಹೆಂಡತಿಯ ಮೂಗುತಿ ಆಕೆ ಕುಡಿಯುತ್ತಿದ್ದ ವಿಷದ ಬಟ್ಟಲಿಗೆ ಟಣಾಂಗನೆ ಬೀಳುವ ಪವಾಡದ ಕಥೆ)ಯೂ ಕೂಡ ಆ ದೇವರ ಸರ್ವಶಕ್ತ ಮಹಿಮೆಯನ್ನೇ ಸಾರುತ್ತದೆ. ಅಂಥಾದ್ದರಲ್ಲಿ ಕನಕನ ಭಕ್ತಿಗಾಗಿ ಯಃಕಶ್ಚಿತ್ ಮೂರ್ತಿಯೊಂದು ತಿರುಗಿದ್ದರ ಬಗ್ಗೆ ದೇವನ ಮಹಿಮೆ ಪವಾಡಗಳ ಬಗ್ಗೆ ಮಾತನ್ನಾಡುವ ಸ್ವಾಮಿಯೊಬ್ಬ ರೊಳ್ಳೆ ತೆಗೆಯುತ್ತಾನೆಂದರೆ ಇದರ ಹಿಂದಿನ 'ಭಾವ' (ಮೆಂಟಾಲಿಟಿ) ದ ಬಗ್ಗೆ ಚಿಂತಿಸಲೇ ಬೇಕಾಗುತ್ತದೆ.

ಮುಖ್ಯವಾಗಿ ಇಲ್ಲಿ ಗಮನಿಸಲೇ ಬೇಕಾದ ವಿಚಾರವೆಂದರೆ ಈ ಅದಮಾರು ಸ್ವಾಮಿಯಂತಹ ಮೌಢ್ಯದ ಫಲಾನುಭವಿಗಳಿಗೆ ಇಂತಹ ವಿಚಾರಗಳ ಕುರಿತಾಗಿ ವೈಚಾರಿಕ ಚಿಂತನೆಗಳು ಯಾವತ್ತಿಗೂ ಬೇಡ (ಸಾಧ್ಯವಿದ್ದರೆ ಕೃಷ್ಣನ ಅಥವ ಮಧ್ವಾಚಾರ್ಯನ ಪವಾಡಗಳ ಬಗ್ಗೆ ಈ ರೀತಿ ಉಲ್ಲೇಖಿಸಲಿ ನೋಡೋಣ) ಆದರೆ ಕನಕನ ವಿಚಾರದಲ್ಲಿ ಮಾತ್ರ ಇವರ ಮೇಲೆ ಎಚ್.ನರಸಿಂಹಯ್ಯ ಅಥವ ಕೋವೂರ್ ಅಂತವರ ಆತ್ಮ ಲಬಕ್ಕನೆ ಆಹ್ವಾಹನೆಯಾಗುತ್ತದೆ ಯಾಕೋ..!!

ಹೌದು, ಕನಕನಿಗಾಗಿ ಕೃಷ್ಣನ ಮೂರ್ತಿ ತಿರುಗಿದ ಕಥೆಯನ್ನು ಸಾಮಾನ್ಯವಾಗಿ ಅವಲೋಕಿಸಿದಾಗ ಇದೊಂದು ಅಸಂಭವನೀಯ ಕಟ್ಟುಕಥೆಯಂತೆಯೇ ಗೋಚರವಾಗುವುದು ಹೌದಾದರೂ, ಯಾಕೆ ಎಲ್ಲರಿಗೂ ಕೇವಲ ಕನಕನ ಮೇಲಷ್ಟೇ ಕಣ್ಣು. ಹಿಂದೆ ಸಾಕಷ್ಟು ಬಾರಿ ಉಡುಪಿಯ ಹಿರಿಯ ಮಾಧ್ವ ವಿದ್ವಾಂಸ ಬನ್ನಂಜೆ ಗೋವಿಂದಾಚಾರ್ಯರೂ ಇದೇ ವಿಚಾರವನ್ನು ಹೇಳಿದ್ದುಂಟು. ಕನಕನೆಂಬ ಶೂದ್ರ ಕುರುಬ ಉಡುಪಿಯ ಬ್ರಾಹ್ಮಣ ಮಠವನ್ನು ಕಾಡುವ ಶನಿಯಂತೆ ಇವರಿಗೆ ತೋರುತ್ತಿರುವುದಾದರೂ ಯಾಕೆ? ಕೆಲವರ್ಷಗಳ


ಹಿಂದೆ ಕನಕನ ದ್ಯೋತಕವಾದ ಕನಕ ಗೋಪುರ
ಉರುಳಿಸಿ ಆತನ ಹೆಸರನ್ನು ಅಳಿಸುವ ಯತ್ನಕ್ಕೆ ಕೈ
ತೀವ್ರ ವಿರೋಧವನ್ನು ಮಠೀಯರು ಎದುರಿಸಿ
ಅಷ್ಟಮಠ ಎಂಟು ಬ್ರಾಹ್ಮಣ ಯತಿಗಳನ್ನು ನಿರ
ಹೊಂದಿಯೂ ಕೂಡ ಉಡುಪಿಯ ಕೃಷ್ಣನ ಹೆಸರಲ್ಲಿ ಕ
ಕುರುಬನೊಬ್ಬನ ವಿಜೃಂಭಣೆ ಇವರಿಗೆ ಬಿಸಿತುಪ್
ಕಂಡಿವೆಯೇ ಹೊರತು ಕನಕದಾಸನ ಭಕ್ತಿಗೆ ಮೂ
ತಿರುಗಿದರೆಷ್ಟು ಬಿಟ್ಟರೆಷ್ಟು ಅದು ಅವರಿಗೆ ಅಮು


ವಿಶೇಷವೆಂದರೆ, ಇಡೀ ದೇಶದ ಮೂಲೆಮ
ಯಲ್ಲಿರುವ ದೇಗುಲ ಅಷ್ಟೇ ಯಾಕೆ ದರ್ಗಾ-ಚರ್ಚ್
ಕೂಡ ಇಂತಹ ಪವಾಡಮಯ ಕಥೆಗಳ ಹಿನ್ನಲೆ
ಹೊಂದಿದೆ, ಅವುಗಳಿಗೆಲ್ಲ ಹೋಲಿಸಿದರೆ ಈ ಮೂ
ತಿರುಗಿದ ಕಥೆ ತೀರಾ ಎಳಸು ಅಂದರೆ ಆ ಬಗ್ಗೆ ಅ
ಗಂಭೀರವಾಗಿ ಯೋಚಿಸುವಂಥಾದ್ದು ಇಲ್ಲಿ ಏನೂ
ಇನ್ನೂ ವಿಶೇಷವೆಂದರೆ ಶೂದ್ರ ಕನಕನ ಬಗ್ಗೆ ಅ
ತೋರುವ ಈ ಮಠೀಯ ಮಂದಿ ತಮ್ಮ ಸುತ್ತಮು
ಅನೇಕ ಪ್ರಸಿದ್ಧ ದೇಗುಲಗಳು ಇದೇ ಶೂದ್ರ ಪ
ಹಿನ್ನಲೆಯನ್ನೇ ಹೊಂದಿರುವ ಸಂಗತಿ ಗೊತ್ತಿಲ್ಲದೇ

ಉದಾಹರಣೆಗೆ, ಇದೇ ಉಡುಪಿಯ ಪ
"ಪೆರ್ಣಂಕಿಲ" ಎಂಬಲ್ಲಿ ಪ್ರಸಿದ್ಧ ಉದ್ಭವ ಗಣಪತಿ ದೇ
ವಿದೆ. ಅದು ಪೆರ್ನು (ಸ್ಥಳೀಯವಾಗಿ ಚಾಲ್ತಿಯಲ್ಲಿ
ತುಳು ಹೆಸರು) ಎಂಬ ದಲಿತನ ನೇಗಿಲಿ(ಅಂಕಿಲ)ಗ
ಮೂರ್ತಿ. ಅದೇರೀತಿ ಪ್ರಸಿದ್ಧ ಸೌತಡ್ಕದ ಗಣಪತಿ, ಗು
ಎಂಬಲ್ಲಿನ ಗಣಪತಿ ಎಲ್ಲವೂ ದನಗಾಹಿಂಗಳಿಗೆ ಸಿ
ಅತೀ ಹೆಚ್ಚು ಆದಾಯವುಳ್ಳ ಪ್ರಖ್ಯಾತ ಕುಕ್ಕೆ ಸುಬ್ರ
ಅರಣ್ಯವಾಸಿ ಮಲೆಕುಡಿಯರದ್ದು.

ಒಟ್ಟಾರೆ ಲೋಕವನ್ನೇ ಪ್ರೀತಿಸೋ ವಿಶ್ವಪ್ರಿಯ ಎ
ಸ್ವಾಮಿಗೆ ಉಡುಪಿ ಮಠ ಶೂದ್ರನೊಬ್ಬನ ಪ್ರಭಾವಳಿ
ಬೆಳಗುತ್ತಿರುವುದು ಮಾತ್ರ ಅಪ್ರಿಯವಾಗಿ ಕಂಡಿದೆ. ಕ್ರಿಸ್
ಸಮಯದಲ್ಲಿ ಹೆತ್ತವರೇ ಕಾಸುಕೊಟ್ಟು ಮಕ
ಉಡುಗೊರೆಯನ್ನು ತಂದರೂ ಕೂಡ ಅಜ್ಜ ಸಂತಕ್ಲಾ
ಮಕ್ಕಳಿಗೆ ಉಡುಗೊರೆಯನ್ನು ತಂದಿಡುತ್ತಾನೆಂಬು
ನಂಬಿಕೆ. ಇದು ಸುಳ್ಳೆನ್ನುವುದು ಎಲ್ಲರಿಗೂ ಗೊತ್ತಿದ್ದ
ಇದನ್ನೇ ನಂಬುವ ಮಕ್ಕಳ ಮುಗ್ಧ ಜಗತ್ತಿನಲ್ಲಿ
ಭಾವನೆಗಳನ್ನೂ ಕಲುಷಿತಗೊಳಿಸದೇ ಈ ನಂ
ಚಾಲ್ತಿಯಲ್ಲಿದ್ದರೆ ಅದೇನೂ ಸಮಸ್ಯೆಯಲ್ಲ.

ನಿಜಕ್ಕೂ ಪರಮ ಹರಿಭಕ್ತನಾದ ಕನಕದಾ
ಮೂರ್ತಿ ತಿರುಗುವ ಲೆವೆಲ್ಲಿನ ಭಕ್ತಿ ಉಡುಪಿಗೆ
ಕೊಡುವ ಯಾವ ಭಕ್ತರ ವಲಯಕ್ಕೂ ಸಮಸ್ಯೆ
ಆದರೂ ಈ ಸ್ವಾಮಿಗೆ ಹೊಟ್ಟೆಯುರಿ. ಈತನ
ಮೂಲಗುರುವಾದ ಮಧ್ವಾಚಾರ್ಯ ಪಾಜಕದಲ್ಲಿ
ಒಣಕೋಲು ಚಿಗುರಿ ಮರವಾಗಿದ್ದು,
ಪಾತ್ರೆಯನ್ನು ಬೆಕ್ಕು ಕುಡಿಯದಂತೆ ಮುಚ್ಚೆಂದಾಗ
ಮಧ್ವ ಟನ್‌ಗಟ್ಟಲೆ ಬಾರದ ಚಪ್ಪಡಿಯನ್ನೇ
(ಆತ ಹನುಮ ಭೀಮರ ಅವತಾರ ಎಂದು ಬಿಂಬಿಸ
ಭೀಷಣ ಪವಾಡಗಳ ಉದಾಹರಣೆ ಇಂದಿಗೂ
ಜನಿಸಿದ ಪಾಜಕದಲ್ಲಿ ಮಾಧ್ವರು ಬಂದವರೆದುರು ತೋ
ತ್ತಾರೆ. ಕನಕನ ಚಿಲ್ಲರೆ ಪವಾಡದ ಬಗ್ಗೆ ರೊಳ್ಳೆ ತೆಗೆಯ
ಮೊದಲು ವಿಶ್ವಪ್ರಿಯನಂತವರು ಇಂತಹ ಅತಿಮಾ
ಪವಾಡಗಳ ಬಗ್ಗೆ ಮೊದಲು ಉತ್ತರಿಸುವುದೊಳ್ಳೆಯ
ಆಗ ನಿಮ್ಮ ವಿಚಾರವಾದಕ್ಕೆ ಜೈ ಎನ್ನಲು ಯಾರ
ಯಾವ ತಕರಾರುಗಳಿರುವುದಿಲ್ಲ.






■ ಶಂಕರ್, ಉಡು

ವ್ಯಾಘ್ರನ ಕರೆ

ಮಸ್ಸೂರಿಯ ದೈತ್ಯ ಚಿರತೆ



...ಹ್ರಾಡೂನ್‌ನಿಂದ ನಾನು ಹಿಮಾಲಯದ ತಪ್ಪಲಿನ ...ೀಯ ಗಿರಿಧಾಮ ಮುಸ್ಸೂರಿಗೆ ಹೋದೆ. ...ಮಟ್ಟದಿಂದ 6000 ಅಡಿ ಎತ್ತರವಿರುವ ಇದು ...ಾಗಿ ಆಯ್ದುಕೊಳ್ಳುವ ಸ್ಥಳವಾಗಿರಲಿಲ್ಲ.

...ಸ್ಸೂರಿಗೆ ಹಾಲು ಸರಬರಾಜು ಮಾಡುವವರು ...ನ ಬೆಟ್ಟಗಳಲ್ಲಿ ಸಣ್ಣ ಜಮೀನುಗಳಲ್ಲಿ ವಾಸಿಸುತ್ತಿದ್ದರು. ...ಗಳೇ ಇಲ್ಲದ ಅವರ ಕಲ್ಲುಗೋಡೆಯ ಗುಡಿಸಲು ...ಕಿಟಕಿಗಳಂತೂ ಇರುತ್ತಿರಲಿಲ್ಲ. ಗಿಡ್ಡತಳಿಯ ಅವರ ಎಮ್ಮೆಗಳು ಕಡಿದಾದ ಬೆಟ್ಟಗಳಲ್ಲಿ ವಾಸಿಸಲು ...ಾಗಿದ್ದವು. ತರಕಾರಿ ಜೋಳವನ್ನು ಬೆಳೆಯುತ್ತಿದ್ದ ...ಗಳಲ್ಲಿ ನೀರಿನ ಸೆಲೆಯೊಂದು ಇರುತ್ತಿತ್ತು. ಕಾಡು ...ಳಿಂದ ಇವರ ಸಾಕುಪ್ರಾಣಿಗಳಿಗೆ ಮತ್ತು ಬೆಳೆಗಳಿಗೆ ...ುವಿರುತ್ತಿದ್ದರಿಂದ ಅವರದ್ದು ಕಷ್ಟದ ಬದುಕಾಗಿತ್ತು. ...ೆಯರೂ ಮನೆಯ ಹೊರಗಡೆ ಗಂಡಸರಿಗೆ ...ನಾಗಿ ದುಡಿಯುತ್ತಿದ್ದರು. ಯಾವಾಗ ಬೇಕಾದರೂ ...ಬಹುದಾಗಿದ್ದ ಕಾಡುಪ್ರಾಣಿಗಳ ಆಕ್ರಮಣವನ್ನು ...ಷ್ಟವೆಂದು ಪರಿಗಣಿಸುತ್ತಿದ್ದರೆ ವಿನಹ ಅದಕ್ಕೆ ಹೆದರಿ ...ಯಿಂದ ಹಿಂದೆಸರಿಯುತ್ತಿರಲಿಲ್ಲ. ಈ ಜನರ ಸ್ನೇಹ ...ಿಸಿ ಅವರಿಗೆ ಬಹುಮಾನದ ಆಸೆ ತೋರಿಸಿದರೆ ...ಪ್ರಾಣಿಗಳ ಸಮಾಚಾರ ಸಿಗುವುದು ಕಷ್ಟವಾಗಿರಲಿಲ್ಲ.

...ಸ್ಸೂರಿಗೆ ಹೋದ ಕೆಲದಿನಗಳ ನಂತರ ತನ್ನ ...ನ್ನು ಚಿರತೆಯೊಂದು ಕೊಂದಿರುವ ಸುದ್ದಿಯನ್ನು ...ಮಾರುವವನೊಬ್ಬ ತಲುಪಿಸಿದ. ಶವದ ಬಳಿ ...ು ಒಬ್ಬನನ್ನು ಕೂರಿಸಿದ್ದೇನೆ, ಹಾಗಾಗಿ ತ್ವರಿತವಾಗಿ ಹೊರಡಬೇಕೆಂದು ಅವನು ಹೇಳಿದ. ಆಗ ...ಹ್ನದ ಎರಡು ಗಂಟೆಯಾಗಿತ್ತು. ಕೆಲವು ...ಾಳುಗಳನ್ನು ಕರೆದುಕೊಂಡು ನಾನು ಹೊರಟೆ. ...ೂನ್‌ನ ಹುಲಿಬೇಟೆಯಲ್ಲಿ ಭಾಗವಹಿಸಿದ ಫತೇಸಿಂಗ್ ...ವನೊಬ್ಬ ನನ್ನನ್ನು ಇಲ್ಲಿಗೂ ಹಿಂಬಾಲಿಸಿ ಬಂದು ...ದರ್ಶಿಯಾಗಿ ತನ್ನನ್ನುತಾನೇ ನೇಮಿಸಿಕೊಂಡಿದ್ದ!

...ಲ್ಲಿನ ದಟ್ಟ ಮುಳ್ಳುಪೊದೆಗಳನ್ನು ಹಾಯ್ದು ಮೂರು ...ು ಹೋಗಲು ನಮಗೆ ಒಂದೂವರೆಗಂಟೆ ...ಯಿತು. ಆಳವಾದ ಕಣಿವೆಯೊಂದರ ಒಣಗಿದ ...ಲ್ಲಿ ಎರಡು ಬಂಡೆಗಳ ಮಧ್ಯೆ ಚಿರತೆ ಹಿಂದಿನ ...ಾಗ ತಿಂದ ಹಸುವಿನ ಶವವನ್ನು ಅಡಗಿಸಿಟ್ಟಿತ್ತು. ...ು ಎರಡೂ ಕಡೆ ದಟ್ಟವಾದ ಮುಳ್ಳಿನ ಪೊದೆಗಳು ...ದ್ದ ಕೆಲವು ಅಡಿಗಳಿಗಿಂತ ದೂರ ಕಾಣುತ್ತಿರಲಿಲ್ಲ. ...ೂರದಲ್ಲಿ ಒಂದು ಸಣ್ಣ ಬಯಲು ಪ್ರದೇಶವಿದ್ದು ಅಲ್ಲಿಂದ ಹಾಯ್ದು ಮುಂದಿದ್ದ ಅರಣ್ಯದೊಳಗೆ ಹೋಗಿತ್ತು. ಚಿರತೆಗಳು ಹೋದದಾರಿಯಲ್ಲೇ ಮತ್ತೆ ...ಗುತ್ತವೆ ಎನ್ನುವ ತಜ್ಞರ ಮಾತುಗಳನ್ನು ಆಧರಿಸಿ ಯೋಜನೆಯನ್ನು ರೂಪಿಸಿದೆ. ಸುತ್ತಲೂ ...ಿಲ್ಲದಿದ್ದುದರಿಂದ ಶವದಿಂದ ಸುಮಾರು 50 ಅಡಿ ...ದಲ್ಲಿ ನೆಲದ ಮೇಲೆಯೇ ಪೊದೆಯೊಂದನ್ನು ...ಾಡಿ ಅದರಲ್ಲಿ ಅಡಗಿ ಕುಳಿತೆ.

...ನ್ನ ಸಹಚರರು ಹಿಂತಿರುಗುವುದನ್ನೇ ಕಾಯುತ್ತಿದ್ದ ...ಳು ಶವದ ಹತ್ತಿರದ ಪೊದೆಗಳ ಮೇಲೆ ಬಂದು ...ವು. ಇದರಿಂದ ನನ್ನ ಇರವು ಅವುಗಳ ಕಣ್ಣಿಗೂ ... ಎಂದು ಖಾತ್ರಿಯಾಯಿತು. ಹದ್ದುಗಳು ಶವದ ...ರಿಬಂದು ತಮ್ಮ ಭೋಜನವನ್ನು ಶುರುಮಾಡಿದವು. ...ಧ್ಯೆ ಶವದ ನಿಜವಾದ ಮಾಲಿಕ ಬಂದು ಆಕ್ರಮಣ ...ವ ಭಯದಿಂದ ಈಚೆಗೆ ಹಾರಿಬರುತ್ತಿದ್ದವು. ಕೆಲವೇ ...ಲ್ಲಿ ಭಾರೀ ಗಾತ್ರದ ಚಿರತೆಯೊಂದು ಬಂದು ನನ್ನಿಂದ ...ು 80 ಅಡಿ ದೂರದಲ್ಲಿ ಬಯಲುಪ್ರದೇಶದಲ್ಲಿ ... ಆಗಿನ್ನೂ ಸಂಜೆಯ 5 ಗಂಟೆ. ಹುಲಿಯ ಗಾತ್ರದ ... ಭಾರಿ ಚಿರತೆ ಇರುವುದು ಸಾಧ್ಯವೆಂದು ನಾನು ...ರಲಿಲ್ಲ. ಅದರ ಸೌಂದರ್ಯವನ್ನು ಆಸ್ವಾದಿಸುತ್ತಿದ್ದ ...ಗುಂಡುಹಾರಿಸುವುದನ್ನೇ ಮರೆತುಬಿಟ್ಟಿದ್ದೆ. ಕೆಲವೇ ... ನಂತರ ಅದು ಚಲಿಸಿದಾಗ ಎಚ್ಚರಗೊಂಡ ನನಗೆ ... ಅದು ಶವದ ಕಡೆ ಹೋಗದೆ ಬೆಟ್ಟವನ್ನು ...ತೊಡಗಿತ್ತು. ತಕ್ಷಣ ಅದರ ಭುಜಕ್ಕೆ ಗುರಿಯಿಟ್ಟು ... ಚಲಾಯಿಸಿದೆ. ಏಟು ಬಿದ್ದಾಗ ಚಿರತೆಗಳು ...ುತ್ತವೆ ಎಂದು ನಾನು ಕೇಳಿದ್ದೆ. ಆದರೆ ಈ ಚಿರತೆ ...ಾಗಿ ಕಣಿವೆಯಲ್ಲಿ ಜಿಗಿದು ಮಾಯವಾಯಿತು. ...ರ ನಾನು ಗುರಿತಪ್ಪಿದ್ದೆನೇ?

...ದ್ಯೋಗದಲ್ಲಿದ್ದ ನಾನು ಸಹಚರರನ್ನು ಕೂಗಿ ಕರೆದೆ. ... ತಕ್ಷಣ ಚಿರತೆಗಾಗಿ ಹುಡುಕಾಡುವ ಹುಮ್ಮಸ್ಸಿ... ... ಆದರೆ ಅರ್ಧಗಂಟೆ ಕಾಯ್ದು ನಾವು ಒಂದು ...ಯೋಜನೆಯನ್ನು ರೂಪಿಸಿದೆವು. ಒಬ್ಬ ರಕ್ತದ ಕಲೆಯ ...ಡಿದು ಮುನ್ನಡೆದರೆ ಇನ್ನಿಬ್ಬರು ಸುತ್ತಲಿನ ಪೊದೆಗಳೆಡೆ ಕಲ್ಲನ್ನು ತೂರುತ್ತಾ ನಡೆಯಬೇಕು ಮತ್ತು ಜೊತೆಗೇ ನಾನು ಬಂದೂಕಿನೊಂದಿಗೆ ಅಪಾಯವನ್ನು ಎದುರಿಸಲು ಸಿದ್ಧನಾಗಿ ನಡೆಯಬೇಕು ಎನ್ನುವುದು ನಮ್ಮ ಯೋಜನೆಯಾಗಿತ್ತು. ರಕ್ತದ ಜಾಡು ಹಿಡಿದು ಹೋದಾಗ ನಮಗೆ ಚಿರತೆಗೆ ಭಾರೀ ಗಾಯವಾಗಿರಬೇಕು ಅನ್ನಿಸಿತು. ಸ್ವಲ್ಪ ದೂರ ಮುಂದುವರೆದಂತೆ ದಟ್ಟವಾದ ಮುಳ್ಳುಪೊದೆಗಳು ಎದುರಾಗಿದ್ದರಿಂದ ನಾವು ತೆವಳಿಕೊಂಡು ನಡೆಯಬೇಕಾಗಿತ್ತು. ಗಾಯಗೊಂಡ ಚಿರತೆಯ ಇಂತಹ ಹುಡುಕಾಟ ತೀರಾ ಅಪಾಯಕಾರಿಯಾಗಿತ್ತು. ದೊಡ್ಡ ಕಲ್ಲುಗಳನ್ನು ಎಸೆಯುತ್ತಾ ನಾವು ಮುಂದುವರೆದಂತೆ ಚಿರತೆಗೆ ಹೆಚ್ಚುಹೆಚ್ಚು ರಕ್ತಸ್ರಾವ ಆಗಿರುವುದರ ಕುರುಹುಗಳು ಕಂಡುಬಂದು ಅದರ ಶವ ಕಾಣದಿರುವುದು ಆಶ್ಚರ್ಯವೆನ್ನಿಸಿತು.

ನಾವೀಗ ಹಳ್ಳದ ಮಾರ್ಗದಲ್ಲಿ ಇಳಿಯುತ್ತಾ ಮತ್ತೊಂದು ದೊಡ್ಡ ಹಳ್ಳದ ಪಾತ್ರವನ್ನು ಸೇರಿಕೊಂಡೆವು. ಆಗ ಫತೇಸಿಂಗ್ ನಾವು ಇಳಿದುಬಂದ ಜಾಗದ ಪಕ್ಕದಲ್ಲಿ ರಕ್ತದ ಜಾಡಿನಲ್ಲಿ ಕಡಿದಾದ ಬೆಟ್ಟವನ್ನು ಸ್ವಲ್ಪ ಮೇಲೇರಿ ಪರೀಕ್ಷಿಸಲು ನಿರ್ಧರಿಸಿದ. ಅವನು ಕೆಲವೇ ಅಡಿಗಳು ಹೋಗುವಷ್ಟರಲ್ಲಿ ಹತ್ತಿರದಲ್ಲೇ ಚಿರತೆಯ ಮುಖ ಕಂಡಿತು. ಸಿಟ್ಟಿನ ಘರ್ಜನೆಯೊಂದಿಗೆ ಅದು ಇವನ ಮೇಲೆ ಹಾರಿದ ತಕ್ಷಣ ಫತೇಸಿಂಗ್ ಮಗುಚಿಕೊಂಡಿದ್ದ. ಚಿರತೆ ಇವನ ಬೆನ್ನನ್ನು ಕವುಚಿ ಹಿಡಿದಾಗ ಇಬ್ಬರೂ ಬೆಟ್ಟದ ಬದಿಯಿಂದ ಹಳ್ಳದ ತಳದ ಕಡೆ ಉರುಳುತ್ತಾ ಹೋದರು. ನಮ್ಮಿಂದ ಕೆಲವೇ ಅಡಿ ದೂರದಲ್ಲಿ ನಡೆಯುತ್ತಿದ್ದ ಈ ಭಯಾನಕ ಘಟನೆಯನ್ನು ನೋಡುತ್ತಿದ್ದಂತೆ ಗಾಳಿಯಲ್ಲಿ ಗುಂಡು ಹಾರಿಸಿ ನಾನು ರಕ್ಷಣೆಗಾಗಿ ಅವರ ಕಡೆ ಓಡಿದೆ. ನಾನು ತಲುಪುವಷ್ಟರಲ್ಲಿ ಚಿರತೆ ಓಡಿಹೋಯಿತು. ರಕ್ತದ ಮಡುವಿನಲ್ಲಿ ಫತೇಸಿಂಗ್ ಎಚ್ಚರತಪ್ಪಿ ಬಿದ್ದಿದ್ದ.

ನಮಗೆಲ್ಲಾ ಅದು ಸತ್ತುಹೋಗಿರಬೇಕೆಂದು ಅನ್ನಿಸಿತು. ಚಿರತೆಯನ್ನು ಮರೆತು ನಾವೆಲ್ಲಾ ಅವನ ಕಡೆ ಗಮನ ಹರಿಸಿದೆವು. ಅವನ ಮೈಮೇಲಿನ ರಕ್ತದ ಹೆಚ್ಚಿನ ಭಾಗ ಚಿರತೆ ದೇಹದಿಂದ ಹರಿದು ಬಂದದ್ದಾಗಿತ್ತು. ಅವನು ಬಲಭುಜದಲ್ಲಿ ಚಿರತೆಯ ಉಗುರುಗಳು ನೆಟ್ಟು ಗಾಯವಾಗಿದ್ದನ್ನು ಬಿಟ್ಟರೆ ಅವನಿಗೆ ಹೆಚ್ಚಿನ ಹಾನಿಯಾಗಿರಲಿಲ್ಲ. ಗಾಳಿಯಲ್ಲಿ ಹಾರಿಸಿದ ಗುಂಡು ಅವನನ್ನು ಉಳಿಸಿತ್ತು. ಚಿರತೆಯ ಉಗುರುಗಳ ವಿಷ ಫತೇಸಿಂಗ್‌ಗೆ ತಗುಲಿರಬಹುದಾದ್ದರಿಂದ ಅವನ ಗಾಯಗಳನ್ನು ತಕ್ಷಣ ತೊಳೆದು ಪ್ರಥಮ ಚಿಕಿತ್ಸೆ ನೀಡಿ ಮನೆಗೆ ಕಳಿಸುವ ವ್ಯವಸ್ಥೆ ಮಾಡಿದೆ. ಆಗಲೇ ಕತ್ತಲಾಗುತ್ತಿದ್ದುದರಿಂದ ಚಿರತೆಯನ್ನು ಹುಡುಕಲು ಸಮಯವಿರಲಿಲ್ಲ. ಹಾಗಾಗಿ ಅದರ ಇರವನ್ನು ತಿಳಿಯಲು ಗಾಳಿಯಲ್ಲಿ ಕೆಲವು ಗುಂಡುಗಳನ್ನು ಹಾರಿಸಿ ಏನೂ ಪ್ರತಿಫಲವಿಲ್ಲದೆ ಹಿಂತಿರುಗಿದೆ.

ಫತೇಸಿಂಗ್‌ನ ಮನೆಗೆ ಬಂದಾಗ ಅವನು ದೊಡ್ಡ ಚೊಂಬಿನಲ್ಲಿ ಹಾಲು ಕುಡಿಯುತ್ತಿದ್ದ! ಹೆಚ್ಚೇನು ಗಾಯವಾಗಿರದ ಅವನು ತನ್ನ ಸಾಹಸದ ಕಥೆಯನ್ನು ಸುತ್ತಲಿನ ಜನಗಳಿಗೆ ಹೇಳುತ್ತಾ ದೊಡ್ಡ ನಾಯಕನಾಗಿದ್ದ. ಚಿರತೆಯೊಡನೆ ಹೊಡೆದಾಡಿ ಅದನ್ನು ಬಾಲದಿಂದ ಹಿಡಿದೆತ್ತಿ ಹಳ್ಳದ ತಳಕ್ಕೆ ಅವನು ಎಸೆದಿದ್ದನಂತೆ. ಅಲ್ಲಿ ಅದು ನಾಚಿಕೆಯಿಂದಾದರೂ ಸತ್ತುಹೋಗಿರಲೇಬೇಕು!

ಫತೇಸಿಂಗ್‌ನನ್ನು ಆಸ್ಪತ್ರೆಗೆ ಕರೆತಂದೆ. ಅಲ್ಲಿ ವೈದ್ಯರು ಅವನಿಗೆ ಚಿಕಿತ್ಸೆ ನೀಡುವುದಕ್ಕಿಂತ ಪೊಲೀಸ್ ಕೇಸ್ ಬಗೆಗೆ ಹೆಚ್ಚು ತಲೆಕೆಡಿಸಿಕೊಂಡರು. ಎಲ್ಲದಕ್ಕೂ ನಾನೇ ಜವಾಬ್ದಾರ ಎಂದು ಬರೆದುಕೊಟ್ಟ ಮೇಲೆ ಅವರು ಅವನಿಗೆ ಚಿಕಿತ್ಸೆ ನೀಡಿದರು.

ಮರುದಿನ ಬೆಳಗ್ಗೆ ಅವನ ಪರಿಸ್ಥಿತಿ ಸುಧಾರಿಸಿತು. ಅವನು ಮತ್ತೆ ನನ್ನೊಡನೆ ಚಿರತೆಯ ಹುಡುಕಾಟಕ್ಕೆ ಬರಲು ಸಿದ್ಧನಾಗಿದ್ದ. ಅದಕ್ಕೆ ಒಪ್ಪದ ನಾನು 10-12 ಜನರನ್ನು ಒಟ್ಟುಗೂಡಿಸಿಕೊಂಡು ಹೊರಟೆ. ನಾನು ಮೊದಲೇ ಕಳಿಸಿದ್ದವನೊಬ್ಬ ಆಗಲೇ ಚಿರತೆಯಿದ್ದ ಜಾಗವನ್ನು ಗುರುತಿಸಿದ್ದ. ಆ ಜಾಗದ ಮೇಲಿನಿಂದ ಕೆಲವರಿಗೆ ಕಲ್ಲನ್ನು ಉರುಳಿಸುತ್ತಾ ಬರಲು ತಿಳಿಸಿ ನಾನು ಎದುರಿಗಿದ್ದ ಎತ್ತರದ ಜಾಗದಲ್ಲಿ ಸಿದ್ಧನಾಗಿ ನಿಂತುಕೊಂಡೆ. ಸಾಕಷ್ಟು ಕಲ್ಲು ತೂರಿದ ಮೇಲೆಯೂ ಹೊರಬರದಿದ್ದಾಗ ಚಿರತೆ ಸತ್ತು ಹೋಗಿರುವುದು ಖಾತ್ರಿಯಾಯಿತು. ಆ ನಂತರದಲ್ಲಿ ನಾನು ಸಾಕಷ್ಟು ಚಿರತೆಗಳನ್ನು ಕೊಂದಿದ್ದರೂ 8 ಅಡಿ 4 ಅಂಗುಲ ಉದ್ದವಿದ್ದ ಇಂತಹ ಭಾರೀ ಚಿರತೆಯನ್ನು ಈವರೆಗೆ ಕಂಡಿಲ್ಲ. ನಿರಂತರ ರಕ್ತಪಾತವಾದ ಮೇಲೂ ಇಷ್ಟು ದೂರ ಅದು ತೆವಳಿಕೊಂಡು ಬಂದಿದ್ದುದು ಆಶ್ಚರ್ಯದ ಸಂಗತಿಯಾಗಿತ್ತು.

ಭಾರತದ ಕೆಳವರ್ಗದ ಜನ ಆಸ್ಪತ್ರೆಗಳನ್ನು ದ್ವೇಷಿಸುತ್ತಾರೆ. ಫತೇಸಿಂಗ್ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಕೆಲವು ದಿನಗಳ ನಂತರ ಅವನು ನನ್ನನ್ನು ನೋಡಲು ಬಂದ. ವೈದ್ಯರ ಒಪ್ಪಿಗೆ ಪಡೆದು ಬಂದೆಯಾ ಎಂದು ಕೇಳಿದೆ. ಯಾರೂ ಇಲ್ಲದಿದ್ದಾಗ ತಪ್ಪಿಸಿಕೊಂಡು ಬಂದೆ ಎಂದು ಫತೇಸಿಂಗ್ ಹೇಳಿದ! ಆಸ್ಪತ್ರೆಗೆ ಹಿಂತಿರುಗಬೇಕೆಂಬ ನನ್ನ ಯಾವುದೇ ಒತ್ತಾಯಕ್ಕೆ ಅವನು ಮಣಿಯಲೇ ಇಲ್ಲ. ಕೆಲವೇ ದಿನಗಳಲ್ಲಿ ಅವನು ಕಾಡಿನಲ್ಲಿ ನನ್ನೊಡನೆ ಸುತ್ತಾಡಲು ಮತ್ತೆ ತಯಾರಾಗಿದ್ದ.

(ಮುಂದುವರೆಯುವುದು)

ಹಿಮಾಲಯದ ಕಪ್ಪು ಕರಡಿ

ಬೆಟ್ಟಗಳಲ್ಲಿ ವಾಸಿಸುವ ಪ್ರತಿಯೊಬ್ಬರೂ ಹಿಮಾಲಯದ ಕಪ್ಪುಕರಡಿಯನ್ನು ಶತ್ರುವಿನಂತೆ ಕಾಣುತ್ತಾರೆ. ಅದರ ವಿಕಾರವಾದ ಮುಖ ಉಗ್ರಕೋಪಕ್ಕೆ ಸಾಕ್ಷಿಯಾಗಿ ಇವರಿಗೆ ಕಾಣಿಸುತ್ತದೆ. ಕರಡಿ ಮಾನವರನ್ನು ಹುಡುಕಿ ಬೇಟೆಯಾಡದಿದ್ದರೂ ಅವರು ಕಾಡಿನಲ್ಲಿ ಓಡಾಡುವಾಗ ದಿಢೀರನೆ ಆಕ್ರಮಣ ಮಾಡುತ್ತದೆ. ಹಿಂಗಾಲುಗಳ ಮೇಲೆ ನಿಂತು ಮುಂಗಾಲಿನ ಉಗುರುಗಳಿಂದ ಮುಖಕ್ಕೆ ಹೊಡೆದು ಕಣ್ಣು ಕಿವಿ ಕೆನ್ನೆಗಳನ್ನು ಹಿಸಿದುಬಿಡುತ್ತದೆ. ಪರಿಣಾಮ ಭಯಾನಕವಾಗಿರುತ್ತದೆ. ಭಾರೀ ಗಾತ್ರದ ಕಡುಗಪ್ಪು ಬಣ್ಣದ ಇದರ ಎದೆಯ ಮೇಲೆ V ಆಕಾರದ ಬಿಳಿಪಟ್ಟೆ ಇರುತ್ತದೆ. ತನ್ನ ಶಕ್ತಿಯುತ ಕೈಗಳಿಂದ ದೊಡ್ಡ ರೆಂಬೆಗಳನ್ನು ಕೂಡ ಇದು ಸರಾಗವಾಗಿ ಮುರಿಯುತ್ತದೆ. ಪ್ರೌಢ ಗಂಡು ಕರಡಿ ಚಿರತೆ ಮತ್ತು ಹುಲಿಗಳ ಜೊತೆ ಕೂಡ ಕಾಳಗಕ್ಕೆ ನಿಲ್ಲುತ್ತದೆ. ಇಲ್ಲಿನ ಜನ ಹೇಳುವ ಪ್ರಕಾರ ದಟ್ಟ ಪೊದೆಗಳಲ್ಲಿ ಕರಡಿ ಜಯಿಸಿದರೆ ಮರಗಳಿರುವ ಕಾಡಿನಲ್ಲಿ ಚಿರತೆ ಗೆಲ್ಲುವ ಸಾಧ್ಯತೆಗಳು ಹೆಚ್ಚು. ಕೆಲವೊಮ್ಮೆ ಎರಡೂ ಪ್ರಾಣಿಗಳೂ ಸಾವನ್ನಪ್ಪುತ್ತವೆ.



ಈ ಕರಡಿಗಳು ನಿಶಾಚರಿಗಳಾಗಿದ್ದು ಮುಂಜಾವು ಅಥವಾ ಸಂಜೆಯ ಸಮಯದಲ್ಲಿ ಮಾತ್ರ ಬೇಟೆಗಾರನಿಗೆ ಕಂಡುಬರುತ್ತವೆ. ಹಣ್ಣುಗಳನ್ನು ತಿನ್ನಲು ಅವು ಸರಾಗವಾಗಿ ಮರವನ್ನು ಹತ್ತುತ್ತವೆ. ಕೆಲವೊಮ್ಮೆ ಎತ್ತರದ ಮರದ ರೆಂಬೆಗಳನ್ನು ಬಗ್ಗಿಸಿ ಮಚಾನಿಂತಹ ವೇದಿಕೆಯನ್ನು ನಿರ್ಮಿಸಿಕೊಂಡು ವಿರಮಿಸುತ್ತವೆ!

ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817/080-26676427

ಜಗತ್ತು ಕನಿಕರದ ಕಣ್ಣಿಂದ ನಮ್ಮತ್ತಲೇ ನೋಡುತ್ತಿದೆ



ಮೋದಿ 2014ರಲ್ಲಿ ಪ್ರಧಾನಿಯಾದ ನಾಲ್ಕೈದು ತಿಂಗಳ ನಂತರ ಆರೆಸ್ಸೆಸ್ ರಣತಂತ್ರಗಾರರು ಹಾಗೂ ಮೋದಿಯ ಪ್ರಚಾರ ವಿಭಾಗ ಜೊತೆಗೂಡಿ 'ವಿಶ್ವಗುರು' ಎಂಬ ವಿಚಿತ್ರ ತಬ್ಬುವನ್ನು ಹುಟ್ಟು ಹಾಕಿದ್ದಲ್ಲದೇ, ನಿರ್ದಿಷ್ಟ ಪ್ರಚಾರದ ವಾಕ್ಯಗಳನ್ನು ತಯಾರಿಸಿ ಅದನ್ನು ತನ್ನ ಸದಸ್ಯರಿಗೆ ಹಂಚಿ ಇವೇ ವಾಕ್ಯಗಳನ್ನು ಉಪಯೋಗಿಸಿ ಮೋದಿಯನ್ನು ಹೊಗಳುತ್ತಿರಬೇಕೆಂದು ಆದೇಶಿಸಿತ್ತು ಎಂದು ಇತ್ತೀಚೆಗೆ ಆರೆಸ್ಸೆಸ್ ನಿಂದ ಸಿಡಿದು ಹೊರಬಂದ ನನ್ನ ಬೆಳಗಾವಿಯ ಮರಾಠಿ ಗೆಳೆಯನೊಬ್ಬ ಹೇಳಿದ್ದಾನೆ. ಇವು ಕೇವಲ ಕನ್ನಡ-ಮರಾಠಿ ಮಾತ್ರವಲ್ಲ ಭಾರತದ ಎಲ್ಲಾ ಭಾಷೆಯಲ್ಲೂ ಭಾಷಾಂತರವಾಗಿ ಎಲ್ಲಾ ರಾಜ್ಯಗಳಲ್ಲಿ ಅಕ್ಷರಶಃ ಇವೇ ವಾಕ್ಯಗಳನ್ನು ಮೋದಿಯ ಭಕ್ತರು ಪತ್ರಿಕೆಗಳಲ್ಲಿ ಲೇಖನ ಬರೆಯಲು ಅಥವಾ ಕಾಮೆಂಟ್ ವಿಭಾಗದಲ್ಲಿ ಬಳಸುತ್ತಿದ್ದಾರಂತೆ.

1) 60 ವರ್ಷಗಳ ನಂತರ ಭಾರತಕ್ಕೊಬ್ಬ ಉತ್ತಮ ಕೆಲಸ ಮಾಡುವ ಪ್ರಧಾನಿ ದೊರಕಿದ್ದಾರೆ.
2) ಮೋದಿ 18 ಗಂಟೆ ಕೆಲಸ ಮಾಡುತ್ತಾರೆ, ಅದು ಅವರಿಗಾಗಿ ಅಲ್ಲ ದೇಶದ ಜನತೆಗಾಗಿ.
3) ಇಡೀ ಜಗತ್ತೇ ಭಾರತದತ್ತ ಬೆರಗು ಕಣ್ಣಿಂದ ನೋಡುತ್ತಿದೆ.
4) ಮೋದಿ ಮಾಡಿರುವ ಅಭಿವೃದ್ಧಿಯನ್ನು ಇಡೀ ವಿಶ್ವವೇ ಕೊಂಡಾಡಿದೆ.
5) ಮೋದಿಯಿಂದಾಗಿ ಭಾರತ ವಿಶ್ವಗುರು ಆಗಿದೆ.
6) ಮೋದಿ ದೇಶಕ್ಕಾಗಿ ತಮ್ಮ ಕುಟುಂಬವನ್ನೇ ತ್ಯಾಗ ಮಾಡಿದ್ದಾರೆ.
7) ಮೋದಿ ಅಷ್ಟು ಪ್ರಾಮಾಣಿಕ ಆಗಿದ್ದರಿಂದ ಅವರು ತನ್ನ ಅಧಿಕಾರ ದುರುಪಯೋಗ ಮಾಡಿ ತನ್ನ ಕುಟುಂಬಕ್ಕೆ ಸಹಾಯ ಮಾಡಲಿಲ್ಲ (ನೋಟು ರದ್ದತಿಯ ನಂತರ ಮೋದಿಯ ಪ್ರಚಾರ ವಿಭಾಗ ಹೆಣೆದ ಇನ್ನೊಂದು ಹೊಸ ವಾಕ್ಯ ಹೀಗಿದೆ- "ಮೋದಿಯ ನೋಟು ರದ್ದತಿ ದೇಶದ ಒಳ್ಳೆಯದಕ್ಕೆ ತೆಗೆದುಕೊಂಡ ಅತ್ಯಂತ ದಿಟ್ಟ ನಿರ್ಧಾರ ಎಂದು ಜಗತ್ತಿನ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಶ್ಲಾಘಿಸಿದ್ದಾರೆ).

ಮೋದಿ-ಆರೆಸ್ಸೆಸ್ ಪ್ರಚಾರ ವಿಭಾಗ ತನ್ನ ಕಾಲಾಳುಗಳಿಗೆ ಹಿಂದುತ್ವದ ಅಮಲೇರಿಸಿ ಬರೆದು ಕೊಟ್ಟಿರುವ ಮೇಲಿನ ವಾಕ್ಯಗಳಿಗೆ ಪ್ರಜ್ಞಾವಂತರ ಉತ್ತರ ಹೀಗಿದೆ:

"ಈ ಹಿಂದೆ ಪ್ರಧಾನಿ ಆಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಮುರಾರ್ಜಿ ದೇಸಾಯಿ, ದೇವೇಗೌಡ, ತಮ್ಮದೇ ವಾಜಪೇಯೀ ಸಹ ಕೆಟ್ಟ ಪ್ರಧಾನಿಗಳು ಎಂದು ಮೋದಿ ಭಕ್ತರ ಅಂಬೋಣವೇ? 60 ವರ್ಷಗಳ ನಂತರ ಭಾರತಕ್ಕೊಬ್ಬ ಸರ್ವಾಧಿಕಾರಿ ಪ್ರಧಾನಿ ದೊರಕಿದ್ದಾರೆ ಎಂಬುದು ಮಾತ್ರ ನಿಜ ತಾನೇ. ಮೋದಿ ಭಾರತದಲ್ಲಿ ಇರುವುದೇ ಕಡಿಮೆ, ಹಾಗಿರುವಾಗ ದಿನಾಲು 18 ಗಂಟೆ ಕೆಲಸ ಮಾಡಲು ಹೇಗೆ ಸಾಧ್ಯ?

ಮೋದಿಯ ಆಡಳಿತದಲ್ಲಿ ದಲಿತ ಮತ್ತು ಮುಸ್ಲಿಂರ ಮೇಲಾಗುತ್ತಿರುವ ಘೋರ ಶೋಷಣೆ ಮತ್ತು ಮಹಿಳೆಯರ ಅತ್ಯಾಚಾರದಿಂದಾಗಿ ಭಾರತೀಯರೆಲ್ಲಾ ವಿದೇಶದಲ್ಲಿ ತಲೆತಗ್ಗಿಸುವಂತಾಗಿದೆ. ಮೋದಿಯಿಂದಾಗಿ ಜಗತ್ತಿನಲ್ಲೆಡೆ ಭಾರತ ಒಂದು ಸಂಕುಚಿತ ಕೋಮುವಾದಿ ದೇಶ ಎಂಬ ಅಗೌರವಕ್ಕೊಳಗಾಗಿದೆ.

ಮೋದಿ ಸರಕಾರದ ಸ್ವಂತ ಸಾಧನೆ ಶೂನ್ಯ, ಆದರೆ ಹಿಂದಿನ ಸರಕಾರದ ಯೋಜನೆಗಳನ್ನೇ ಕೇವಲ ಹೆಸರು ಬದಲಿಸಿ ಅವು ತನ್ನದೆಂದು ನಾಟಕ ಆಡುವುದರಲ್ಲಿ ಮಾತ್ರ ಮೋದಿ ನಿಸ್ಸೀಮ. ಮೋದಿಯ ವಿದೇಶಿ ಹೂಡಿಕೆ (FDI) ಯಿಂದಾಗಿ ಭಾರತ ವಿಶ್ವಗುರು ಅಲ್ಲ ವಿಶ್ವ-ಗುಲಾಮ ಆಗುತ್ತಿದೆ. ಜತೆಗೆ ಕಾರ್ಪೊರೇಟ್ ಗುಲಾಮ ಸಹ ಆಗುತ್ತಿದೆ.

ಮೋದಿಯ ನೋಟು ರದ್ದತಿಯನ್ನು ಜಗತ್ತಿನ ಎಲ್ಲಾ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಭಾರತದ ಆರ್ಥಿಕತೆಗೆ ಅತ್ಯಂತ ಮಾರಕ ಮತ್ತು ದೇಶದ ಪ್ರಗತಿಯನ್ನು 20 ವರ್ಷ ಹಿಂದಕ್ಕೆ ತಳ್ಳಿದೆ ಎಂದಿದ್ದಾರೆ.

ಮೋದಿ 17 ವರ್ಷದವನಿರುವಾಗಲೇ ತಂದೆ-ತಾಯಿಯೊಂದಿಗೆ ಜಗಳಾಡಿ ಕುಟುಂಬ ತೊರೆದಿದ್ದು ತನ್ನ ಅಹಂಕಾರಿ ಉದ್ಧಟ ಸ್ವಭಾವದಿಂದಾಗಿಯೇ ಹೊರತು ದೇಶ ಸೇವೆಗಲ್ಲ, ಹೆತ್ತ ತಾಯಿಯೊಂದಿಗೂ ಈ ಮೋದಿ ಮಧುರ ಸಂಬಂಧ ಇಟ್ಟುಕೊಂಡಿರಲಿಲ್ಲ. ಈಗ ಮಾತ್ರ ಮೋದಿಗೆ ತಾಯಿಯೂ ಸ್ವ-ಪ್ರಚಾರದ ವಸ್ತು ಆಗಿದ್ದಾರೆ ಎಂಬುದು ಬೇರೆ ವಿಷಯ.

ಇಡೀ ಜಗತ್ತೇ ಭಾರತದತ್ತ ಬೆರಗು ಕಣ್ಣಿಂದ ನೋಡುತ್ತಿದೆ ಎಂದು ಮೋದಿ ಭಕ್ತರು ಎಲ್ಲೆಡೆ ಹೇಳುತ್ತಿರುವುದು ಸರಿಯಾಗಿದೆ, ಕಾರಣ 125 ಕೋಟಿ ಬಡ ಮುಗ್ಧ ಭಾರತೀಯರಿಗೆ ಎಂಥಾ ಕೋಮುವಾದಿ, ಸುಳ್ಳುಗಾರ, ನಕಲಿ ಡಿಗ್ರೀ ಹೊಂದಿರುವವನು ಪ್ರಧಾನಿಯಾಗಿ ಸಿಕ್ಕಿದ್ದಾನೆ ಎಂದು ವಿಶ್ವವೇ ಭಾರತದತ್ತ ಬೆರಗು ಕಣ್ಣಿಂದ, ಕ್ಷಮಿಸಿ ಕನಿಕರದ ಕಣ್ಣಿಂದ ನೋಡುತ್ತಿದೆ ಅಷ್ಟೇ.


- ಮಲ್ಲಿಕಾರ್ಜುನ ಶೆಟ್ಟರ್, ಬೆಳಗಾವಿ

'ಮೋದಿ ಸರಕಾರ' ಅಂದರೆ 'ಮೋಸ'

ವೈರಿ ದೇಶದ ಗಡಿಯಲ್ಲಿ ನುಗ್ಗಿ ಮಾಡಲಾದ ಸರ್ಜಿಕಲ್ ದಾಳಿಗಳನ್ನು ಎಲ್ಲಾ ದೇಶಗಳೂ ಗುಟ್ಟಾಗಿ ಇಡುತ್ತವೆ. ಇದು ಭಾರತ ಮಾತ್ರವಲ್ಲ ಎಲ್ಲಾ ದೇಶಗಳ ಮಿಲಿಟರಿ ರಣತಂತ್ರ ಆಗಿರುತ್ತದೆ. ಜತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯತಿರಿಕ್ತ ಅಭಿಪ್ರಾಯ ಸೃಷ್ಟಿಯಾಗಬಾರದು ಎಂಬ ಡಿಪ್ಲೊಮ್ಯಾಟಿಕ್ ಕಾರಣಕ್ಕಾಗಿ ಸಹ ಸರ್ಜಿಕಲ್ ದಾಳಿಗಳನ್ನು ಎಲ್ಲಾ ದೇಶಗಳು ಗುಟ್ಟಾಗಿ ಇಡುತ್ತವೆ. ಹಿಂದಿನ 20 ವರ್ಷಗಳಲ್ಲಿ ಭಾರತವು ಪಾಕ್ ಗಡಿಯಲ್ಲಿ ಭಯೋತ್ಪಾದಕರ ಕ್ಯಾಂಪ್ ಮೇಲೆ ಆರು ಬಾರಿ ಇಂತಹ ಸರ್ಜಿಕಲ್ ದಾಳಿ ನಡೆಸಿದೆ ಹಾಗೂ ನಮ್ಮ ದೇಶದ ರಕ್ಷಣಾ ನೀತಿಯಂತೆ ಅವನ್ನೆಲ್ಲಾ ಗುಟ್ಟಾಗಿ ಇಡಲಾಗಿದೆ ಎಂದು ಆ ಸರ್ಜಿಕಲ್ ದಾಳಿಯಲ್ಲಿ ಭಾಗವಹಿಸಿದ್ದ ಸೇನಾಧಿಕಾರಿಗಳೇ ಬಹಿರಂಗಪಡಿಸಿದ್ದಾರೆ. ಆದರೆ ಮೋದಿ ಸರಕಾರ ಮಾತ್ರವೇ ಈ ರಕ್ಷಣಾ-ನೀತಿಗೆ ತಿಲಾಂಜಲಿ ಇತ್ತು ಸರ್ಜಿಕಲ್ ದಾಳಿಯನ್ನು ತನ್ನ ಪಕ್ಷದ ವೈಭವೀಕರಣಕ್ಕೆ ಬಳಸಿಕೊಂಡು ತನ್ನ ಸ್ವಾರ್ಥ ಮೆರೆದಿದೆ.

ಸೇನಾಪಡೆಯನ್ನೂ ತನ್ನ ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಂಡ ಮೊಟ್ಟ ಮೊದಲ ಪ್ರಧಾನಿ ಈ ಮೋದಿ. ಕಳೆದ ಸೆಪ್ಟೆಂಬರ್ ತಿಂಗಳ ಸರ್ಜಿಕಲ್ ದಾಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಮೊನ್ನೆ ಗಣರಾಜ್ಯ ದಿನದಂದು 21 ಯೋಧರಿಗೆ ಶೌರ್ಯ ಪ್ರಶಸ್ತಿ ಘೋಷಿಸಲಾಯಿತು. ಆದರೆ ವಿಚಿತ್ರವೆಂದರೆ ಆ ಎಲ್ಲಾ 21 ಯೋಧರ ಹೆಸರನ್ನು ಸರಕಾರ ಗುಟ್ಟಾಗಿ ಇಟ್ಟಿದೆ. ಇದಕ್ಕೆ ಯಾವ ಕಾರಣವನ್ನೂ ಸರಕಾರ ಕೊಟ್ಟಿಲ್ಲ, ಹಾಗಾಗಿ ಈ ಗುಟ್ಟಿನ ಬಗ್ಗೆ ಜನರಲ್ಲಿ ಸಂಶಯ ಮೂಡಿದೆ. ಯಾಕೆಂದರೆ ಬಹಳಷ್ಟು ನಿವೃತ್ತ ಸೇನಾಧಿಕಾರಿಗಳೇ ಹೇಳುವಂತೆ ಪಾಕಿಸ್ತಾನದ ಗಡಿಯಲ್ಲಿ ಆಗಾಗ ಪಾಕ್ ಮತ್ತು ಭಾರತೀಯ ಸೇನೆಯ ನಡುವೆ ಗುಂಡಿನ ಚಕಮಕಿ ನಡೆಯುತ್ತಲೇ ಇರುತ್ತದೆ, ಆದರೆ ಅದರ ಬಗ್ಗೆ ಹೆಚ್ಚು ಪ್ರಚಾರ ಎರಡೂ ದೇಶಗಳೂ ಮಾಡುವುದಿಲ್ಲ.


ಇಂತಹದ್ದೇ ಒಂದು ಗುಂಡಿನ ಚಕಮಕಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದಿರಬಹುದು ಹಾಗೂ ಅದನ್ನೇ ಭಾರತ ಸರಕಾರ ಸರ್ಜಿಕಲ್ ದಾಳಿಯೆಂದು ಪ್ರಚಾರ ಮಾಡಿರಬಹುದು, ಅದಕ್ಕಾಗಿಯೇ ಈಗ 21 ಯೋಧರಿಗೆ ಶೌರ್ಯ ಪ್ರಶಸ್ತಿ ಕೊಟ್ಟರೂ ಅವರ ಹೆಸರನ್ನು ಗುಟ್ಟಾಗಿ ಇಡಲಾಗಿದೆ. ಒಂದುವೇಳೆ ಯೋಧರ ಹೆಸರು ಬಹಿರಂಗವಾದರೆ ಅವರಲ್ಲಿ ಯಾರಾದರೂ ಒಬ್ಬರನ್ನು ಪತ್ರಕರ್ತರು ಗುಟ್ಟಾಗಿ ಸಂಧಿಸಿ ಸರ್ಜಿಕಲ್ ದಾಳಿ ನಿಜವಾಗಿ ನಡೆದಿದೆಯೋ ಇಲ್ಲವೋ ಎಂಬುದನ್ನು ಸಾಕ್ಷಿ ಸಹಿತ



ಕಂಡುಹಿಡಿಯಬಹುದು ಎಂಬ ಭಯದಿಂದ ಆ ಯೋ ಹೆಸರುಗಳನ್ನು ಮೋದಿ ಸರಕಾರ ಬಹಿರಂಗಪಡಿ ಎನ್ನಲಾಗುತ್ತಿದೆ. ಅಂದರೆ ಗುಟ್ಟಾಗಿ ಇಡಬೇಕಾಗಿದ್ದ ಸರ್ಜಿ ದಾಳಿಯ ಮಾಹಿತಿಯನ್ನು ಮೋದಿ ಬಟಾಬ ಮಾಡಿದ್ದಾನೆ, ಆದರೆ ನಿಜವಾಗಿ ಬಹಿರಂಗಪಡಿಸ ವೀರ ಯೋಧರ ಹೆಸರನ್ನು ಮೋದಿ ಗುಟ್ಟಾಗಿ ಇ

ಒಟ್ಟಾರೆ ಉಲ್ಟಾಪಲ್ಟಾ ಡೊಂಬರಾಟವಾಡಿ ತನ್ನ ಸ್ವಂತ ವೈಭವೀಕರಣ ಮಾಡಿಕೊಳ್ಳುತ್ತಿದ್ದಾನೆ. ಯೋಧರ ಹೆಸರಿನ ದುರುಪಯೋಗ ಬಿಜೆಪಿಗೇ ಉಲ್ಟಾ ಹೊಡೆಯಬಹುದು.

ಮೋದಿ ಉತ್ತರ ಪ್ರದೇಶದ ಚುನಾವಣಾ ಪ್ರ ವೇಳೆ ಅಡಿಗಡಿಗೆ ಸರ್ಜಿಕಲ್ ದಾಳಿಯನ್ನು ಉ ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತಿರುವುದು ಮಾ ತನ್ನ ಬಡಾಯಿಯಿಂದ ನಮ್ಮ ದೇಶವನ್ನೇ ಅಂತರರಾ ಮಟ್ಟದಲ್ಲಿ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾನೆ. ನಮ್ಮ "ಪಾಕಿಸ್ತಾನದ ನೆಲಕ್ಕೆ ನುಗ್ಗಿ" ಸರ್ಜಿಕಲ್ ದಾಳಿ ಮ ಎಂದು ಮೋದಿ ಹೇಳಿದ್ದಾನೆ. ಸರ್ಜಿಕಲ್ ದಾಳಿ ನ ಎಂದು ಹೇಳಲಾದ ಕುಪ್ವಾರಾ ಮತ್ತು ಪೂಂಚ್ ಜಿ ತಾಗಿರುವ ಗಡಿ ಪ್ರದೇಶ ನಿಜವಾಗಿ ಪಾಕ್ ಆ ಕಾಶ್ಮೀರದಲ್ಲಿ ಇದೆ. ಈ ಪಾಕ್ ಆಕ್ರಮಿತ ಕಾ (ಪಿಓಕೆ) ಭಾರತದ ಭಾಗವೆಂಬುದು ವಿಶ್ವಸಂಸ್ಥೆ 69 ವರ್ಷದಿಂದ ನಮ್ಮ ಭಾರತ ಸರಕಾರದ ಅ ನಿಲುವು. ಅದಕ್ಕಾಗಿಯೇ ಈ ಭಾಗಕ್ಕೆ ಪಾಕಿಸ್ತಾನ ಸರ ಆಜಾದ್ ಕಾಶ್ಮೀರ ಎಂದು ಕರೆದರೆ ನಮ್ಮ ದೇಶ ಅ 'ಪಾಕ್ ಆಕ್ರಮಿತ ಕಾಶ್ಮೀರ' ಎಂದು ಅಧಿಕೃ ಕರೆಯುತ್ತದೆ. ಹೀಗಾಗಿ ನಮ್ಮದೇ ನೆಲದಲ್ಲಿ ಸರ್ಜಿ ದಾಳಿ ನಡೆಸಿ ಪಾಕ್ ನೆಲದಲ್ಲಿ ನಡೆಸಿದ್ದೇವೆ ಹೇಳಿದ್ದರಿಂದ ಮೋದಿ ಸರಕಾರ ಪಿಓಕೆ ಈಗ ಪಾಕ ಭಾಗ ಎಂದು ಅಧಿಕೃತವಾಗಿ ಒಪ್ಪಿಕೊಂಡಂತಾಗಿದೆ. ನಮ್ಮ ದೇಶಕ್ಕೆ ಮೋದಿ ಸರಕಾರ ಬಗೆದ ದ್ರೋಹವ



ಚಿತ್ರ ಕೃಪೆ: ಸತೀಶ್ ಆಚಾರ್ಯ

ರಾಜಕೀಯದ ಅಬ್ಬರವಾಹನರು (ಜನರ ಕಾಂಚಾಣ, ಇವರ ವಾಂಚಾ

ಯಡ್ಡಿ ಉವಾಚ: ಯಾರು ಅರಿಯರು ನಿನ್ನ ಆ ಅಧಿಕಾರದ ಮರ್ಮ, ಸಿಎಂ ಗಾದಿ ಉಳಿಸಿಕೊಳ್ಳಲು ಕೈ ವರಿಷ್ಠರ ಪಾದಕರ್ಪಿಸಿದ ಆ ಸಾವಿರ ಕೋಟಿ. ಬಯಲಾಯಿತು ನಿನ್ನ ಬಣ್ಣ ಗೋವಿಂದರಾಜು ಡೈರಿಯಲಿ, ಇನ್ನು ನಿನ್ನ ಉಳಿಸುವೆನೆ, ನೋಡುನೋಡುತ್ತಿರು.

ಸಿದ್ದು ಉವಾಚ: ದೇಶ ಕಂಡ ಕಡು ಭ್ರಷ್ಟಾ ನೀನು, ಜೈಲಿನಲಿ ಕಳೆದ ಆ ಇಪ್ಪತ್ತೊಂದು ದಿನ ಸಾಲದಾಯಿತೇ ನಿನಗೆ? ನನಗೆ ನೀತಿ ಪಾಠ ಹೇಳುವ ನೈತಿಕತೆಯ ಹಕ್ಕು ನಿನಗಿಲ್ಲ, ಲೆಹರ್ ಸಿಂಗ್ ಡೈರಿಯಲಿ ಬಯಲಾಗಿದೆ ಕಳ್ಳ ಭ್ರಷ್ಟರಾ ಕಮಲದಾ ಮರ್ಮ.


ಯಡ್ಡಿ ಉವಾಚ: ನನ್ನನ್ನು ಅಡಿಗಡಿಗೆ ಭ್ರಷ್ಟಾ ಎಂದು ಕರೆಯಬೇಡವೋ ಮೂಢಾ, ಕರೆದರೆ ಮಾಡುವೆ ನೋಡು ಮಾನಭಂಗ. ಕಾನೂನು ಸಲಹೆ ಪಡೆದು ಹೂಡುವೆ ನೋಡು ಮಾನನಷ್ಟ ಕೇಸು. ಆಗ ಬಯಲಾಗಲಿದೆ ನೋಡು ಸೇತುವೆಯ ಅರವತ್ತೈದು ಕೋಟಿ ಲಂಚಾವತಾರಾ.

ಸಿದ್ದು ಉವಾಚ: ನಮ್ಮದು ಪಾರದರ್ಶಕ, ಸ್ಪಟಿಕದಂತಾ ಸ್ವಚ್ಛ ಆಡಳಿತ. ಸೇತುವೆ ಯೋಜನೆ ಕೈ ಬಿಟ್ಟದ್ದು ಜನರಿಗಾಗೇ ಹೊರತು ಡೈರಿಗಾಗಲ್ಲ, ನೀವು ಗೆದ್ದರೆ ತಾನೆ ಜೈಲು ತೋರಿಸುವುದು, ಈಗ ನೋಡು ನಿನ್ನ ಹಳೆಯ ಕೇಸುಗಳಿಗೆ ಕೊಡುವೆ ಜೀವದಾನ.

ಯಡ್ಡಿ ಉವಾಚ: ಜನರಿಗೆ ಗೊತ್ತೋ ನಿಮ್ಮ ಪಾರದರ್ಶಕ ಸರ್ಕಾರ, ಚುನಾವಣೆಯಲಿ ಆರ್ಜಿಸಿದಾ ಆ ನಿನ್ನ ಗೆಲುವಿನ ಮರ್ಮಾ. ಜೆಡಿಎಸ್‌ನಲಿ ಇದ್ದಾಗ ಎಲ್ಲಿ ಅ ಆ ನಿನ್ನ ಶೌರ್ಯ, ಎಲ್ಲದಕೂ ಕಾರಣವು (ಜನರ) ಕಾ ದ ಮರ್ಮ. ಹಾಕು ಕೇಸುಗಳ ಮಾಡುವೇ ನಿನ್ನ ಮಾ ಅಂತಿಂತವನಲ್ಲ ನಾನು ದೇವಾಂತಕನು ನಾನು.

ಸಿದ್ದು ಉವಾಚ: ಹಂತಕನಿಗೇ ಹಂತಕನು ರಾಮಯ್ಯಾ ಅಬ್ಬರಿಸಿ ಬೊಬ್ಬರಿದರೆ ಇಲ್ಯಾರಿಗೂ ಭ ಆರ್ಭಟಿಸಿ ಬರುತಿದೇ ನೋಡು ಚುನಾವಣೆಯ ಹ ಹಾಕು ಕೇಸುಗಳ ಮಾಡುವೇ ಮಾನಭಂಗ, ಅಂಗ ಹೋಗು ಹೋಗು ಹೋಗೆಲೋ ಶಿಕಾರಿಪುರಕೆ.

- ಆರ್.ಎನ್.ಸತ್ಯನಾರಾಯಣ
ಮೈ





...ಲಯಾಳಂಗೆ ಜಿಗಿದ ಶ್ರುತಿ




...ನ್ನಡದಲ್ಲಿ ಸಖತ್ ಬಿಜಿ ಇರುವ ಶ್ರುತಿ ...ರನ್, ಸದ್ದಿಲ್ಲದೇ ಮಲಯಾಳಂ ಸಿನಿಮಾ ...ಕ್ಕೆ ಹಾರಿದ್ದಾರೆ. ಕೈಯಲ್ಲಿ ಸ್ಟಾರ್ ನಟರ ...ಗಳಿದ್ದರೂ, ಶ್ರುತಿ ಮಾಲಿವುಡ್‌ಗೆ ...ಗಲು ಕಾರಣ, ಸಿನಿಮಾದ ಕತೆಯಂತೆ. ...ಹೊಸ ರೀತಿಯ ಕತೆ ಚಿತ್ರದಲ್ಲಿದ್ದು ...ಯಾಳಂನ ಪ್ರಸಿದ್ಧ ನಿರ್ದೇಶಕ ...ೕಯ್ ನಂಬಿಯಾರ್ ...ಕ್ಕೆ ಆಕ್ಷನ್ ಕಟ್ ಹೇಳು...ರೆ. ದಲ್ಕೈರ್ ಸಲ್ಮಾನ್ ...ಕ. ಚಿತ್ರಕ್ಕೆ 'ಸೋಲೋ' ...ು ಹೆಸರಿಡಲಾಗಿದೆ.

...ಶ್ರುತಿ ಅವರದ್ದು ವಿಭಿನ್ನ ...ವಂತೆ. ಹಾಗಾಗಿಯೇ ...ರ್ಶಕರು ಸ್ಕ್ರೀನ್ ಟೆಸ್ಟ್ ... ಮಾಡಿದ್ದಾರಂತೆ. "ನಾನು ಈ ...ರ್ಶಕರ ದೊಡ್ಡ ಅಭಿಮಾನಿ. ...ರ ಸಿನಿಮಾ ನೋಡಿದ್ದೇನೆ. ...ಜೊಂದಿಗೆ ಕೆಲಸ ಮಾಡಬೇಕು ... ಅನಿಸಿತ್ತು. ಈಗ ಅದಕ್ಕೆ ...ಾಶ ಸಿಕ್ಕಿದೆ. ಮೊದಲ ಬಾರಿಗೆ ...ಲಯಾಳಂ ಚಿತ್ರದಲ್ಲಿ ...ುತ್ತಿದ್ದೇನೆ" ಅಂತಾರೆ ಶ್ರುತಿ.

...ದ್ಯ ದರ್ಶನ್ ಅವರ ಹೊಸ ಸಿನಿಮಾದಲ್ಲಿ ಶ್ರುತಿ ನಟಿಸುತ್ತಿದ್ದಾರೆ. ...ೇ ಕಿರುಚಿತ್ರದ ನಿರ್ಮಾಣದಲ್ಲೂ ತೊಡಗಿದ್ದಾರೆ. ನಿರ್ಮಾಣ ಮತ್ತು ... ಎರಡನ್ನೂ ನಿಭಾಯಿಸಿಕೊಂಡು ಹೋಗುತ್ತೇನೆ ಅನ್ನುವುದು ಶ್ರುತಿ ...ು.

ನಿದ್ದೆಯಿಂದ ಎದ್ದ ವಿಜಯ್ ಪ್ರಸಾದ್



'ನೀರ್‌ದೋಸೆ' ಸಿನಿಮಾದ ನಂತರ ನಿರ್ದೇಶಕ ವಿಜಯ ಪ್ರಸಾದ್ ಎಲ್ಲಿದ್ದಾರೆ ಎಂಬ ಹುಡುಕಾಟ ನಡೆದಿತ್ತು. 'ನೀರ್‌ದೋಸೆ' ಯಶಸ್ವಿಯಾದರೂ ನಿರ್ದೇಶಕರು ಮಾತ್ರ ಸಿನಿಮಾ ರಂಗದಲ್ಲಿ ಕಾಣಿಸಿಕೊಂಡಿರಲಿಲ್ಲ. ಗುರುಪ್ರಸಾದ್ ರೀತಿಯಲ್ಲೇ ಅವರು ಮೂರು ವರ್ಷಕ್ಕೊಂದು ಸಿನಿಮಾ ಮಾಡುತ್ತಾರೆಂಬ ಆರೋಪ ಕೂಡ ಕೇಳಿಬಂದಿತ್ತು. ಈಗ ಎಲ್ಲ ಮಾತಿಗೂ ಉತ್ತರ ಕೊಡುವಂತೆ ನಿದ್ದೆಯಿಂದ ಎದ್ದಿದ್ದಾರೆ ವಿಜಯ ಪ್ರಸಾದ್. ತಾವೀಗ ಹೊಸ ಸಿನಿಮಾ ಮಾಡುವುದಾಗಿ ಘೋಷಿಸಿದ್ದಾರೆ. ಈ ಚಿತ್ರಕ್ಕೆ 'ಸಿಲ್ಲಿಲಲ್ಲಿ' ಖ್ಯಾತಿಯ ರವಿಶಂಕರ್ ಗೌಡ ನಾಯಕ.

ಕಾಮಿಡಿ ಚಿತ್ರಗಳಿಗೆ ಹೇಳಿಮಾಡಿಸಿದ ನಟ ರವಿಶಂಕರ್ ಗೌಡ; ಡಬಲ್ ಮೀನಿಂಗ್ ಸಂಭಾಷಣೆ ಬರೆಯುವಲ್ಲಿ ನಿಸ್ಸೀಮರು ವಿಜಯ ಪ್ರಸಾದ್. ಈ ಕಾಂಬಿನೇಷನ್ ಸಿನಿಮಾದಲ್ಲಿ ಇದೆಲ್ಲವೂ ಇರಲಿದೆಯಂತೆ.

ರವಿಶಂಕರ್ ಗೌಡ ಈ ಸಿನಿಮಾದಲ್ಲಿ ಈರೇಗೌಡ ಎಂಬ ಪಾತ್ರವನ್ನು ನಿರ್ವಹಿಸಲಿದ್ದಾರಂತೆ. ಈತ ಪಕ್ಕಾ ಪೋಲಿ ಅನ್ನುವುದು ವಿಶೇಷಣ. ಚಿತ್ರಕ್ಕೆ ಇನ್ನೂ ಟೈಟಲ್ ಇಟ್ಟಿಲ್ಲ. ಏಪ್ರಿಲ್‌ನಿಂದ ಶೂಟಿಂಗ್ ಶುರು. ಯೋಗರಾಜ್ ಭಟ್ ಬ್ಯಾನರ್‌ನಲ್ಲಿ ಚಿತ್ರ ಮೂಡಿಬರುತ್ತಿದ್ದರೂ, ಹಣ ಹಾಕುತ್ತಿರುವುದು ಮಾತ್ರ ಸುಧೀರ್ ಮತ್ತು ಸನತ್. ಎಂದಿನಂತೆ ಅನೂಪ್ ಸೀಳಿನ್ ಅವರ ಸಂಗೀತ, ಸುಜ್ಞಾನ್ ಅವರ ಸಿನಿಮಾಟೋಗ್ರಫಿ ಚಿತ್ರಕ್ಕಿದೆ.

'ಶಾದಿ ಭಾಗ್ಯ'ಕ್ಕೆ ಪವನ್ ನಾಯಕ

'ಪ್ರೀತಿ ಗೀತಿ ಇತ್ಯಾದಿ' ಸಿನಿಮಾದ ಮೂಲಕ ನಾಯಕ ನಟನಾಗಿ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದರು ನಿರ್ದೇಶಕ ಪವನ್ ಒಡೆಯರ್. ಆದರೆ, ಆ ಸಿನಿಮಾ ಅವರನ್ನು ಕೈಹಿಡಿಯಲಿಲ್ಲ. ಭಾರೀ ಸೋಲು ಅನುಭವಿಸಿದರು. ಹಾಗಾಗಿ ಮತ್ತೆ ಅವರು ಬಣ್ಣ ಹಚ್ಚುವುದಿಲ್ಲ ಎಂಬ ಮಾತು ಕೇಳಿಬಂದಿತ್ತು. ನಿರ್ದೇಶನ ಮಾಡಿಕೊಂಡು ಆರಾಮಾಗಿದ್ದ ಪವನ್, ಈಗ ಮತ್ತೊಂದು ಚಿತ್ರಕ್ಕಾಗಿ ಬಣ್ಣ ಹಚ್ಚುತ್ತಿದ್ದಾರೆ. ಈ ಬಾರಿ ಗೆಲ್ಲುವ ವಿಶ್ವಾಸ ಅವರದ್ದು.

ಪುನೀತ್, ಯಶ್ ಸೇರಿದಂತೆ ಹಲವು ಸ್ಟಾರ್ ನಟರ ಚಿತ್ರಕ್ಕೆ ತಾವೇ ಕತೆ ಬರೆದು, ನಿರ್ದೇಶನ ಮಾಡಿದ್ದ ಪವನ್, ತಾವು ನಾಯಕರಾಗಿ ನಟಿಸುತ್ತಿರುವ ಚಿತ್ರಕ್ಕೆ ಮಾತ್ರ ಎರವಲು ಕತೆಯನ್ನು ತಂದಿದ್ದಾರೆ. ತೆಲುಗು ಹಿಟ್ ಸಿನಿಮಾ 'ಪೆಳ್ಳಿ ಚೂಪುಲು' ಅನ್ನು ರಿಮೇಕ್ ಮಾಡುತ್ತಿದ್ದಾರೆ. ಈ ವಾರದಿಂದ ಚಿತ್ರದ ಶೂಟಿಂಗ್ ಶುರುವಾಗಲಿದೆ. ಅಂದುಕೊಂಡಂತೆ ಆಗಿದ್ದರೆ, ಈ ಚಿತ್ರಕ್ಕೆ ಮುರಳಿ ಮಾಸ್ಟರ್ ನಿರ್ದೇಶನ ಮಾಡಬೇಕಿತ್ತು. ಇವರು ಹಿಂದೆ ಸರಿದ ಕಾರಣಕ್ಕಾಗಿ ಶ್ರೀನರಸಿಂಹ ಅನ್ನುವವರು ನಿರ್ದೇಶನ ಮಾಡುತ್ತಿದ್ದಾರೆ. ಇವರಿಗೆ ಪವನ್ ಒಡೆಯರ್ ಚಿತ್ರದಲ್ಲಿ ಕೆಲಸ ಮಾಡಿದ ಅನುಭವವಿದೆ.

ಅಂದಹಾಗೆ ಈ ಚಿತ್ರಕ್ಕೆ ಶ್ರದ್ಧಾ ಶ್ರೀನಾಥ್ ನಾಯಕಿ. ನಾಯಕ ಪವನ್ ಹದಿನೈದು ಕೆಜಿ ತೂಕ ಇಳಿಸಿಕೊಂಡು ಕ್ಯಾಮೆರಾ ಮುಂದೆ ನಿಲ್ಲುತ್ತಿದ್ದಾರೆ.

ನಿರ್ಮಾಪಕಿ ಆಗ್ತಾರಂತೆ ರಾಧಿಕಾ

ಮದುವೆಯ ನಂತರ ರಾಧಿಕಾ ಪಂಡಿತ್ ಸಿನಿಮಾ ರಂಗದಲ್ಲೇ ಕಾಣಿಸಿಕೊಂಡಿರಲಿಲ್ಲ. ಹಾಗಾಗಿ ರಾಧಿಕಾ ಸಿನಿಮಾರಂಗ ಬಿಡುತ್ತಾರೆಂಬ ಸುದ್ದಿ ಆಗಿತ್ತು. ಅದಕ್ಕೀಗ ಸ್ಪಷ್ಟನೆ ನೀಡಿದ್ದಾರೆ. ತಾವು ಯಾವುದೇ ಕಾರಣಕ್ಕೂ ಸಿನಿಮಾ ರಂಗ ಬಿಡುವುದಿಲ್ಲ ಅಂದಿದ್ದಾರೆ. ಮದುವೆ ನಂತರ ಅವರಿಗೊಂದಿಷ್ಟು ಸಮಯ ಬೇಕಿತ್ತಂತೆ. ಹಾಗಾಗಿ ಯಾವುದೇ ಸಿನಿಮಾ ಒಪ್ಪಿಕೊಂಡಿಲ್ಲ. ಸದ್ಯಕ್ಕೆ ಒಂದು ಕತೆಯನ್ನು ಒಪ್ಪಿಕೊಂಡಿದ್ದು, ಇನ್ನೊಂದು ತಿಂಗಳ ನಂತರ ಆ ಕುರಿತು ಸಂಪೂರ್ಣ ಮಾಹಿತಿ ಕೊಡಲಿದ್ದಾರೆ. ಮಂಗಳವಾರವಷ್ಟೇ ಬರ್ತ್‌ಡೇ ಆಚರಿಸಿಕೊಂಡಿರುವ ರಾಧಿಕಾ, ತಮ್ಮ ಪತಿ ಯಶ್ ಜತೆ ಸಮಾಜ ಕಾರ್ಯದಲ್ಲೂ ತೊಡಗುವುದಾಗಿ ಹೇಳಿಕೊಂಡಿದ್ದಾರೆ. ಸದ್ಯಕ್ಕೆ ನಿರ್ಮಾಪಕಿ ಆಗುವ ಯೋಚನೆ ಮಾಡದೇ ಇದ್ದರೂ, ಮುಂದಿನ ದಿನಗಳಲ್ಲಿ ನಿರ್ಮಾಣ ಮಾಡಲುಬಹುದು ಎಂದು ಹೇಳುವ ಮೂಲಕ ಕುತೂಹಲ ಮೂಡಿಸಿದ್ದಾರೆ. ಕನ್ನಡದ ನಂಬರ್ ವನ್ ನಟಿಯಾಗಿ ಬೆಳೆದವರು ರಾಧಿಕಾ. ಹಾಗಾಗಿ ಸಹಜವಾಗಿ ಅವರ ಮೇಲೆ ದೊಡ್ಡ ಜವಾಬ್ದಾರಿ ಇತ್ತು. ಆ ಜವಾಬ್ದಾರಿಯಿಂದ ಅವರು ಕಳಚಿಕೊಳ್ಳುವುದಿಲ್ಲವಂತೆ. ಪತಿಯ ಸಪೋರ್ಟ್ ಇರುವುದರಿಂದ ಮುಂದೆಯೂ ನಟನೆಯಲ್ಲಿ ತೊಡಗುವುದಾಗಿ ಹೇಳಿದ್ದಾರೆ.

...ಂತ ದೊಡ್ಡ ದೇಶದ್ರೋಹ ಬೇರೆ ಯಾವುದಿದೆ? ...ಾಳೆ ಇದೇ ಆಧಾರದಲ್ಲಿ ಈ ಆಕ್ರಮಿತ ಕಾಶ್ಮೀರ ...) ಪಾಕಿಸ್ತಾನದ ಭಾಗ ಎಂದು ಭಾರತವೇ ಅಧಿಕೃತವಾಗಿ ...ಕೊಂಡಿದೆ ಎಂದು ವಿಶ್ವ ಸಂಸ್ಥೆಯಲ್ಲಿ ಮತ್ತು ...ರರಾಷ್ಟ್ರೀಯ ವೇದಿಕೆಗಳಲ್ಲಿ ಪಾಕಿಸ್ತಾನವು ಮೋದಿಯ ... ಭಾಷಣದ ವಿಡಿಯೋವನ್ನು ಸಾಕ್ಷಿಯಾಗಿ ತೋರಿಸಿ ...ಸಬಹುದು ಅಲ್ಲವೇ!

...ಮೋದಿ ಸರಕಾರ' ಈ ಶಬ್ದದ ಹ್ರಸ್ವರೂಪ ಮೋ.ಸ. ...ಾಗುತ್ತದೆ. ಮೋದಿ ಸರಕಾರಕ್ಕೆ 'ಮೋಸ' ಎಂಬುದೇ ...ಾದ ಹೆಸರು!

- ವೀರಪ್ಪ ಡಿ.ಎನ್. ಮಡಿಕೇರಿ

ಸಂಘಿ ಟ್ರೋಲ್‌ಗಳ ಆಟ ನಡೆಯದಿದ್ದರೆ...

...ರೆಸ್ಸೆಸ್/ಎಬಿವಿಪಿ /ಸಂಘ ಪರಿವಾರ ಇವರೆಲ್ಲರ ತಂತ್ರ ... ಆಗಿದೆ, ತಮ್ಮ ವಿರುದ್ಧ ಮಾತನಾಡುವವರನ್ನು ...ಾ ಬರೆಯುವವರನ್ನು ಸಾಮಾಜಿಕ ಜಾಲತಾಣಗಳ ...ಾಂತರ ಅಥವಾ ಪತ್ರಿಕೆಗಳ ಅಂಕಣಗಳ ಮೂಲಕ ...ಿ, ಬೆದರಿಸಿ, ಹಂಗಿಸಿ, ಗೇಲಿ ಮಾಡಿ ಮಾನಸಿಕವಾಗಿ ...ುವ ಹುನ್ನಾರ ನಡೆಸುವುದು. ಮಹಿಳೆಯರು ಇಂತಹ ...ರಕ್ಕೆ ಬೇಗ ಬಲಿಯಾಗಿ ತಮ್ಮ ಬರವಣಿಗೆ ಅಥವಾ ...ದಾನದಿಂದ ವಿಮುಖರಾಗುತ್ತಾರೆ.

...ಾರ್ಗಿಲ್ ಹುತಾತ್ಮ ಯೋಧನ ಮಗಳಾದ ದಿಲ್ಲಿಯ ...ರ್ಥಿನಿ ಗುರ್‌ಮೆಹರ್ ಕೌರ್ ವಿಷಯದಲ್ಲಿಯೂ ...ಗಳು ಇದನ್ನೇ ಮಾಡಿ ಯಶಸ್ವಿಯಾಗಿದ್ದಾರೆ. ಯಾವುದೇ ...ದಸ್ಥ ಮಹಿಳೆಗೆ ಕೊಲೆ ಮಾಡುತ್ತೇವೆ ಎಂದು ...ಿಸಿದರೂ ಅವಳು ಹೆದರಲಿಕ್ಕಿಲ್ಲ. ಆದರೆ ದೂರದಿಂದ ...ನಲ್ಲಿಯೂ ಯಾರಾದರೂ ಅತ್ಯಾಚಾರ ಮಾಡುವುದಾಗಿ ...ಿಸಿದರೆ ಸಾಕು ಅವಳು ಮಾನಸಿಕವಾಗಿ ಕುಗ್ಗಿ ...ಗುತ್ತಾಳೆ.

...ದೂರದ ಊರಿನಲ್ಲಿರುವ ಆ ಹೇಡಿಗಳು ಇಲ್ಲಿಗೆ ... ಅತ್ಯಾಚಾರ ಮಾಡುವುದು ಸಾಧ್ಯವಿಲ್ಲ ಎಂದು ...ಗೆ ಸ್ಪಷ್ಟ ಗೊತ್ತಿದ್ದರೂ ಯಾಕೋ ಈ 'ಅತ್ಯಾಚಾರ' ... ವಿಕೃತ ಶಬ್ದ ಭಾರತೀಯ ಮಹಿಳೆಯರಲ್ಲಿ ಭಾರಿ ...ೋವೈಜ್ಞಾನಿಕ ಪರಿಣಾಮ ಬೀರಿ ಸಾತ್ವಿಕ ಮಹಿಳೆ ...ನ್ನು ತಮ್ಮ ತಾತ್ವಿಕ ಗುರಿಯಿಂದ ವಿಮುಖರನ್ನಾಗಿ ...ುತ್ತದೆ. ಇದನ್ನು ನೀಚ ಕೇಸರಿ ಟ್ರೋಲ್‌ಗಳು ಚೆನ್ನಾಗಿ .... ಆದಕ್ಕಾಗಿ ಆ ಹೇಡಿಗಳು ಯಾವಾಗಲೂ ವಿರೋಧಿ ...ಳೆಯರಿಗೆ ಅತ್ಯಾಚಾರದ ಬೆದರಿಕೆ ಹಾಕುವುದು.

...ಂಡಸರಲ್ಲೂ ಕೆಲವು ದುರ್ಬಲ ಮನಸ್ಸಿನವರು ...ುಷ್ಟಿಗಾಗಿ ನಾವು ದುಷ್ಟರ ವೈರಕ್ಕೆ ಯಾಕೆ ...ಾಗಬೇಕು" ಎಂಬ ಹಿಸಿಕತನ ತೋರಿಸಿ ತಮ್ಮ ...ಂದ ದೂರ ಸರಿದು ನಿರ್ಲಿಪ್ತರಾಗುತ್ತಾರೆ. ಗಂಡಸರಿಗೆ ಕೇಸರಿ ಟ್ರೋಲ್‌ಗಳು ನಿನ್ನ ಮಗಳನ್ನು ಅಥವಾ ಪತ್ನಿಯನ್ನು ಅತ್ಯಾಚಾರ ಮಾಡುವುದಾಗಿ ಬೆದರಿಕೆ ಹಾಕಿದಾಗ, ಆ ಗಂಡಸು ಧೈರ್ಯವಂತನಾಗಿದ್ದರೂ ಅವನ ಮನೆಯ ಭಯಗ್ರಸ್ತ ಹೆಂಗಸರ ಒತ್ತಡದಿಂದಾಗಿ ತಮ್ಮ ತತ್ವನಿಷ್ಠ ಅಭಿಯಾನಗಳಿಂದ ಅಥವಾ ಬರವಣಿಗೆಗಳಿಂದ ದೂರ ಸರಿಯುವಂತಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ತತ್ವನಿಷ್ಠರ ಇಂತಹ ಮಾನಸಿಕ ಹಾಗೂ ಕೌಟುಂಬಿಕ ಒತ್ತಡಗಳ ಅರಿವು ಘಟಿಂಗ ಕೇಸರಿ ಟ್ರೋಲ್‌ಗಳಿಗೆ ಇರುವುದರಿಂದಲೇ ಅವರು ಸಾಮಾಜಿಕ ಜಾಲತಾಣಗಳನ್ನು ದುರುಪಯೋಗ ಮಾಡಿ ಮಹಿಳೆಯರಿಗೆ ಅತ್ಯಾಚಾರದ ಬೆದರಿಕೆ ಹಾಕುವುದು.

ಈ ಮನೋವೈಜ್ಞಾನಿಕ ಕುತಂತ್ರವನ್ನು ಕರ್ನಾಟಕದಲ್ಲಿ ಸಂಘಿ ಟ್ರೋಲ್‌ಗಳಿಗೆ ಬೋಧಿಸಿದ್ದು ಪೆಕ್ರಮರ್ತಿ ಇಲಿಬಲೆ ಮತ್ತು ಪರಿತಾಪ ಸಿಮ್ಮ! ಕೊನೆಗೆ ಸಂಘಿ ಟ್ರೋಲ್‌ಗಳ ಆಟ ನಡೆಯದಿದ್ದರೆ ಇವನು ತುರ್ಕರಿಗೆ ಹುಟ್ಟಿದವ ಎಂದು ನಮ್ಮನ್ನು ಹಂಗಿಸಿ ಹೇಡಿ ಸಂಘಿಗಳು ತಾವೇ ಓಡಿಹೋಗುತ್ತಾರೆ.

- ಜೆ. ರವಿಕಿರಣ, ಮೈಸೂರು



ಪ್ರಜಾಪ್ರಭುತ್ವವಾದಿಗಳು ಒಗ್ಗಟ್ಟಿನಿಂದ ಶ್ರಮಿಸಬೇಕಿದೆ

ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆ ಚುನಾವಣೆ, ಮುಂಬೈನ ಮಹಾನಗರಪಾಲಿಕೆಯ ಚುನಾವಣೆಗಳಲ್ಲಿ ಬಿಜೆಪಿಯ ಅಬ್ಬರದ ಪ್ರಚಾರಕ್ಕೆ ಚುನಾವಣಾ ಆಯೋಗದ ಅಧಿಕಾರಿಗಳು ಕುಮ್ಮಕ್ಕಿನ ಕ್ರಮ ಕೈಗೊಳ್ಳದಿರುವುದು, ಪ್ರಧಾನಮಂತ್ರಿಯಾಗಿ ಮೋದಿ ವಾರಾಣಸಿಯಲ್ಲಿ ವಿಧಾನ ಸಭಾ ಚುನಾವಣಾ ರ್‍ಯಾಲಿಗಾಗಿ ಚುನಾವಣಾ ಆಯೋಗದ ಅನುಮತಿ ದೊರಕಿಸಿಕೊಂಡಿರಲಿಲ್ಲ ಎನ್ನುವ ವರದಿಗಳು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಘೋರ ಅಪಚಾರ ತರುವಂತಹದ್ದು.

ಯಾವುದೇ ರಾಜಕೀಯ ಪಕ್ಷವಿರಲಿ, ವ್ಯಕ್ತಿ ಯಾರೇ ಆಗಿದ್ದಾಗ್ಯೂ ಕಾನೂನು ಉಲ್ಲಂಘಿಸಿದಲ್ಲಿ ಸರಿಯಾದ ಕ್ರಮಗಳನ್ನು ಜರುಗಿಸಬೇಕಿರುವುದು ಚುನಾವಣಾ ಆಯೋಗದ ಹೊಣೆ ಮತ್ತು ಧರ್ಮ. ಇಲ್ಲವಾದರೆ ನಮ್ಮ ದೇಶದ ಘನತೆಯ ಪ್ರಜಾಪ್ರಭುತ್ವ ವ್ಯವಸ್ಥೆಯ ಚುನಾವಣೆಗಳಿಗೂ, ನಿರಂಕುಶತೆಯ - ಸೇನಾ ಆಡಳಿತ ದೇಶದ ಚುನಾವಣಾ ಮಾದರಿಗಳಿಗೂ ಯಾವುದೇ ವ್ಯತ್ಯಾಸವಾಗಲಿಕ್ಕಿಲ್ಲ. ಕೊನೆಯ ಪಕ್ಷ ಮುಂಬರುವ ಎಲ್ಲ ಚುನಾವಣೆ (ಲೋಕಸಭಾ, ವಿಧಾನ ಸಭಾ, ಸ್ಥಳೀಯ ಸಂಸ್ಥೆ)ಗಳನ್ನು ಇನ್ನಷ್ಟು ಕಡಿಮೆ ಅವಧಿ, ಕಡಿಮೆ ಪ್ರಚಾರದ ಅರ್ಭಟದಲ್ಲಿ ನಿಷ್ಠುರವಾಗಿ ಚುನಾವಣೆಗಳು ನಡೆಯುವಂತೆ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಿನಿಂದ ಒತ್ತಾಯಿಸಬೇಕಿದೆ. ಆ ಮೂಲಕ ಬಾಬಾಸಾಹೇಬರ ಸಂವಿಧಾನದ ಮೂಲ ಆಶಯಗಳನ್ನು ಎತ್ತಿ ಹಿಡಿಯುವದರತ್ತ ಎಲ್ಲ ಪ್ರಜಾಪ್ರಭುತ್ವವಾದಿಗಳು, ಮಾನವ ಹಕ್ಕುಗಳ ಸಮರ್ಥಕರು ಒಗ್ಗಟ್ಟಿನಿಂದ ಶ್ರಮಿಸಬೇಕಿದೆ.

- ಲಕ್ಷ್ಮಣ ನಾಯ್ಕ್, ಬೆಳಗಾವಿ

ಪರಿತಾಪ ಸಿಮ್ಮ ಮತ್ತು ಇತರರು

ಮಧ್ಯಪ್ರದೇಶದಲ್ಲಿ ಬಿಜೆಪಿಯ ಐಟಿ ಸೆಲ್ಲಿನ ಹನ್ನೊಂದು ಜನ ಹಿಂದೂಗಳೇ ಪಾಕಿಸ್ತಾನಕ್ಕೆ ನಮ್ಮ ದೇಶದ ರಕ್ಷಣಾ ಮಾಹಿತಿಗಳನ್ನು ಕದ್ದು ಮಾರುತ್ತಿದ್ದಾಗ ಸಾಕ್ಷಿ ಸಹಿತ ಬಂಧಿಸಲಾಗಿದೆ. ತನ್ನ ಮಡಿಲಲ್ಲೇ ಇಂತಹ ದೇಶದ್ರೋಹಿಗಳನ್ನು ಸಾಕುತ್ತಿರುವ ಬಿಜೆಪಿ ಪಕ್ಷದವರೇ ಕಾರ್ಗಿಲ್ ಹುತಾತ್ಮನ ಮಗಳು ಗುರ್‌ಮೆಹರ್ ಕೌರ್‌ಳ ದೇಶಪ್ರೇಮವನ್ನು ಪ್ರಶ್ನಿಸುತ್ತಿರುವುದು ದೊಡ್ಡ ವಿಪರ್ಯಾಸವಾಗಿದೆ. ಮೈಸೂರಿನ ಸಂಸದ ಪರಿತಾಪ ಸಿಮ್ಮ ದಿಲ್ಲಿಯ ವಿದ್ಯಾರ್ಥಿನಿ ಗುರ್‌ಮೆಹರ್ ಕೌರಳನ್ನು ದೇಶದ್ರೋಹಿ ದಾವೂದ್ ಇಬ್ರಾಹಿಮನಿಗೆ ಹೋಲಿಸಿ ದೊಡ್ಡ ಸುದ್ದಿಯಾದ ಮೇಲೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಜ್ಞಾವಂತರು ಸಿಮ್ಮನಿಗೆ ಇಕ್ಕಿದ ಪೆಟ್ಟಿಗೆ ತತ್ತರಿಸಿ ಆತ ಬಾಲ ಮುದುರಿಕೊಂಡು ಮೈಸೂರಲ್ಲಿ ಅಡಗಿ ಕುಳಿತಿದ್ದ.

ಮೊದಲೆಲ್ಲಾ ಈ ಸಿಮ್ಮ ಕರ್ನಾಟಕದಲ್ಲಿ ಕೇಸರಿ ಪತ್ರಿಕೆ ಹಾಗೂ ಸುದ್ದಿ ಚಾನೆಲ್ಲುಗಳಲ್ಲಿ ತನ್ನ ವಿಷಕಾರಿ ಬರಹಗಳ ಹಾಗೂ ಮೂರ್ಖ ತರ್ಕಗಳ ಮೂಲಕ ಬೆತ್ತಲೆ ಪ್ರತಾಪ ತೋರಿಸುತ್ತಿದ್ದ. ಹಾಗಾಗಿ ಕರ್ನಾಟಕದ ಕೊಳಕು ಕರ್ನಾಟಕದ ಒಳಗೇ ಇರುತ್ತಿತ್ತು. ಆದರೆ ಮೊನ್ನೆ ಇಂಡಿಯಾ ಟುಡೇ ಇಂಗ್ಲಿಷ್ ಚಾನೆಲ್‌ನವರು ಇವನನ್ನು ತಡಕಿ ಪ್ಯಾನೆಲ್ ಚರ್ಚೆಗೆ ಎಳೆದು ತಂದು ಕಾರ್ಗಿಲ್ ಹುತಾತ್ಮನ ಮಗಳಾದ ಗುರ್‌ಮೆಹರ್ ಕೌರ್‌ಳ ಬಗ್ಗೆ ಆತನ ಕೊಳಕು ಟ್ವೀಟ್ ಬಗ್ಗೆ ಹಾಗೂ ದೇಶದ್ರೋಹ -ದೇಶಪ್ರೇಮದ ವ್ಯಾಖ್ಯೆ ಏನು ಎಂದು ಕೇಳಿದಾಗ ಈ ಸಿಮ್ಮ ಘರ್ಜಿಸುವುದು ಬಿಡಿ ಚಿಕ್ಕ ಇಲಿಯಂತಾಗಿ ಶುದ್ಧ ಇಂಗ್ಲಿಷ್‌ನಲ್ಲಿ ಮಾತನಾಡಲು ಅಗದೇ ತಪ್ಪು ತಪ್ಪು ಇಂಗ್ಲಿಷ್‌ನಲ್ಲಿ ಹಾರಿಕೆ ಉತ್ತರ ಕೊಡುವುದನ್ನು ನೋಡಿದಾಗ ಇವನು ಸಂಸದ ಆಗುವುದು ಬಿಡಿ ಸಾಧಾರಣ ಸರಕಾರಿ ಗುಮಾಸ್ತ ಆಗುವುದಕ್ಕೂ ಲಾಯಕ್ಕಿಲ್ಲ ಎಂದು ವೀಕ್ಷಕರಿಗೆ ಮನವರಿಕೆಯಾಗಿತ್ತು.

ಇಂಗ್ಲಿಷ್ ಮಾತ್ರವಲ್ಲ ಈತನಿಗೆ ಹಿಂದೀ ಸಹ ಸರಿಯಾಗಿ ಬರುವುದಿಲ್ಲ. ಒಟ್ಟಾರೆ ಈತ ಮೈಸೂರಿನ ಹಾಗೂ ಕನ್ನಡಿಗರ ಮಾನ ದೇಶವಿಡೀ ಹರಾಜು ಹಾಕಿಬಿಟ್ಟ. ಟಿವಿ ಕ್ಯಾಮರಾದ ಎದುರು ಪರಿತಾಪ ಸಿಮ್ಮನ ತಡವರಿಕೆ ನೋಡಿದಾಗ ನನಗೆ ನಮ್ಮ ಜಿಲ್ಲೆಯ ಕೋಮು ವಿಷಸರ್ಪಗಳಾದ ಕಲ್ಲಡ್ಕ ಭಟ್ಟ ಮತ್ತು ಬಜರಂಗಿ ಮುಖಂಡ ಶರಮ್ ಪಿಂಪ್-ವೆಲ್ ಇವರು ಸಹ ಸಾರ್ವಜನಿಕ ಸಭೆಯಲ್ಲಿ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮಾತನಾಡುವಾಗ ಹಾಸ್ಯಾಸ್ಪದ ತಪ್ಪುಗಳನ್ನು ಮಾಡಿ ನಗೆಪಾಟಲಿಗೆ ಈಡಾಗುತ್ತಿದ್ದದ್ದು ನೆನಪಾಗುತ್ತಿತ್ತು.


- ಅಭಿಷೇಕ್ ಪಡಿವಾಳ್, ಸುಳ್ಯ



ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...kesh70@rediffmail.com ಗೆ ನುಡಿ ...ಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ಕ್ರಿಯೆಗಳನ್ನು 9980331427 ನಂಬರ್‌ಗೂ ...ಿ ಮತ್ತು ಚುಟುಕಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 22-03-2017 RNI No. KARKAN200

ಗೌರಿ ಲಂಕೇಶ್ ಪತ್ರಿಕೆಯ
12ನೇ ವಾರ್ಷಿಕೋತ್ಸ



ಮಾರ್ಚ್ 12, 2017
ಭಾನುವಾರ

ಕುವೆಂಪು ಕನ್ನಡ ಭವನ,
ವಿದ್ಯಾನಗರ ರಸ್ತೆ,
ದಾವಣಗೆರೆ

ಬೆಳಗ್ಗೆ 10: 30– 12:00

ಉದ್ಘಾಟನಾ ಸಮಾರಂಭ

ಸ್ವಾಗತ: ಗಿರೀಶ್ ತಾಳಿಕಟ್ಟೆ
ಪ್ರಸ್ತಾವನೆ: ಅನೀಸ್ ಪಾಷ
ನಿರೂಪಣೆ: ರಾಜಶೇಖರ ಗುಂಡಗತ್ತಿ
ಗೌರವ ಕಾರ್ಯದರ್ಶಿ, ಕ.ಸಾ.ಪ.

ಉದ್ಘಾಟನೆ:
ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ
ಸಾಣೆಹಳ್ಳಿ ಮಠ

'ಲಂಕೇಶ್ ಇದ್ದಿದ್ದರೆ': ಪ್ರೊ. ರಾಜೇಂದ್ರ ಚೆನ್ನಿ
ಲಂಕೇಶ್ ಮತ್ತು ದಾವಣಗೆರೆ:
ಡಾ.ಹೆಚ್.ಎಸ್.ಮಂಜುನಾಥ ಕುರ್ಕಿ
ಜಿಲ್ಲಾಧ್ಯಕ್ಷರು, ಕಸಾಪ

ಪುಸ್ತಕಗಳ ಬಿಡುಗಡೆ: ಪ್ರೊ. ಬಿ.ವಿ.ವೀರಭದ್ರಪ್ಪ

ಕಾಟನ್ ನಗರಿಯಿಂದ ಸ್ಮಾರ್ಟ್ ನಗರಿ
ಸ್ಥಿತ್ಯಂತರ ಮತ್ತು ಅವಾಂತರ:
ಹೆಚ್. ಕೆ. ರಾಮಚಂದ್ರಪ್ಪ, ಕಾರ್ಮಿಕ ಮುಖಂಡರು
ಅಧ್ಯಕ್ಷತೆ: ಗೌರಿ ಲಂಕೇಶ್
ಗೌರವ ಉಪಸ್ಥಿತಿ
ಬಿ.ಎಂ. ಹನುಮಂತಪ್ಪ, ಸುಭಾಷ್‌ಚಂದ್ರ,
ಎಸ್.ಎಫ್. ಯೋಗಪ್ಪನವರ್,
ಟಿ.ಎನ್.ಷಣ್ಮುಖಪ್ಪ, ಈ. ಚಂದ್ರ ತಾಳಿಕಟ್ಟೆ,
ಬಿ.ಎಚ್. ಗುರುಮೂರ್ತಿ, ಚಂದ್ರಶೇಖರ್
ತೋರಣಘಟ್ಟ, ಆವರಗೆರೆ ರುದ್ರಮುನಿ,
ಹೊನ್ನೂರು ಮುನಿಯಪ್ಪ, ಹೆಗ್ಗಡೆ ರಂಗಪ್ಪ,
ವಾಸನ ಓಂಕಾರಪ್ಪ. ಹೆಚ್. ಮಲ್ಲೇಶ್
ವಂದನಾರ್ಪಣೆ: ಮೌಲಾ ನಾಯ್ಕ

12:00–12:30 ಟೀ/ಕಾಫಿ ಬ್ರೇಕ್

ಸಹಯೋಗ:
ದಾವಣಗೆರೆ ಜಿಲ್ಲಾ
ಕನ್ನಡ ಸಾಹಿತ್ಯ
ಪರಿಷತ್

12:30–2:00

ಗೋಷ್ಠಿ 1: ಹೊಸ ತಲೆಮಾರಿನ ಮಹಿಳೆ
ನಿರೂಪಣೆ:
ಯಶೋಧ, ಪ್ರಾಧ್ಯಾಪಕರು, ಚಿತ್ರದುರ್ಗ
ಹೊಸ ಕಾಲದ ದುಡಿಮೆ ಮತ್ತು ಮಹಿಳೆ:
ಡಾ. ನೇತ್ರಾವತಿ ಕೆ.ವಿ. ಸಂಶೋಧಕರು
ಹೊಸ ಕಾಲದ ಕಲೆ–ಸಾಹಿತ್ಯದಲ್ಲಿ ಮ
ಸಂಜ್ಯೋತಿ, ಲೇಖಕಿ
ಹೊಸ ತಲೆಮಾರಿನ ಮಹಿಳಾ ಚಳವಳಿ:
ಮಲ್ಲಿಗೆ, ಕರ್ನಾಟಕ ಜನ ಶಕ್ತಿ
ಅಧ್ಯಕ್ಷತೆ: ಮಲ್ಲಿಕಾ ಘಂಟಿ
ಕುಲಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಂದನಾರ್ಪಣೆ: ಜಬೀನಾ ಖಾನಂ

2:00–2.30 ಊಟದ ಬಿಡು

2:30– 6:00

ಗೋಷ್ಠಿ 2: ಪಂಚ ರಾಜ್ಯಗಳ ಚುನಾವ
ವಿಶ್ಲೇಷಣೆ ಹಾಗೂ ಕರ್ನಾಟಕದಲ್ಲಿ ಪರ್ಯಾ
ರಾಜಕಾರಣದ ಸಾಧ್ಯತೆಗಳು
ನಿರೂಪಣೆ: ಬಸವರಾಜು ದೊಡ್ಡಮನಿ
ಅಧ್ಯಕ್ಷರು, ಜಿಲ್ಲಾ ವರದಿಗಾರರ ಒಕ್ಕೂಟ
ಚರ್ಚೆಗೆ ಚಾಲನೆ: ನೂರ್ ಶ್ರೀಧರ್

ವಿಚಾರ ಮಂಡನೆ
ಶಿವಕುಮಾರ್ (ಆಪ್)
ಹರಿರಾಮ್ (ಬಿಎಸ್‌ಪಿ)
ರಾಘವೇಂದ್ರ ಕುಷ್ಟಗಿ (ಮಹಾಮೈತ್ರಿ)
ದೊಡ್ಡಿಪಾಳ್ಯ ನರಸಿಂಹಮೂರ್ತಿ (ಸ್ವರಾಜ್ ಇಂಡಿ
ಎಸ್.ವೈ.ಗುರುಶಾಂತ್ (ಸಿಪಿಐ–ಎಂ)
ಕೆ.ಎಲ್.ಅಶೋಕ್
(ಕರ್ನಾಟಕ ಕೋಮು ಸೌಹಾರ್ದ ವೇದಿಕೆ)

ಅಧ್ಯಕ್ಷತೆ
ಡಾ. ಸಿದ್ದನಗೌಡ ಪಾಟೀಲ
ಸಂಪಾದಕರು, ಹೊಸತು ಪತ್ರಿಕೆ
ವಂದನಾರ್ಪಣೆ: ಎನ್.ಎಸ್. ರಾಜು
ಗೌರವ ಕಾರ್ಯದರ್ಶಿ, ಜಿಲ್ಲಾ ಕಸಾಪ

ಎಲ್ಲರಿಗೂ ಸ

ಹಾಡುಗಳು
ಇಪ್ಟಾ ತಂಡದ ಐರಣಿ ಚಂದ್ರು
ಮತ್ತು ಸಂಗಡಿಗರಿಂದ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com